UNIVERSAL LIBRARY
OU_202284
UNIVERSAL LIBRARY

# ದಶಪ್ರಕರಣ
# ಪರಿಚಯಃ

ಈ ಗ್ರಂಥದ

ಯಾವತ್ತೂ ಹಕ್ಕುಗಳು ಗ್ರಂಥಕರ್ತರ ಸ್ವಾಧೀನದಲ್ಲಿವೆ.

( *All Rights Reserved.* )

ಆನಂದತೀರ್ಥ ಗ್ರಂಥಮಾಲಾ ಪುಷ್ಪ ೧.

# ದಶಪ್ರಕರಣ ಪರಿಚಯ.

ಲೇಖಕರುঃ—

**ಗುರುರಾಜ, ಭೀ. ಜೋಶಿ. ಬಿ. ಎ.**

ಬಾಗಲಕೋಟ.

ವಿದ್ಯಾರಣ್ಯ ಮುದ್ರಾಮಂದಿರ ಭಾಗಲಕೋಟ.

ಶಕೆ ೧೮೪೬.

**ವಾಣೀವಿಲಾಸ ಸಂಸ್ಕೃತ ಪಾಠಶಾಲೆ ಬಾಗಲಕೋಟ.**

**ಬೆಲೆ ೧೨ ಆಣೆ.**

# ವಿಜ್ಞಾಪನೆ.

ಬಾಗಲಕೋಟೆಯಲ್ಲಿ ನ್ಯಾಯ ವೇದಾಂತ ವಿಶಾರದರಾದ ವೆ॥ ರಾ॥ ರಾ॥ ಮಳಗಿ ವೇದವ್ಯಾಸಾಚಾರ್ಯರು 'ವಾಣೀವಿಲಾಸ ಸಂಸ್ಕೃತ ಪಾಠಶಾಲಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅಲ್ಲಿ ೧೦-೧೨ ಜನ ವಿದ್ಯಾರ್ಥಿಗಳಿಗೆ ಅನ್ನ ವಸ್ತ್ರಗಳನ್ನು ಕೊಟ್ಟು, ನ್ಯಾಯ ವೇದಾಂತ ಪಾಠಪ್ರವಚನೆಗಳನ್ನು ಮಾಡುತ್ತಿರುವರು. ದೂರ ದೂರ ದೇಶಗಳಲ್ಲಿ ವಾಸಿಸುವ ಸಜ್ಜನರುಗಳಿಗೂ ಸತ್ತತ್ವಗಳ ಜ್ಞಾನವನ್ನು ಕೊಡಬೇಕೆಂದು ಬಯಸಿ ಶ್ರೀಮದಾನಂದತೀರ್ಥರ ಗ್ರಂಥಗಳನ್ನು ಕನ್ನಡದಲ್ಲಿ ಚಿಕ್ಕ ಚಿಕ್ಕ ನಿಬಂಧಗಳ ರೂಪದಿಂದಾಗಲೀ, ಪ್ರಬಂಧಗಳ ರೂಪದಿಂದಾಗಲೀ, ವೈಷ್ಣವವೃಂದದ ಸೇವೆ ಮಾಡುವದೂ ಈ ಪಾಠಶಾಲೆಯ ಕರ್ತವ್ಯವೆಂದು ತಿಳಿದು ಈ ಪಾಠಶಾಲೆಯಿಂದ '**ಆನಂದ ತೀರ್ಥ ಗ್ರಂಥಮಾಲೆಯು**' ಪ್ರಾರಂಭಿಸಲ್ಪಟ್ಟಿದೆ. ಈ ಮಾಲೆಯಲ್ಲಿ ಕಾಲಕಾಲಕ್ಕೆ ಅರವಿಂದಗಳು ಅರಳುವವು. ಈ ಮಾಲೆಯಿಂದ ಬರುವ ಪ್ರಾಪ್ತಿಯು ಈ **ವಾಣೀವಿಲಾಸ** ಪಾಠಶಾಲೆಗೆ ಕೊಡಲ್ಪಡುವದು. ಸದ್ವೈಷ್ಣವ ವೃಂದವು ಸ್ವಹಸ್ತ ಪರಹಸ್ತಗಳಿಂದ ಈ ಪುಣ್ಯಕಾರ್ಯಕ್ಕೆ ನೆರವಾಗಿ ಶ್ರೀಯೋಭಾಗಿಗಳಾಗುವರೆಂದು ನೆರೆನಂಬಿದ್ದೇನೆ.

**ಲೇಖಕ,**

# ಮುನ್ನುಡಿ.

**सच्छास्त्र लेखनेऽस्मये मनोनीत्वा सदामुदा ।**
**पुनातुमां पांडुरंगः पुंडरीक वरप्रदः ॥**

ಶ್ರೀಮಧ್ವಾಚಾರ್ಯರ ಮೂವತ್ತೇಳು ಗ್ರಂಥಗಳ ಪರಿಚಯುವನ್ನು ಕನ್ನಡಿಗರಿಗೆ ಮಾಡಿಕೊಡುವದೇ ಈ ಮಾಲೆಯು ಮುಖ್ಯ ಉದ್ದೇಶವಾಗಿದೆ. ಈ ಮತೀಯರಿಗಷ್ಟೇ ಅಲ್ಲ; ಸಾಮಾನ್ಯ ಕನ್ನಡಿಗರಿಗೂ ಈ ಪುಷ್ಪಗಳು ಉಪಯೋಗ ಬೀಳುವವೆಂದು ಪೂರ್ಣ ನಂಬಿಗೆಯುವೆ. ಕನ್ನಡ ವಾಙ್ಮಯುವು ಸರ್ವಾಂಗ ಸುಂದರವಾಗಬೇಕಾದರೆ ವೇದಾಂತ ಜ್ಞಾನವು ಅತ್ಯವಶ್ಯವಾದದ್ದು. ಕಾವ್ಯದ ಪ್ರತಿಭೆಗೂ, ಕಾದಂಬರಿಯು ಕಲ್ಪನೆಗೂ, ನಾಟ್ಯದ ರಚನೆಗೂ, ಇತಿಹಾಸದ ಸಂಗತಿಗೂ ವೇದಾಂತ ಜ್ಞಾನವು ತುಂಬಾ ಅನುಕೂಲವಾಗಿರುವದು.

ಈ ಮಾದರಿಯು ಗ್ರಂಥಗಳನ್ನು ಬರಿಯುಲಿಕ್ಕೆ ತುಂಬಾ ಹುರಿದುಂಬಿಸಿದ ಶ್ರೀ. ಕರ್ಪೂರ ಶ್ರೀನಿವಾಸರಾಯರಿಗೂ, ಆಲೂರ ವೆಂಕಟರಾಯರಿಗೂ, ಕೆಂಭಾವಿ ರಾಘವೇಂದ್ರರಾಯರಿಗೂ ಇನ್ನೂ ಅನೇಕ ಸದ್ಗೃಹಸ್ಥರಿಗೂ ನಾನು ಋಣಿಯಾಗಿದ್ದೇನೆ.

ಇದೇರೀತಿಯಾಗಿ ಪರಮ ಕೃಪಾಳುವಾದ ಪಾಂಡುರಂಗನು ವಾಙ್ಮಯ ಸೇವೆಯನ್ನು ಮಾಡಲಿಕ್ಕೆ ನನಗೆ ಸದ್ಬುದ್ಧಿಯನ್ನೂ ಪ್ರೋತ್ಸಾಹವನ್ನೂ ಕೊಡಲೆಂದು ನಾನು ಬೇಡಿಕೊಳ್ಳುತ್ತೇನೆ.

ಬಾಗಲಕೋಟೆ,
ರಕ್ತಾಕ್ಷಿನಾಮ ಸಂವತ್ಸರ ಶ್ರಾವಣ ಶುದ್ಧ ಪ್ರತಿಪದಾ.

ಗುರುರಾಜ ಭೀ. ಜೋಶಿ,
ಗ್ರಂಥಕರ್ತಾ.

# ಅನುಕ್ರಮಣಿಕೆ.


೧ ಕತ್ತಲೆಯು ತಾಹರಿದು ಮತ್ತೆ ಬೆಳಕಾಯಿತೈ ... ... ... ೧

೨ ಸುಳ್ಳಿನ ಸುಳಿದಾಟ ... ... ... ... ... ೧೩

೩ ಸಿನೇಮಾ ... ... ... ... ... ೨೩

೪ ಜಟ್ಟಿಗಳ ಕುಸ್ತಿ ... ... ... ... ... ೩೩

೫ ಬಿಚ್ಚು ನುಡಿಗಳು ... ... ... ... ... ೪೦

೬ ಬ್ರಹ್ಮಪುರದ ಮಾರ್ಗ ... ... ... ... ... ೪೩

೭ ಇಬ್ಬಣವಿಲ್ಲದೇ ನಿಬ್ಬಣವೆಂತು ? ... ... ... ... ೪೭

೮ ಶ್ರುತಿದೇವಿಯು ತತಿಯು. ... ... .... ... ೫೮

೯ ತತ್ವವೃಕ್ಷ. .... ... .... ... ... ೬೬

೧೦ ಉಪಸಂಹಾರ. ... ... .... .... ... ೭೬

ಶ್ರೀಮನ್ಮಧ್ವಮುನಿಗಳಿಗೆ

ಅರ್ಪಿಸಿದ್ಧೇನೆ.

ಗ್ರಂಥಕರ್ತಾ.

ಎಳೆಹೊಯ್ಯುವವು. ಈ ಜಗತ್ತಿನಲ್ಲಿ ಹುಟ್ಟಿದ ಪ್ರತಿ ಒಬ್ಬ ಮನುಷ್ಯನಿಗೂ ಒಂದಿಲ್ಲೊಂದು ದಿನ ಈ ಕಲ್ಪನೆಗಳು ಬಾರದಿರವು ಮನುಷ್ಯನು ತನ್ನ ಆಯುಷ್ಯದಲ್ಲಿ ಏರಬೇಕಾದ ಉಚ್ಚ ಶಿಖರದ ಮೊದಲನೇ ಪಾವಟಿಗಿಯೇ ಇದು.

ಅನಿತ್ಯ ಸುಖಕ್ಕೆ ಹಂಬಲಿಸುತ್ತ ಹೇಸಿ ವಿಷಯಗಳಲ್ಲಿ ದೃಢವಾಗಿ ಮಗ್ನವಾದ ಈ ಮನುಷ್ಯನ ಚಿತ್ತವು ಅಸಂತೋಷದ ಬಿರುಗಾಳಿಗೆ ಚದರಿ ತಲ್ಲಣಿಸ ಹತ್ತಿತೆಂದರೆ ಅದರ ಬಹು ದಿವಸದಿಂದ ತಳ ಊರಿದ ಬೇರುಗಳು ಕಿತ್ತಿ ಹೋಗುವವು. ಆ ಮೇಲೆ ಅದು ನಿತ್ಯ ಸುಖವು ಎಲ್ಲಿರುವದೆಂದು ಶೋಧಿಸ ಹತ್ತುವದು.

ಮನುಷ್ಯನು ಆತುರನಾಗಿ ಈ ಸುಖದ ಬೆನ್ನು ಹತ್ತಲು ಬಿಸಲ್ಗುದುರೆಯಂತೆ ಅದು ಮುಂದೆ ಮುಂದೆ ಓಡಹತ್ತುವದು; ಆಗ ಅವನು ತನ್ನ ಗತಿಯನ್ನು ತಡೆದು ಸಮಾಧಾನದಿಂದ ‘ ನಾನು ಯಾರು? ” “ ನನ್ನಂತಹ ಅನೇಕ ಜೀವರಾಶಿಗಳಿಂದ ತುಂಬಿದ ಈ ವಿಶ್ವವು ಯಾವದು ? ” ನಾನು ಹುಡಕುವ ನಿತ್ಯ ಸುಖವು ಯಾವದು ? ” ಎಂದು ತನಗೆ ತಾನೇ ಪ್ರಶ್ನ ಮಾಡಿ ಕೊಳ್ಳುವನು. ಈ ಕೂಟ ಪ್ರಶ್ನವನ್ನು ಚನ್ನಾಗಿ ಬಿಡಿಸದಲೆ ಮುಂದೆ ಗತಿಯಿಲ್ಲೆಂದು ನಿಶ್ಚೈಸುವನು.

**ಈ ಪ್ರಶ್ನವನ್ನು ಬಿಡಿಸುವ ಬಗೆ ಹೇಗೆ ! !**

ಈ ತ್ರಿಪುಟಿಯೇ ಸರ್ವಶಾಸ್ತ್ರಗಳಿಗೆ ಮೂಲಾಧಾರವು. ಸಾಮಾನ್ಯವಾಗಿ ಮನುಷ್ಯನು ‘ ನಾನು ’ ಎಂದರೆ ಅಖಂಡವಾದ ವಿಶ್ವದಲ್ಲಿ ಘಟಕ ವಸ್ತು ಮಾತ್ರನೆಂದು ನಂಬಿ ನಿತ್ಯ ಸುಖವು ಈ ವಿಶ್ವದ ಬಹಿರ್ಘಟನೆಯಲ್ಲಿಯೇ ಅಡಕವಾಗಿರುವದೆಂದು ಗ್ರಹಿಸಿ ಈ ಮೂರು ಪ್ರಶ್ನಗಳನ್ನು ಬಿಡಿಸಲಾರಂಭಿಸಿದಂತೆ ಅನೇಕ ಭೌತಿಕ ಶಾಸ್ತ್ರಗಳು ಉತ್ಪನ್ನವಾಗುವವು. ಆದರೆ ‘ ನಾನು ’ ಎಂಬದು ಒಂದು ನಿತ್ಯವಾದ ಆತ್ಮವು; ಈ ಜಗತ್ತು ನನ್ನಂತಹ ಅನೇಕ ಆತ್ಮರಿಂದಲೂ ಜಡವಸ್ತುಗಳಿಂದಲೂ ತುಂಬಿದ ದಿಕ್ಕಾಲಗಳಿಂದ

ಮಿತವಾದ ಪದಾರ್ಥವು. ಮತ್ತು ತನ್ನ ನಿತ್ಯಸುಖವು ತನ್ನಲ್ಲಿಯೂ ಈ ವಿಶ್ವದಲ್ಲಿಯೂ ಈ ವಿಶ್ವದ ಹೊರಗೂ ವ್ಯಾಪಿಸಿರುವದೆಂದು ಗ್ರಹಿಸಿ ಆಧ್ಯಾತ್ಮಿಕ ಶಾಸ್ತ್ರಗಳು ಹೊರಡುವವು.

ಈ ಪೂರ್ವದಲ್ಲಿ ಆಧ್ಯಾತ್ಮಿಕ ದೃಷ್ಟಿಯಿಂದ ಈ ತ್ರಿಪುಟಿವನ್ನು ಅನೇಕರು ಅನೇಕ ರೀತಿಯಿಂದ ಬಿಡಿಸಿರುವರು. ಅದರಲ್ಲಿ ಯಾವ ವಿವೇಚನೆಯು ಯುಕ್ತವಾಗಿ ತೋರುವದೆಂಬದನ್ನು ವಾಚಕರ ನಿದರ್ಶನಕ್ಕೆ ತರುವದೇ ಈ ಪುಟ್ಟ ಲೇಖನದ ಉದ್ದೇಶವು

ಕಗ್ಗತ್ತಲೆಯು ಮುಸುಕಿದೆ; ದೂರದಲ್ಲಿ ಏನೊ ಬಿದ್ದಂತೆ ಕಾಣುತ್ತದೆ. ಸಮೀಪದಲ್ಲಿ ಹೋಗಿ ನೋಡಲು ಇದು ಸರ್ಪವಿರಬಹುದೆಂದು ಭಾಸವಾಗ ಹತ್ತಿತು. ಪ್ರಕಾಶವನ್ನು ತಂದು ಪರೀಕ್ಷೆ ಮಾಡಲು ಹಗ್ಗದ ತುಂಡು ಡೊಂಕ ಡೊಂಕಾಗಿ ಬಿದ್ದಿತ್ತು. ಎಂಥ ಮೋಸವಾಯಿತು ? ಸ್ವಲ್ಪ ಹೊತ್ತು ಕುಳಿತು ವಿಚಾರಿಸ ತೊಡಗಿದೆನು. ಏನಿದು ಕಣ್ಣಿಗೆ ಸರ್ಪದಂತೆ ಕಂಡು ಬೆಳಕಿಗೆ ಹಗ್ಗವಾಗಬೇಕೆ ? ಹೀಗೆಯೇ ನಾವು ದಿನಾಲು ನೋಡುವ ವಸ್ತುಗಳೆಲ್ಲವೂ ನಮಗೆ ಕಂಣಕಟ್ಟುತ್ತಿರಬಹುದೇನು? ಉನ್ನತವಾದ ಗಿರಿ ಶಿಖರಗಳು ಅಗಾಧವಾದ ಉದಧಿಯು, ಅನಂತವಾದ ಆಕಾಶವು— ಇವೆಲ್ಲವೂ ಈಗ ನಮ್ಮ ಕಣ್ಣಿಗೆ ತೋರಿದರೂ ಮುಂದೆ ಮಂಜಿನ ಹೊಗೆಯಂತೆ ಬಯಲಾಗಿ ಎಲ್ಲವು ಶೂನ್ಯವಾಗುವದೋ ಛೀ! ಹಾಗಾಗಲಿಕ್ಕಿಲ್ಲ !! ಈ ಅಂಧಕಾರದಲ್ಲಿ ತೋರಿದ ಸರ್ಪವು ಸುಳ್ಳಾದರೂ, ಹಗ್ಗವು ಉಳಿಯುತಲ್ಲಪ್ಪಾ !! ಹೀಗಿರಬಹುದು; ಇದು ಒಬ್ಬ ಜಾದುಗಾರನ ಆಟವು; ಹಿಡಿಮಣ್ಣು ಕೈಯಲ್ಲಿ ಹಿಡಿದು ಉಡಿತುಂಬ ರುಪಾಯಿಗಳನ್ನು ಸುರಿಸುವನು. ಅದರಂತೆಯೇ ಈ ಜಗತ್ತಿನ ಜಾದುಗಾರನು ತನ್ನ ಇಚ್ಛೆಗೆ ಬಂದಂತೆ ಮುಚ್ಚು ಮರಿಮಾಡಿ ಎಲ್ಲವನ್ನು ತನ್ನ ಅದ್ಭುತ ಶಕ್ತಿಯಿಂದ ತೋರಿಸಿ ಅವನ ಮಾಟದ ಒಡ್ಡತವನ್ನು ತಿಳಿದೊಡನೆಯೇ ಎಲ್ಲವನ್ನು ಬಯಲು ಮಾಡಿ ತಾನೊಬ್ಬನೇ ಖೊಳ್ಳೆಂದು ನಗುತ್ತಾನೆ. ನಿಜ! ಈ ಕಣ್ಣಿಗೆ ತೋರುವದೆಲ್ಲವೂ ಕನಸು ಎಚ್ಚತ್ತ ಕೂಡಲೇ ಬೆಳಕೇಬೆಳಕು. ಮುಂದೇನು ? ಮುಂದೆ ಒಂದು ಉಳಿ

ಯುವದು; ಅದು ನಿನ್ನೆಯೂ ಇತ್ತು; ಈಹೊತ್ತೂ ಇದೆ. ಆದುಗೋಸು ಗವೇ ಅದು 'ಸತ್' ಅಂದರೆ ಯಾವಾಗಲೂ ಬಾಳುವೆಯುಳ್ಳದ್ದು; ಇಂತಹ ಅದ್ಭುತವಾದ ಜಾದೂ ಮಾಡಲಿಕ್ಕೆ ಜ್ಞಾನ ಬೇಡವೇ? ಆದುದರಿಂದ ಅದು 'ಚಿತ್;' ಈ ಮೋಹ ಜಾಲವೆಲ್ಲವೂ ಅದರ ಲೀಲೆಯು; ಆನಂದದ ಹೊರಸೂಸು; ಅದು ಆನಂದ

ಈ ಎಲ್ಲವನ್ನು ಯಾರು ವಿಚಾರ ಮಾಡಿದರು? ನಾನಲ್ಲವೇ! ನಾನು ಯಾರು? ನನಗೆ ಷಡ್ರಸಾನ್ನ ಭೋಜನದ ರುಚಿಯು ಗೊತ್ತುಂಟು; ಉತ್ತಮ ವಾಸನೆಯುಳ್ಳ ಸುಗಂಧ ದ್ರವ್ಯಗಳನ್ನು ಅನುಭವಿಸಲು ನನ್ನ ಮೂಗು ಬಹು ಚುರುಕಾಗಿದೆ. ನನ್ನ ಕಣ್ಣುಗಳು ಸುಂದರ ವಸ್ತುಗಳನ್ನು ನೋಡಿ ಮತ್ತವಾಗಿರುವವು. ನಾನು ಕಿವಿಗಳಿಂದ ಸಂಗೀತದ ಇಂಪನ್ನು ತಿಳಿಯುವೆನು. ಸ್ಪರ್ಶದಿಂದ ಪದಾರ್ಥಗಳನ್ನು ಗ್ರಹಿಸಲು ನನ್ನ ತ್ವಚವು ಸಿದ್ಧವದೆ. ಹೀಗೆ ಬೇರೆ ಬೇರೆ ವಿಷಯಗಳನ್ನು ಬೇರೆ ಬೇರೆ ಇಂದ್ರಿಯಗಳಿಂದ ನಾನು ತಿಳಿದು ಕೊಳ್ಳುವೆನು; ವಿಷಯಗಳು ಬೇರೆಯಾದರೂ ನನಗೆ ಆಗುವ ತಿಳುವಳಿಕೆಯು ಒಂದೇ; ಆ ತಿಳುವಳಿಕೆಯೇ 'ನಾನು' ಇದು ನನ್ನಗಲಿ ಎಂದೂ ಇಲ್ಲಾ!

ಇನ್ನೊಂದು ಬಹು ವಿಲಕ್ಷಣವದೆ! ನನ್ನಂತೆ ಅನ್ಯರನ್ನು ನಾನೆಂದೂ ಪ್ರೀತಿಸುವದಿಲ್ಲ. ನನಗೆ ಪತ್ನಿಯಲ್ಲಿ ಪ್ರೇಮವದೆ; ಮಕ್ಕಳಲ್ಲಿ ಅನುರಾಗವದೆ; ಮಿತ್ರರಲ್ಲಿ ಸ್ನೇಹವದೆ; ಉಚ್ಚರಲ್ಲಿ ಭಕ್ತಿ ನೀಚರಲ್ಲಿದಯಾ. ಆದರೆ ಸ್ವಲ್ಪ ಸೂಕ್ಷ್ಮ ದೃಷ್ಟಿಯಿಂದ ವಿಚಾರಮಾಡಲು ಎರಡನೇಯವರ ಮೇಲೆ ತೋರಿಸುವ ನನ್ನ ಪ್ರೇಮವೆಲ್ಲವೂ ನನ್ನ ಮೇಲಿನ ಪ್ರೇಮದಿಂದಲೇ ಎಂಬದು ಸರ್ವರಿಗೂ ನಿದರ್ಶನಕ್ಕೆ ಬಾರದೆ ಇರದು. ಆದುದರಿಂದಲೇ 'ನಾನು, ಎಂಬದು ಪ್ರೇಮ, ಆನಂದವು.

ಸಾರಾಂಶ 'ನಾನು' ಎಂಬ ವಸ್ತುವು ನಿತ್ಯವಾದುದು; ಅದು ಜ್ಞಾನವು; ಅದು ಆನಂದವು; ಆದರೆ ನನಗೆ ಈ ದುಃಖಗಳೇಕೆ? ಅನೇಕ ಕೊರತೆಗಳು ನನ್ನನ್ನೇಕೆ ಬಾಧೆ ಬಡಿಸಬೇಕು? ಸಹಜ!! ಒಬ್ಬ ಕುರುಬನು

ಒಂದು ದಿವಸ ಅಡವಿಯಲ್ಲಿ ಕುರಿಗಳನ್ನು ಮೇಯಿಸುತ್ತಿದ್ದನು. ಒಂದು ಚಿಕ್ಕದಾದ ಪೊದೆಯ ಕೆಳಗೆ ಹುಲಿಯಮರಿಯೊಂದು ಹಸಿವೆ ನೀರಡಿಕೆಗಳಿಂದ ಬಳಲಿ ಬಾಯಿಬಿಡುವದನ್ನು ನೋಡಿ ಕನಿಕರಪಟ್ಟು ತನ್ನ ಹಿಂಡಿಗೆ ತಂದು ಅದಕ್ಕೆ ಕುರಿ ಹಾಲನ್ನು ಕುಡಿಸಿದನು. ಹೀಗೆ ಎರಡು ಮೂರು ದಿವಸಗಳಲ್ಲಿಯೇ ಅದು ಚೇತರಿಸಿಕೊಂಡು ಕುರಿಮರಿಗಳ ಕೂಡ ಓಡಾಡಹತ್ತಿತು ಎಷ್ಟೋ ದಿವಸಗಳಾದಮೇಲೆ ಒಂದುದಿನ ಕುರಿಗಳಕೂಡ ಅದು ಹಳ್ಳಕ್ಕೆ ನೀರು ಕುಡಿಯಲಿಕ್ಕೆ ಹೋಯಿತು. ಕೆಳಕ್ಕೆ ನೋಡಿದೊಡನೆಯೇ ಅದರ ಮನಸ್ಸಿನಲ್ಲಿ ಅನೇಕ ಕಲ್ಪನೆಗಳು ಬರಹತ್ತಿದವು "ಸುತ್ತುಮುತ್ತಲಿನ ಪ್ರಾಣಿಗಳ ದೇಹವು ಕಪ್ಪಾಗಿರುವದು; ನನ್ನ ದೇಹವು ಮಾತ್ರ ಹಳದೀ ಬಣ್ಣದಿಂದ ಹೊಳೆಯುತ್ತಿರುವದು. ಕಪ್ಪುಪಟ್ಟಿಗಳು ಬಹು ಅಂದವಾಗಿರುವವು. ನಾನು ಈ ಜಾತಿಯವನಲ್ಲ" ಎಂದ ವಿಚಾರಿಸುತ್ತಲೇ ಅದರ ಮೈಯಲ್ಲಿ ಚೇತನವು ಹರಿಯಹತ್ತಿತು. ಹಲ್ಲುಗಳು ತಿಕ್ಕಹತ್ತಿದವು. ಬಾಲವು ನೇಟಾಗಿ ನಿಂತಿತು. ಕಾಲುಗಳ ಪಂಜರಗಳೊಳಗಿಂದ ಉಗುರುಗಳು ಹಣಕಿ ಹಾಕಹತ್ತಿದವು ಕೂಡಲೆ ತಾನು ಕುರಿಯಲ್ಲ ಹುಲಿಯೆಂಬುವದು ನಿಶ್ಚಯವಾಗಿ ಎಲ್ಲಕುರಿಗಳನ್ನು ಮುರಿದು ತಿಂದಿತು.

'ನಾನು ಯಾರೆಂಬದು ನನಗೆ ನಿಶ್ಚಯವಾಗಿ ತಿಳಿಯುವವರೆಗೆ ಈ ಸುಖದುಃಖಗಳು ನನ್ನಮೇಲೆ ಹರಿದು ಬೀಳುವವು. ನಾನು ಹುಲಿ ಎಂಬುದು ತಿಳಿದೊಡನೆಯೇ ನನ್ನ ಮೇಲೆ ಸಾಗಿಬರುವ ಎಲ್ಲ ಕುರಿಗಳನ್ನು ಕ್ಷಣಮಾತ್ರದಲ್ಲಿ ನಾಶಮಾಡಿ, ಸಮೀಪದಲ್ಲಿರುವ ಸಚ್ಛಿಖರದ ಮೇಲೆ ಕುಳಿತು, ತಿಳುವಳಿಕೆಯಿಂದ ಸರ್ವವನ್ನು ನೋಡಿ, ಹೆಚ್ಚಿಚ್ಚಾಗಿ ಬರುವ ಆನಂದದ ಸ್ವಚ್ಛ ತೆರೆಗಳಿಗೆ ಮೆಚ್ಚಿ ಮೈಮರೆಯುವೆನು. ನನಗೆ ಆಗ ತಿಳುವಳಿಕೆಯೊಂದನ್ನುಳಿದು ( ಚೈತನ್ಯವನ್ನು ಬಿಟ್ಟು ) ಎಲ್ಲವಸ್ತುಗಳು ಅಳಿಸಿಹೋಗುವವು. ಜಾದೂಗಾರನೂ ಇಲ್ಲ. ನಾನೂ ಇಲ್ಲ. ದಿಕ್ಕಾಲಗಳೆಂಬ ಭವ್ಯವಾದ ಉಕ್ಕಿನ ಗೋಡೆಗಳು ಕಾದು ಕರಗುವವು ಗಿರಿ ಗಹ್ವರಗಳು ನೀರಾಗುವವು. ಮನೆಮಾರುಗಳು ನೆಲಸಮವಾಗುವವು. ನಾನು

ನೀನೆಂಬ ಭೇದವು ಹೇಳು ಹೆಸರಿಲ್ಲದೇ ಹೋಗುವದು. ಜಾದೂ ಆಟವು ಮುಗಿಯಿತು.

ಹಾಗಾದರೆ ನಾನೂ ಆ ಜಾದೂಗಾರನೂ ಒಂದೇನು ? ಅಥವಾ ನಾನೇ ಆ ಜಾದೂಗಾರನೋ ? ಹೇಗಾದರೂ ಆಗಲಿ- ಈ ಆಟವು ಮುಗಿದ ವೇಳೆ ಉಳಿಯುವದು ಒಂದು. ಅದು ತಿಳುವಳಿಕೆ ಅಥವಾ ಜ್ಞಾನ; ಸಂಪೂರ್ಣ ಆನಂದ ನಾನೂ ಜಾದೂಗಾರನೂ ಈ ಜಗತ್ತು ಸರ್ವವೂ ದೂರಾಗುವವು. ಆದುದರಿಂದಲೇ ನಾನೂ ಆ ಜಾದೂಗಾರನು ಒಂದು; ಈ ಜಗತ್ತು ಸುಳ್ಳು. ಕಣ್ಣಿಗೆ ಮಾತ್ರ ಕಾಣುವದು. ಮುಂದೆ ಸ್ವಪ್ನದಂತೆ ಹಾರಿಹೋಗುವದು !!

ಸಾರಾಂಶ ನಾನು, ಎಂಬುದು ನಿತ್ಯವಾದ ಜ್ಞಾನಾನಂದಾತ್ಮಕವಾದ ಆತ್ಮವು. ಜಾದೂಗಾರನು ಪರಬ್ರಹ್ಮನು; ಅವನು ಸಚ್ಚಿದಾನಂದ ಸ್ವರೂಪನು. ಈ ಜಗತ್ತೆಲ್ಲವೂ ಕಂಣಿಗೆ ಮೋಸ, ಸುಳ್ಳು, ಅಥವಾ ಮಿಥ್ಯಾ ಚೈತನ್ಯ ಒಂದೇ ಸತ್ಯವಾದ ವಸ್ತುವು ಹಾಗಾದರೆ ಜೀವನು ' ನಾನು ' ಸುಳ್ಳೇನು ? ಛೇ ಹಾಗಲ್ಲ. ಅದುಗೋಸುಗವೇ ಜೀವಬ್ರಹ್ಮರು ಒಂದು ಎಂದು ಹೇಳುವರು. ಆದರೆ ನಾನು ಸದಾ ದುಃಖಿ ಪರತಂತ್ರ ಅಜ್ಞಾನಿ ; ಬ್ರಹ್ಮನು ಮಾತ್ರ ಸ್ವತಂತ್ರ ಸರ್ವಜ್ಞನು ಹೀಗೆ ವಿರುದ್ಧವಾದ ಇವೆರಡು ವಸ್ತುಗಳು ಒಂದು ಹೇಗೆ ?

ಈಗ ಎರಡು ಕಾಜಿನ ಪಾತ್ರೆಗಳಲ್ಲಿ ನೀರು ತುಂಬಿವೆಯೆಂದು ತಿಳಿಯೋಣ. ನಮಗೆ ದೂರದಿಂದ ಒಂದು ಕಾಜಿನ ಪಾತ್ರೆಯಲ್ಲಿಯ ನೀರು ಕಪ್ಪಾಗಿಯೂ ಇನ್ನೊಂದರಲ್ಲಿಯ ನೀರು ಕೆಂಪಾಗಿಯೂ ತೋರುತ್ತವೆ. ಆದರೆ ಸ್ವಲ್ಪ ಸಮೀಪಕ್ಕೆ ಹೋಗಿ ನೋಡಲು, ಎರಡೂ ಪಾತ್ರೆಗಳಲ್ಲಿದ್ದ ನೀರು ಬೆಳ್ಳಗೆ ಇವೆ ಎಂದು ಮನಗಂಡೆವು ವಸ್ತುತಃ ಎರಡೂ ಪಾತ್ರೆಗಳಲ್ಲಿದ್ದ ನೀರು ಬೆಳ್ಳಗಿದ್ದರೂ, ಒಂದು ಪಾತ್ರೆ ಕಪ್ಪಾದ ಮೂಲಕ ಅದರಲ್ಲಿಯ ನೀರು ಕಪ್ಪಾಗಿಯೂ, ಇನ್ನೊಂದು ಪಾತ್ರೆಯು ಕೆಂಪಾಗಿದ್ದ ಮೂಲಕ ಅದ

ರಲ್ಲಿಯು ನೀರು ನಮಗೆ ಕೆಂಪಾಗಾಗಿಯೂ ತೋರಿದವು. ನೀರು ಒಂದೇ ಬಿಳೀದು; ಅದರಲ್ಲಿ ತೋರಿದ ಕಪ್ಪು, ಕೆಂಪು ಗುಣಗಳು ಆ ಕಾಜಿನ ಪಾತ್ರೆಗಳ ಸಂಬಂಧದಿಂದ ಅದಕ್ಕೆ ಅಂಟಿಕೊಂಡಿರುವವು. ಹಾಗೆಯೇ ನಮಗೆ ತೋರತಕ್ಕ ಸುಖದುಃಖಗಳೂ ಜ್ಞಾನಾಜ್ಞಾನಗಳೂ ಸ್ವಾತಂತ್ರ್ಯ ಪಾರತಂತ್ರ್ಯಗಳೂ ಚೈತನ್ಯದ ನಿಜವಾದ ಸ್ವರೂಪವಲ್ಲ; ಈ ಚೈತನ್ಯವು ಚೈತನ್ಯ ರೂಪದಿಂದ ಒಂದು. ನೀರಿಗೆ ಕಾಜಿನ ಪಾತ್ರೆಯು ತನ್ನ ಗುಣಗಳನ್ನು ಕೊಟ್ಟಂತೆ ಈ ಚೈತನ್ಯನಿಗೂ ಒಂದು ಕಾಜಿನ ಪಾತ್ರೆಯುಂಟು. ಅದು ಅವಿದ್ಯಾ ಅಥವಾ ಮಾಯಾ. ಈ ಮಾಯಾ ಎಂಬ ಹೊದಿಕೆಯಿಂದ ಒಂದೇ ಒಂದು ಚೈತನ್ಯವು ಈ ಜಗತ್ತಿನ ರಂಗಭೂಮಿಯ ಮೇಲೆ ಸುಖದುಃಖಗಳಿಗೆ ಗುರಿಯಾದ ಅನೇಕ ಜೀವಗಳ ವೇಷವನ್ನೂ, ಸ್ವತಂತ್ರ ಸರ್ವಜ್ಞನಾದ ಸೃಷ್ಟಿಕರ್ತನ ನಟವನ್ನೂ ತೋರಿಸುವದು. ಆದುದರಿಂದಲೇ ಚೈತನ್ಯ ಒಂದೊಬ್ಬಳಿದು ಸರ್ವವೂ ಮಿಥ್ಯಾ.

ರಾತ್ರಿಯು ಬಹಳಾಯಿತೆನಿಸಹತ್ತಿತು ವಿಚಾರ ಭಾರದಿಂದ ತಲೆಯು ದಣಿದು ವಿಶ್ರಮಿಸಬೇಕೆಂದು ಅಲ್ಲಿಯೇ ಕಲ್ಲಿನ ಮೇಲೆ ಮೆಲ್ಲನೆ ಬಿದ್ದುಕೊಂಡೆನು; ನಿದ್ರೆಗೆ ಪರವಶನಾದೆನು. ವಿಚಾರಗಳು ಮಾತ್ರ ಸಾಲುಗಾರರಂತೆ ನನ್ನ ಬೆನ್ನು ಬಿಡಲಿಲ್ಲ. ಅವೇ ವಿಚಾರಗಳೇ ಅಸ್ತವ್ಯಸ್ತವಾಗಿ ಮನಃಪಟಲದ ಮೇಲೆ ಮೂಡಹತ್ತಿದಂತೆ ಒಂದು ಬಹು ವಿಚಿತ್ರವಾದ ಕನಸು ಕಂಡೆನು. ಗಾಢವಾದ ಅಂಧಃಕಾರದಲ್ಲಿ ಮೋಡ ಕವಿದು ಮುಗಿಲನ್ನು ಹೊಡೆದೋಡಿಸುವ ಚಂದ್ರಮನಂತೆ ಶಾಂತವಾದ ಒಂದು ಮೂರ್ತಿಯು ಮುಗಳ್ನಗೆಯ ಅಟ್ಟಹಾಸದಲ್ಲಿ ತಟ್ಟನೇ ಕಣ್ಣೆದುರಿಗೆ ನಿಂತಿತು. ಇವನ ಮಾತಿನಲ್ಲಿ ವಂಚನೆಯು ಸ್ವಲ್ಪು ಕೂಡಾ ಇಲ್ಲವೆಂದು ತೋರಿಸುವಂತೆ ತುಟಿಗಳು ಅರಳಿದೊಡನೆಯೇ ದಂತಗಳ ಸ್ವಚ್ಛ ಪ್ರಕಾಶವನ್ನು ಬೀರಹತ್ತಿ ಮೆಲ್ಲನೇ ಮಾತನಾಡಹತ್ತಿದನು. "ತಮ್ಮಾ, ಅಡವಿಯಲ್ಲಿ ದಾರೀ ತಪ್ಪಿಸಿಕೊಂಡಿರುವಿ, ನಾನು ಮಾರ್ಗವನ್ನು ತೋರಿಸುವೆನು ಬರುವಿಯಾ?" ಸ್ವಾಮೀ ತಮ್ಮ ಅರ್ಥವು ನನಗೆ ತಿಳಿಯಲಿಲ್ಲ. ನಾನು ಹಿಡಿದ ಮಾರ್ಗವು

ತಪ್ಪೆಂದು ತೋರಿಸದ ಹೊರ್ತು ನಾನು ಯಾರನ್ನೂ ಹಿಂಬಾಲಿಸುವದಿಲ್ಲೆಂದು ಪ್ರತಿಜ್ಞಾ ಮಾಡಿರುವೆನು.

ಸ್ವಾಪ್ನವ್ಯಕ್ತಿ " ಒಳ್ಳೇದು ನಿನ್ನಂತೆಯೇ ಆಗಲಿ, ನೀನು ಬಿಡಿಸಿದ ತ್ರಿಪುಟವು ಯುಕ್ತವಲ್ಲ. ಜೀವಬ್ರಹ್ಮರು ಒಂದು; ಚೈತನ್ಯ ಒಂದ ನ್ನುಳಿದು ಸರ್ವವೂ ಸುಳ್ಳು; ಇದೇ ನಿನ್ನ ವಿಚಾರದ ಸಾರಾಂಶವು ನನ್ನದೊಂದು ಪ್ರಶ್ನವಿದೆ. ಜೀವಬ್ರಹ್ಮರು ಒಂದು ಎಂದರೆ ಅವರಿಗೆ ಐಕ್ಯ ಉಂಟೆಂದು ಹೇಳಿದಂತಾಯಿತು ಆ ಐಕ್ಯವು ಬ್ರಹ್ಮವೋ ಬ್ರಹ್ಮನಿಂದ ಭಿನ್ನವಾದ ವಸ್ತುವೋ ? "

**ನಾನು** ' ಆ ಐಕ್ಯವೇ ? ಅದು ಬ್ರಹ್ಮನಿಂದ ಭಿನ್ನವಾದದ್ದು.

**ಸ್ವಾಪ್ನವ್ಯಕ್ತಿ** " ಭಿನ್ನವಾದದೇ! ಹಾಗಾದರೆ ಬ್ರಹ್ಮ ಒಂದನ್ನುಳಿದು ಎಲ್ಲವೂ ಸುಳ್ಳು; ಎಂದ ಮೇಲೆ ಐಕ್ಯವೂ ಸುಳ್ಳಾಯಿತಲ್ಲಪ್ಪಾ ! "

**ನಾನು** " ಹಾಗಲ್ಲ ಅದು ಬ್ರಹ್ಮನಿಂದ ಭಿನ್ನವಾದರೂ ಬ್ರಹ್ಮನಂತೆಯೆ ಸತ್ಯವಾದುದು. "

**ಸ್ವಾ. ವ್ಯ.** ಹಾಗಾದರೆ ಚೈತನ್ಯ ಒಂದೇ ಸತ್ಯ. ಅದನ್ನು ಬಿಟ್ಟು ಎಲ್ಲವೂ ಮಿಥ್ಯಾ ಎಂಬ ನಿನ್ನ ಮತವು ತಪ್ಪಾಗುವದಿಲ್ಲವೇ ಯಾಕಂದರೆ ಬ್ರಹ್ಮನನ್ನುಳಿದು ಐಕ್ಯವೂ ಒಂದು ಸತ್ಯವೆಂದು ಹೇಳುವಿ. "

**ನಾನು** " ಬೇಡ ಹೋಗಲಿ ! ಆ ಐಕ್ಯವೂ ಬ್ರಹ್ಮನೇ, ಎಂದಮೇಲೆ ಅದೂ ಸತ್ಯವಾದುದೇ.

**ಸ್ವಾ. ವ್ಯ.** ಒಳ್ಳೇದು ! ಈ ಐಕ್ಯವನ್ನು ನೀನೇ ತಿಳಿದಿರುವಿಯಾ ?

**ನಾನು** ಇಲ್ಲ ಸ್ವಾಮೀ ! ನನಗೆ ಅದರ ಅನುಭವವಿಲ್ಲ! ಅನುಭವ ಬಂದೊಡನೆಯೇ, ನಾನು ಮುಕ್ತನೇ !

**ಸ್ವಾ. ವ್ಯ.** ಇರಲಿ. ನೀನು ಬ್ರಹ್ಮನಲ್ಲವೇ ?

**ನಾನು.** ಅಹುದು ನಾನು ಬ್ರಹ್ಮನೇ.

**ಸ್ವಾ ವ್ಯ.** ಬ್ರಹ್ಮನಿಗೆ ತನ್ನ ಸ್ವರೂಪವು ಸದಾ ತಿಳಿಯುವದಿಲ್ಲವೇ? ಎಂದ ಮೇಲೆ ಬ್ರಹ್ಮನಾದ ನಿನಗೆ ಈ ಕಾಲದಲ್ಲಿ ಆ ಐಕ್ಯದ ಅನುಭವವು ಯಾಕೆ ಬರಬಾರದು ! ಯಾಕಂದರೆ ಆ ಐಕ್ಯವು ಬ್ರಹ್ಮಸ್ವರೂಪವೇ ಎಂದು ನೀನೇ ಈಗ ಅನ್ನಲಿಲ್ಲವೇ ! ಆದುದರಿಂದ ನಿನಗೆ ಈಗಲೇ ಮುಕ್ತಿಯು ಯಾಕಾಗಬಾರದು ?

**ನಾನು** ಸ್ವಾಮೀ ಸ್ವಲ್ಪ ತಾಳಿ ! ನಾನು ಬ್ರಹ್ಮನೇನೋ ನಿಜ ! ಐಕ್ಯವೂ ಬ್ರಹ್ಮಸ್ವರೂಪವು; ಆದರೂ ನನ್ನ ಬ್ರಹ್ಮಜ್ಞಾನವು ಹರಕು ಮುರಕಾಗಿದೆ. ವಿಚಾರ ಮಾಡಿಮಾಡಿ ಅನುಭವ ರಸದಿಂದ ನನ್ನ ಜ್ಞಾನವು ತುಂಬಿ ತುಳಕಹತ್ತಿತೆಂದರೆ ಆಗ ಐಕ್ಯವೆಂಬ ಅಂಕುರವು ಹುಟ್ಟುವದು. ಈಗ ಮಾತ್ರ ನನಗೆ ಠಳಠಳಕು ಬ್ರಹ್ಮಜ್ಞಾನವದೆ.

**ಸಾ ವ್ಯ.** ತಮ್ಮಾ! ನಿನ್ನ ಅಭಿಪ್ರಾಯವನ್ನು ನೀನು ವಿಶದವಾಗಿ ನನ್ನೆದುರಿಗಿಡದಿದ್ದರೂ, ಅದರ ಮರ್ಮವನ್ನು ನಾನು ತಿಳಿದೆನು! ಈಗ ನಿನಗೆ ರಾಮರಾಯರ ಮೋರೇ ಗುರುತು ಅದೆ ಅವರು ಯಾವ ಊರವರು ಯಾರ ಮಕ್ಕಳು ಇದು ನಿನಗೆ ಗೊತ್ತಿಲ್ಲ. ಹಾಗೆಯೇ ಸಾಮಾನ್ಯವಾದ ಬ್ರಹ್ಮಜ್ಞಾನವು ನಿನಗದೆ. ಆದರೆ ನಾನೂ ಬ್ರಹ್ಮನೂ ಒಂದು ಎಂಬ ವಿಶೇಷಾಕಾರದಿಂದ ಬ್ರಹ್ಮಜ್ಞಾನವಿಲ್ಲ. ಅಂತಹ ಜ್ಞಾನವಾದ ಕೂಡಲೇ ಮನುಷ್ಯನು ಮುಕ್ತನಾಗುವನು. ಇದೇ ಅಲ್ಲವೇ ನಿನ್ನ ಅಭಿಪ್ರಾಯ.

**ನಾನು**—ಅಹುದು ಸ್ವಾಮೀ !

**ಸ್ವಾ. ವ್ಯ.** ತಮ್ಮಾ ನಿನ್ನ ಮತದಂತೆ ಬಹ್ಮ ಸ್ವರೂಪವು ಎಂತಹದು?

**ನಾನು**—ಅದು ಅಖಂಡ ಯಾವ ಧರ್ಮಗಳೂ ಇಲ್ಲ. ಈಗ ನೋಡಿ! ನನ್ನಲ್ಲಿ ಅನೇಕ ಧರ್ಮಗಳಿವೆ. ನಾನು ನಮ್ಮಪ್ಪನ ಮಗನು; ಅಪ್ಪನ ಮುದ್ದು; ಅಕ್ಕನ ತಮ್ಮಾ, ಹೀಗೆ ನಾನೊಬ್ಬನಾದರೂ ನನ್ನಲ್ಲಿ ಅನೇಕ ವಿಶೇಷಗಳಿವೆ. ಆದರೆ ಬ್ರಹ್ಮ ಮಾತ್ರ ನಿರ್ವಿಶೇಷವಾದ ವಸ್ತುವು. ಅದರಲ್ಲಿ ಯಾವಧರ್ಮವೂ ಇಲ್ಲ.

ಸಾ. ವ್ಯ. ಹಾ! ಈಗ ನೋಡು! ನೀನು ಐಕ್ಯವೆಂಬ ವಿಶೇಷಾಕಾರದಿಂದ ಬ್ರಹ್ಮಜ್ಞಾನವಿಲ್ಲೆಂದು ಹೇಳುವಿ. ಮತ್ತು ಬ್ರಹ್ಮನಲ್ಲಿ ಯಾವ ಧರ್ಮವೂ ಇಲ್ಲ. ಯಾವ ವಿಶೇಷವು ಇಲ್ಲ. ಅದು ಇರುವದು ಒಂದು ಅಖಂಡ; ಎಂದ ಮೇಲೆ ಬ್ರಹ್ಮಜ್ಞಾನವಾದರೆ ಅವೆಲ್ಲವು ನಿನಗೆ ತಿಳಿದಿರಬೇಕು. ಅದರಲ್ಲಿ ಸ್ವಲ್ಪ ಗೊತ್ತಾಗಿದೆ; ಇನ್ನು ಸ್ವಲ್ಪ ತಿಳಿಯಬೇಕಾಗಿದೆ ಎಂದು ಬ್ರಹ್ಮನವಿಷಯದಲ್ಲಿ ಮಾತಾಡ ಬರುದೆ,? ಎಂದ ಮೇಲೆ ನಿನಗೆ ಈಗೇ ಮುಕ್ತಿಯು ಯಾಕೆಸಿಗಬಾರದು !!

ನಾನು—ಸ್ವಾಮೀ! ಬ್ರಹ್ಮವು ನಿತ್ಯ ಸಿದ್ಧವಾದ ಅಖಂಡ ವಸ್ತುವು. ಆದರೂ ನಮಗೆ ಒಂದು ಗಾಢವಾದ ಹೊದಿಕೆ ಇರುವದು. ಸೂರ್ಯನು ಆಕಾಶದಲ್ಲಿ ಪ್ರಕಾಶಿಸುತ್ತಿದ್ದರೂ ಮೋಡಗಳು ಕವಿದು ಕಗ್ಗತ್ತಲೆಯಾಯಿತೆಂದರೆ ನಮಗೆ ಕಾಣದಾಗುವನು ಅದರಂತೆ ಬ್ರಹ್ಮನು ನಿತ್ಯ ಪ್ರಕಾಶಮಾನನಾಗಿದ್ದರೂ, ಅಜ್ಞಾನವೆಂಬ ಹೊದಿಕೆ ಇರುವದರಿಂದ ನಮಗೆ ಅವನ ಸ್ವರೂಪವು ತಿಳಿಯುವದಿಲ್ಲ ಆದುದರಿಂದಲೇ ನಾವಿನ್ನೂ ಮುಕ್ತರಾಗಿಲ್ಲ.

ಸ್ವಾ. ವ್ಯ. ಮಗುವೇ ಎಂಥ ವಿಚಾರವಿದು! ಈ ಅಜ್ಞಾನವು ಯಾವ ವಸ್ತುವನ್ನು ಮುಚ್ಚುವದು! ಸೂರ್ಯನು ಮೋಡಗಳಿಂದ ನಮಗೆ ಕಾಣದಿದ್ದರೂ ತನ್ನ ಸ್ವರೂಪವು ತನಗೆ ತಿಳಿಯುವದೋ ಇಲ್ಲವೋ! ಅದೇಕೆ! ನಿನ್ನನ್ನು ಒಂದು ಕೋಣೆಯಲ್ಲಿ ಹಾಕಿದರೆ ನೀನು ಅನ್ಯರಿಗೆ ಕಾಣದಿದ್ದರೂ ನಿನಗೆ ಕಾಣುವದಿಲ್ಲೇನು! ಅಜ್ಞಾನವು ಬ್ರಹ್ಮನಿಗೆ ಆವರಿಸಿದ್ದರೆ ಅನ್ಯರಿಗೆ ಬ್ರಹ್ಮಜ್ಞಾನವಾಗದೇ ಹೋಗಲಿ! ಬ್ರಹ್ಮನಿಗೆ ತನ್ನ ಸ್ವರೂಪಜ್ಞಾನ ಮಾಡಿಕೊಳ್ಳಲಿಕ್ಕೆ ಯಾವ ಅಜ್ಞಾನ ತಾನೇ ಅಡ್ಡಿಮಾಡೀತು. ಈ ಜಗತ್ತಿನಲ್ಲಿ ಎಲ್ಲವೂ ಬ್ರಹ್ಮವು. ಎಂದ ಮೇಲೆ ಅಜ್ಞಾನವು ಯಾರಿಗೆ ಮುಸುಗು ಹಾಕಬೇಕು? ವಿಚಾರ ಮಾಡು,

ನನ್ನ ವಿಚಾರವು ಕುಂಠಿತವಾಯಿತು. ನನ್ನ ವಿಚಾರದ ಅದ್ಭುತವಾದ ಮಂದಿರದ ತಳಹಾಸಿಗೆಯೇ ಅಜ್ಞಾನವಾಗಿತ್ತು. ಅದೇ ಕುಸಿಬೀಳಹತ್ತಿದಮೇಲೆ ಮಂದಿರವು ನೆಲಕ್ಕುರುಳಿದ್ದಲ್ಲಿ ಆಶ್ಚರ್ಯವೇನು?

**ಸ್ವಾ. ವ್ಯ.** "ತಮ್ಮ ವಿಷಯವು ಗಂಭೀರವಾದುದು. ಹಾಳುಹರಟೆ ಕೊಚ್ಚುವ ಮಾತು ಇದಲ್ಲ. ಶಾಂತಚಿತ್ತನಾಗಿ ಕೇಳು. ಈ ಸಂಸಾರದಲ್ಲಿ ಸುಖದುಃಖಗಳ ತೆರೆಗಳು ನಮ್ಮನ್ನು ಮನಬಂದಂತೆ ಹೊಯದಾಡಿಸುವದು ನಿನಗೆ ವಿದಿತವಿದೆ. ಅದು ನಮ್ಮ ಅಜ್ಞಾನ ಮೂಲಕ ವೆಂಬುದನ್ನಾದರೂ ನೀನು ಗ್ರಹಿಸಿರುವಿ. ಈ ಅಜ್ಞಾನ ಸಾಗರವನ್ನು ದಾಟಿಯೇ ನಿತ್ಯ ಸುಖದ ನಡುಗಡ್ಡೆಗೆ ತಲ್ಪಬೇಕೆಂಬ ನಿನ್ನ ಸದಿಚ್ಛೆಯೂ ವಿಹಿತವಾದುದೇ. ಆದರೂ 'ನಾನು ನೀನೆಂಬ' ಭೇದವಿಲ್ಲದೇ ಎಲ್ಲವೂ ಒಂದು; ಈ ಭೇದವು ಅಜ್ಞಾನ ಮೂಲಕ' ವೆಂಬ ಮತವು ತಪ್ಪು. ನಿಜವಾಗಿ ಎಲ್ಲವೂ ಬ್ರಹ್ಮವಾದರೆ ಅಜ್ಞಾನವು ಯಾರಿಗೆ ತಾನೇ ಆವರಿಸಬೇಕು? ಬ್ರಹ್ಮನಿಗೆ? ಛೀ! ಮಗುವೆ ಷಡ್ಗುಣೈಶ್ವರ್ಯ ಸಂಪನ್ನನೂ ಸಚ್ಚಿದಾನಂದ ಸ್ವರೂಪನೂ ಪ್ರಾಕೃತ ಗುಣಗಳಿಂದ ರಹಿತನೂ ಆದ ಮಹಾ ಪುರುಷನಿಗೆ ಸಾಮಾನ್ಯ ಜನರಂತೆ ಅಜ್ಞಾನವೆ! ಸುಖದುಃಖಗಳ ಕ್ಲೇಶವೇ!! ಸರ್ವ ಬ್ರಹ್ಮಾಂಡವನ್ನು ನಿರ್ಮಿಸಿ ಒಳಗೂ ಹೊರಗೂ ವ್ಯಾಪಿಸಿ ಎಲ್ಲ ತಮಸ್ಸಿಗೆ ಅತೀತನೆನಿಸಿಕೊಂಡು ಪುನಃ ಅವನಿಗೆ ಸಂಸಾರವೇ! ಅವನೇ ಕಷ್ಟಪಟ್ಟು ಜ್ಞಾನಸಂಪಾದಿಸಿ ಮೋಕ್ಷವನ್ನು ಹೊಂದಬೇಕೇ ಏನು!! ಹಣೇಬರಹ!! 'ಯಾರು ನನ್ನನ್ನು ನಿರಂತರವಾಗಿ ಚಿಂತಿಸುವರೋ ಅವರಿಗೆ ಈ ಸಂಸಾರದ ಕಷ್ಟವನ್ನು ಸಡಿಲಿಸಿ ಮೋಕ್ಷವನ್ನು ಕೊಡುವೆನೆಂದು ಕೈಯೆತ್ತಿ ಮೂರುಲೋಕಗಳಿಗೆ ಸಾರಿ ಹೇಳುವ ಆ ಪುರುಷನಿಗೆ ಸಂಸಾರಬಂಧ, ಸಂಸಾರಮೋಕ್ಷ!! ಚನ್ನಾಗಿದೆ! ತಮ್ಮ ಮೋಹವಲ್ಲಿ ಬೀಳಬೇಡ!! ಇದು ನೋಡು! ಅಜ್ಞಾನವೇ ಈ ಜಗತ್ತಿನಲ್ಲಿ ಇಲ್ಲದೊಡೆ ಯಾರು ಗುರುಗಳು ಯಾರು ಶಿಷ್ಯರು ಯಾರಿಗೆ ಉಪದೇಶ? ನಿನಗೆ ಭಗವಂತನಲ್ಲಿ ವಿಶ್ವಾಸ ವಿಲ್ಲವೇ!" ಈ ಲೋಕದಲ್ಲಿ ನಾಶ ಹೊಂದುವ ಶರೀರಗಳುಳ್ಳ ಜೀವಚೈತನ್ಯ ಒಂದು; ಅವಿನಾಶಿ

ಯಾದ ಪ್ರಕೃತಿಚೈತನ್ಯ ಮತ್ತೊಂದು; ಇವೆರಡಕ್ಕೂ ಉತ್ತಮನಾದವನು ಪರಮಾತ್ಮನು ಬೇರೆ ಎಂದು ಗೀತೆಯಲ್ಲಿ ಹೇಳಿಲ್ಲವೇ. ಇಗೋ ಅರುಣೋದಯವಾಗಹತ್ತಿತು ಏಳು; ಜಾಗ್ರತನಾಗು."

ಹೀಗನ್ನುತ್ತಲೇ ಆ ವ್ಯಕ್ತಿಯ ಆಕಾರವು ಮುಗುಳುನಗೆಯ ಬೆಳಕಿನಲ್ಲಿ ಮುಳುಗಿ ಹೋಯಿತು ಎಚ್ಚತ್ತೆನು !!

# ೨ನೇ ಪ್ರಕರಣ.

## ಸುಳ್ಳಿನ ಸುಳಿದಾಟ.

( ಉಪಾಧಿಖಂಡನದ ಆಧಾರದಿಂದ ಬರೆದದ್ದು )

ತಿಳಿಯು ತಿಳಿಯದ್ದನ್ನು ತಿಳಿಸಿಕೊಡುವದು. ಜ್ಞಾನವು ಬೆಳೆಯಬೇಕಾದರೆ, ಹೊಸ ವಿಷಯಗಳನ್ನು ತಿಳಿಯಬೇಕಾದರೆ ಜ್ಞಾನವೇಬೇಕು. ನಾನು ಮುಂಬೈ ಪಟ್ಟಣವನ್ನು ಎಂದೂ ನೋಡಿಲ್ಲ; ಆದರೆ ನನಗೆ ಮುಂಬೈ ಪಟ್ಟಣದ ಕಲ್ಪನೆಯು ಬರಬೇಕಾದರೆ ನಾನು ಯಾವದಾದರೊಂದು ಸಣ್ಣ ಪಟ್ಟಣವನ್ನು ನೋಡಿರಲೇಬೇಕು. ಅಂದರೆ ಆ ಸಣ್ಣ ಪಟ್ಟಣದ ಅನುಭವದ ಮೇಲಿಂದ ಮುಂಬೈ ಪಟ್ಟಣವು ಅದಕ್ಕಿಂತಲೂ ಎಷ್ಟೋ ಭವ್ಯವಾದುದು, ಅದಕ್ಕೆ ಮಿಗಿಲಾಗಿ ಅಂದವಾದುದು, ಆದಕ್ಕಿಂತಲೂ ಹೆಚ್ಚು ದೊಡ್ಡದು ಎಂದು ಕಲ್ಪನೆಯು ಬರುವದು. ಆದರಂತೆಯೇ ನನಗೆ ತೀರ ಹೊಸದಾದ ವಿಷಯವನ್ನು, ತಿಳಿದ ವಿಷಯಗಳ ಸಹಾಯದಿಂದ ಗ್ರಹಣಮಾಡುವೆನು. ಆದುದರಿಂದಲೇ ಆಧುನಿಕ ಮಾನಸ ಶಾಸ್ತ್ರವು ಮನುಷ್ಯನಿಗೆ ಹೊಸವಿಷಯವಾವುದೂ ಅಲ್ಲ ಎಂದು ಧೈರ್ಯದಿಂದುಸುರುವದು. ಇದರಿಂದ ಮನುಷ್ಯನಿಗೆ, ತಿಳಿಯು ಅನಾದಿ

ಕಾಲದಿಂದ ಹರಿಯುತ್ತಿರುವ ಪ್ರವಾಹವೇ ಹೊರತು ಅದು ಒಮ್ಮಿಂದೊಮ್ಮೆ ಹೊರಚಿಮ್ಮಿದ ಕಾರಂಜಿಯಲ್ಲವೆಂಬುದು ಸಿದ್ಧವಾಗುವದು. ಯಾಕಂದರೆ ಒಂದು ವಿಷಯವನ್ನು ತಿಳಿಯಬೇಕಾದರೆ ಪೂರ್ವದಲ್ಲಿ ಜ್ಞಾನಬೇಕು. ಆ ಪೂರ್ವದ ಜ್ಞಾನಕ್ಕೆ ಅದಕ್ಕೂ ಪೂರ್ವದ ಜ್ಞಾನಬೇಕು. ಹೀಗೆ, ಹಿಂದಕ್ಕೆ ಬಾಲ್ಯಾವಸ್ಥೆಯವರೆಗೆ ಹೋದರೆ, ಸಣ್ಣ ಮಗುವು ಹುಟ್ಟಿದೊಡನೆಯೇ ವಿಷಯಗಳನ್ನು ಹೇಗೆ ಗ್ರಹಿಸತೊಡಗಿತು? ಅದಕ್ಕೆ ಪೂರ್ವದ ಜ್ಞಾನವು ಎಲ್ಲಿಂದ ಬಂತು ! ಎಂದು ಪ್ರಶ್ನೆ ಬರುವದು ಅದಕ್ಕೆ ಉತ್ತರವೆಂದರೆ– ಆ ಮಗುವಿಗೆ ಪೂರ್ವ ಸಂಸ್ಕೃತಿ ಇತ್ತು; ಅದರ ಸಹಾಯದಿಂದಲೇ ಮುಂದೆ ಹೊಸ ವಿಷಯಗಳನ್ನು ಗ್ರಹಿಸಹತ್ತಿತು. ತಿಳಿಯದ್ದನ್ನು ತಿಳಿಯಲಿಕ್ಕೆ ತಿಳಿವು ಆವಶ್ಯಕವೆಂಬ ಮಾನಸ ಶಾಸ್ತ್ರದ ನಿಯಮವೇ ಮಗುವಿಗೆ ಪೂರ್ವಜನ್ಮದ ಸಂಸ್ಕೃತಿಯನ್ನು ತಿಳಿಯ ಅನಾದಿಪ್ರವಾಹವನ್ನೂ ಸಿದ್ಧಬಡಿಸುವದು.

ತಿಳಿವು ತಿಳಿದದ್ದನ್ನು ಪರಿಹಚ್ಚಿ ನೋಡುವದು. ಇದು ಮೊದಲಿನ ನಿಯಮದ ಉಪಸಿದ್ಧಾಂತವು. ಯಾವದಾದರೊಂದು ಹೊಸ ವಿಷಯವನ್ನು ಹೇಳಹತ್ತಿದೊಡನೆ, ಕೆಲವರು ‘ಹಾ’ ತಿಳಿಯಿತು ಇದು ನಮಗೆ ಸಮ್ಮತವೆಂದು ತಲೆದೂಗ ಹತ್ತುವರು; ಬೇರೆ ಕೆಲವರು ‘ಇದು ನಮಗೆ ಸರಿಯಾಗಿ ತೋರುವದಿಲ್ಲವೆಂದು ತಲೆತುರಿಸ ಹತ್ತುವರು ಇದರ ಕಾರಣವೇನಂದರೆ ಯಾರು ಸಮ್ಮತವೆನ್ನುವರೋ ಅವರ ಪೂರ್ವದ ಜ್ಞಾನವು ಆ ವಿಷಯವನ್ನು ಪರೀಕ್ಷಿಸಿ ಮನಗಂಡಿತು; ಸಮ್ಮತವಾಗದವರ ಜ್ಞಾನವು ಈ ವಿಷಯವನ್ನು ಪರೀಕ್ಷಿಸಿ ಅಯುಕ್ತವೆಂದು ತಿಳಿಯಿತು ; ಹೀಗೆ ನಮ್ಮ ಜ್ಞಾನವನ್ನು ಹೆಚ್ಚಿಸಬೇಕಾದರೆ ಹಳೆ ಅನುಭವದಿಂದ ಹೊಸದನ್ನು ಹತ್ತುತ್ತಾ ಹೋಗಬೇಕು. ಹೊಸದನ್ನು ಹತ್ತುವಾಗ ಹಳೇ ಅನುಭವದ ಮೇಲೆ ಕಾಲೂರಿ ಹೊಸದು ಸರಿಯಾಗಿದೆಯೋ ಇಲ್ಲವೋ ಪರೀಕ್ಷಿಸಬೇಕು.

ಪ್ರಸ್ತುತ ವೇದಾಂತಿ ಯೆನಿಸುವವನೊಬ್ಬನು ಅಪಾರವಾದ ಅಗಮ್ಯವಾದ ಬ್ರಹ್ಮವೆಂಬ ಸಮುದ್ರದಲ್ಲಿ ಈಸು ಬಿದ್ದಿರುವನು. ಈ ಸಮುದ್ರಕ್ಕೆ ಒಂದೇ ಒಂದು ದಂಡೆಯು. ಈ ದಂಡೆಯ ಮೇಲಿಂದ ಉಡ್ಡಾಣ ಮಾಡಿ

ನೆಲೆ ಇಲ್ಲದ ನೀರಿನಲ್ಲಿ ತೇಲುತ್ತ ಮುಣಗುತ್ತ ಅವನು ಸಾಗಹತ್ತಿದನು. ಹಿಂತಿರುಗಿ ನೋಡಲು ದಂಡೆಯು ಕಾಣದಂತಾಯಿತು. ಮೋಹದ ಮಡುವಿಗೆ ಬಿದ್ದು ಮಾಯೆಯನ್ನು ಗುಟುಗರಿಸಿ ತನ್ನನ್ನು ತಾನು ಮರೆತ, ದಂಡೆಯಮೇಲಿದ್ದ ಅನುಭವವೆಲ್ಲ ಮೋಹದ ಜಾಲವೂ ಸಟಿಯಾದುದೇ ಹೊರತು ದಿಟವಲ್ಲ; ಈ ಬ್ರಹ್ಮ ಒಂದೇ ನಿಜವಾದ ವಸ್ತುವೆಂದು ಗ್ರಹಿಸಿದನು ಈ ಅವನ ತಿಳುವಳಿಕೆಯು ಸಯುಕ್ತವೇ ಹೇಗೆ ಎಂದು ವಿಚಾರಿಸುವದೇ ಈ ಲೇಖನದ ಉದ್ದೇಶವಾಗಿದೆ.

ಬ್ರಹ್ಮವು ತಿಳಿಯದ ವಸ್ತುವು. ವಾಙ್ಮನಸಿಗೆ ಅಗೋಚರವು. ಅದೊಂದೇ ವಸ್ತುವು ಜಗತ್ತಿನಲ್ಲಿ ನಿಜವಾದರೆ ನಾನು ನೀನೆಂಬ ಜೀವರು ಬ್ರಹ್ಮರೇ! ಇರಲಿ! ಆದರೆ ನಮ್ಮ ಅನುಭವದಿಂದ ಎಲ್ಲ ಜೀವರು ಸುಖದುಃಖಗಳಿಗೆ ತುತ್ತಾಗಿರುವರೆಂಬುದು ಅನುಮೇಯಿಸತಕ್ಕ ಮಾತಾಗಿದೆ. ಈ ಸುಖದುಃಖಗಳು ಅಜ್ಞಾನದ ತೆರೆಗಳೆಂಬದು ಸರ್ವರಿಗೂ ಸಮ್ಮತವು. ಈ ವಿಶ್ವವೆಲ್ಲ ಕೇವಲ ನಿತ್ಯಶುದ್ಧಬುದ್ಧಮುಕ್ತನಾದ ಪರಬ್ರಹ್ಮನಲ್ಲಿ ಅಜ್ಞಾನದಿಂದ ಭ್ರಮಿಸಿದ ಅಪೂರ್ವ ವಸ್ತುವೇ ಹೊರತು ಸತ್ಯವಲ್ಲ. ಬ್ರಹ್ಮ ಒಂದೇ ಸತ್ಯವೆಂದಮೇಲೆ ಸರ್ವ ಸುಖದುಃಖಗಳಿಗೂ ಕಾರಣವಾದ ಈ ಅಜ್ಞಾನವು ಯಾರಿಗೆ? ಬ್ರಹ್ಮನಿಗಲ್ಲವೇ? ಆದರೆ ಪರಬ್ರಹ್ಮನು ಸರ್ವಜ್ಞ ಮೂರ್ತಿಯು, ಜ್ಞಾನಾನಂದಸ್ವರೂಪಿಯು. ಅವನಿಗೆ ಅಜ್ಞಾನವು ಬರುವಬಗೆ ಎಂತು?

ಮುಂಬೈ ಪಟ್ಟಣದಲ್ಲಿ ಒಂದು ಹಾಸ್ಯ ಮಂದಿರವದೆ. ( Laughing gallary ) ಅಲ್ಲಿ ಮನುಷ್ಯನು ಪ್ರವೇಶ ಮಾಡಿದ ಕೂಡಲೇ ದೊಡ್ಡ ದೊಡ್ಡ ಕನ್ನಡಿಗಳಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಬೆಪ್ಪಾಗುವನು. ತಾನು ಮೊಂಡಮೂಗಿನವನಿದ್ದರೂ ಆ ಕನ್ನಡಿಯ ಪ್ರಭಾವದಿಂದ ಅವನ ಮೂಗು ಮೂರು ಮೊಳಉದ್ದವಾಗುವದು. ದುಂಡಗೆ ಕಟೆದ ಬೊಗರೆಯಂತಿರುವ ಮುಖವು ಚಪ್ಪಟೆಯಾಗಿ ಪಸರಿಸುವದು. ಇದನ್ನು ನೋಡಿ ನಗಹತ್ತಿದ

ಕೂಡಲೇ ಅವನನ್ನು ಅಣಕಿಸುವಂತೆ ಹಲ್ಲುಗಳು ನೆಲಕ್ಕೆ ಇಳಿಯುವವು. ತಾನು ಇದ್ದಂತೆ ಇದ್ದರೂ ಕನ್ನಡಿಯೊಳಗಿನ ಅವನ ಪ್ರತಿಬಿಂಬವು ಕನ್ನಡಿಯ ಗುಣದಿಂದ ಅನೇಕ ವಿಕಾರಗಳನ್ನು ಹೊಂದುವದು.

ಹೀಗೆಯೇ ಪರಬ್ರಹ್ಮವೇ ಒಂದು ನಿಜವಾದ ವಸ್ತುವು. ಆದರೂ ಅಜ್ಞಾನವು ಜೀವನನ್ನು ಆವರಿಸುವದೇ ಹೊರತು ಪರಬ್ರಹ್ಮನನ್ನು ತಟ್ಟಲಾರದು. ಜೀವವು ಪರಬ್ರಹ್ಮನ ಪ್ರತಿಬಿಂಬವು ಕನ್ನಡಿಯಮೂಲಕ ಮನುಷ್ಯನ ಪ್ರತಿಬಿಂಬವು ವಿಕಾರ ಹೊಂದಿದರೂ ಮನುಷ್ಯನು ಇದ್ದಹಾಗೆ ಇರುವಂತೆ ಪರಬ್ರಹ್ಮನ ಪ್ರತಿಬಿಂಬವಾದ ಜೀವನಿಗೆ ಅಜ್ಞಾನವು ಮುಸುಕಿದರೂ ಬ್ರಹ್ಮನಿಗೆ ಅಜ್ಞಾನವು ಸೋಂಕಲಾರದು.

ವಿಚಾರಿಸಬೇಕು ! ಎಲ್ಲ ಜಗತ್ತಿನ ಹೊರಗೂ ಒಳಗೂ ಹಬ್ಬಿಕೊಂಡಿರುವ ಬ್ರಹ್ಮ ಒಂದೇ ನಿಜವಾದ ವಸ್ತುವು. ಕನ್ನಡಿಯಲ್ಲಿ ಮನುಷ್ಯನು ಮುಖವನ್ನು ನೋಡಿದರೆ ಪ್ರತಿಬಿಂಬವು ಕಾಣುವಂತೆ ಕನ್ನಡಿಯಂತಹ ಯಾವದೋ ಒಂದು ಉಪಾಧಿಯಮೂಲಕ ಪರಬ್ರಹ್ಮನ ಪ್ರತಿಬಿಂಬವು ಕಾಣುವದು. ಅದೇ ಜೀವವೆನಿಸುವದು. ಈ ಜೀವನಿಗೆ ಅಜ್ಞಾನವು ಹೊದಿಕೆ ಹಾಕಿ ಸುಖದುಃಖಗಳ ತಮಾಷೆಯನ್ನು ತೋರಿಸುವದು. ಕನ್ನಡಿಯಲ್ಲಿ ತೋರುವ ಮುಖವು ನಿಜವಾದ ಮುಖದಿಂದ ಕನ್ನಡಿಯಿರುವವರೆಗೆ ಬೇರೆಯಾಗಿ ತೋರುವದು. ಮುಖವನ್ನು ಕನ್ನಡಿಯಿಂದ ತಿರುಗಿಸಿದ ಕೂಡಲೇ ಕನ್ನಡಿಯೊಳಗಿನ ಮುಖವು ಕಾಣದಾಗುವದು. ಆದರಂತೆಯೇ ಪರಬ್ರಹ್ಮನ ಪ್ರತಿಬಿಂಬವಾದ ಜೀವವು ಬೇರೆ ನಿಜವಾದ ವಸ್ತುವಲ್ಲ. ಆ ಉಪಾಧಿಯಿಂದ ಬೇರೆ ಇರುವಂತೆ ತೋರುವದು.

ಸರಿಯೇ ! ಆದರೆ ಈ ಉಪಾಧಿಯಾವದು ? ಕನ್ನಡಿಗೂ ಮುಖಕ್ಕೂ ಸಂಬಂಧ ಬರಲಾಗಿ ಕನ್ನಡಿಯಲ್ಲಿ ಪ್ರತಿಬಿಂಬವು ಕಾಣುವದು. ಹಾಗೆಯೇ ಜೀವವು ಪರಬ್ರಹ್ಮನ ಪ್ರತಿಬಿಂಬವಾದರೆ ಪರಬ್ರಹ್ಮನಿಗೂ ಉಪಾಧಿಗೂ ಸಂಬಂಧವಿರಬೇಕು. ಈ ಉಪಾಧಿಯನ್ನೇ ನಾವು ವಿವೇಚಿಸೋಣ.

ಬ್ರಹ್ಮವೊಂದೇ ನಿಜವಾದವಸ್ತುವು. ಅವನನ್ನುಳಿದು ಎಲ್ಲ ವಸ್ತುಗಳು ಅಜ್ಞಾನದಿಂದ ಕಲ್ಪಿತವಾದವು ಅಂದರೆ ಸುಳ್ಳು ಎಂಬದೇ ಮಾಯಾವಾದಿಯ ಮತವು. ಯಾವ ಉಪಾಧಿಯ ನಿಮಿತ್ತ ಜೀವ ಬ್ರಹ್ಮರು ಭಿನ್ನರಾಗಿ ತೋರುವರೋ ಆ ಉಪಾಧಿಯು ಸ್ವಭಾವಸಿದ್ಧವಾದುದೋ ಅಥವಾ ಅಜ್ಞಾನದಿಂದ ಕಲ್ಪಿತವಾದದ್ದೋ? ಬ್ರಹ್ಮನಂತೆಯೇ ಆ ಉಪಾಧಿಯೂ ಸ್ವಭಾವಸಿದ್ಧವಾಗಿದ್ದರೆ ಎರಡು ನಿಜವಾದ ವಸ್ತುಗಳನ್ನು ಒಪ್ಪಬೇಕಾಗುವದು; ಅದ್ವೈತವಾದಕ್ಕೆ ತಿಲಾಂಜಲಿಯನ್ನು ಕೊಡಬೇಕಾಗುವದು. ಆದಕಾರಣ ಆ ಉಪಾಧಿಯೂ ಅಜ್ಞಾನ ಕಲ್ಪಿತವೆಂದು ಹೇಳಬೇಕಾಗುವದು.

ನಮ್ಮ ಹಿಂದಿನ ವಿಚಾರತಂತುಗಳನ್ನು ಸರಿಮಾಡಿಕೊಂಡು ಮುಂದೆ ಸಾಗೋಣ. ಬ್ರಹ್ಮವೊಂದೇ ಸತ್ಯ ಆತನು ಸಚ್ಚಿದಾನಂದ ಸ್ವರೂಪನು, ಸರ್ವಜ್ಞನು; ಆದರೂ ಜಗತ್ತಿನಲ್ಲಿ ಸುಖದುಃಖಾದಿಗಳು ಜೀವನಿಗೆ ಕಂಡುಬರುವವು. ಈ ಸುಖದುಃಖಾದಿಗಳು ಅಜ್ಞಾನದಿಂದಲೇ ಬರುವವೆಂಬ ಮಾತು ನಿರ್ವಿವಾದವು. ಸಚ್ಚಿದಾನಂದ ಸ್ವರೂಪಿಯಾದ ಬ್ರಹ್ಮನಿಗೆ ಅಜ್ಞಾನವು ಆವರಿಸುವ ಬಗೆಯೆಂತು ? ಕನ್ನಡಿಯ ದೋಷದಿಂದ ಪ್ರತಿಬಿಂಬವು ವಿಕಾರ ಹೊಂದುವಂತೆ ಬ್ರಹ್ಮನ ಪ್ರತಿಬಿಂಬವಾದ ಜೀವನಿಗೆ ಉಪಾಧಿಮೂಲಕ ಅಜ್ಞಾನವೇ ಹೊರತು ಸರ್ವಜ್ಞನಾದ ಬ್ರಹ್ಮನಿಗಲ್ಲ ಆ ಉಪಾಧಿಯು ಸತ್ಯವಾದುದೇನೂ ಅಲ್ಲ; ಯಾಕಂದರೆ ಬ್ರಹ್ಮನೊಬ್ಬನೇ ನಿಜವಾಗಿ ಸತ್ಯನು. ಅವನನ್ನುಳಿದು ಸರ್ವವೂ ಅಜ್ಞಾನದಿಂದ ಕಲ್ಪಿತವಾದುದು. ಎಂದಮೇಲೆ ಯಾವ ಉಪಾಧಿಯಿಂದ ಜೀವನಿಗೆ ಅಜ್ಞಾನವು ತಟ್ಟುವದೋ ಆ ಉಪಾಧಿಯು ಕೂಡಾ ಅಜ್ಞಾನಕಲ್ಪಿತವೆಂದು ಹೇಳಿದಂತಾಯಿತು.

ಇರಲಿ ! ಜೀವನೂ ಬ್ರಹ್ಮನಾದರೆ, ಅವನಿಗೆ ಸುಖದುಃಖಾದಿಗಳು ಹ್ಯಾಗಯ್ಯಾ ಎಂದು ಕೇಳಿದರೆ, ಅಜ್ಞಾನದಿಂದ ಬರುವವೆಂದು ಉತ್ತರ. ಸರಿಯೆ !! ಅಜ್ಞಾನವು ಯಾರಿಗೆ ಮತ್ತು ಹೇಗೆ ಆವರಿಸಿತೆಂದು ವಿಚಾರಿಸಿದರೆ, ಮನುಷ್ಯನ ಪ್ರತಿಬಿಂಬದ ಮುಖವನ್ನು ಒಂದಗೆಡಿಸುವ ಕನ್ನಡಿಯಂತೆ

ಉಪಾಧಿಯೊಂದಿರುವದು; ಅದು ಜೀವನಿಗೆ ಅಜ್ಞಾನದ ಹೊದಿಕೆಯನ್ನು ಹಾಕುವದೆಂದು ಸಮಾಧಾನ ಹೇಳಿದ್ದಾಯಿತು. ಈ ಉಪಾಧಿಯಾದರೂ ಎಲ್ಲಿಂದ ಬಂತೆಂದು ಹೆಚ್ಚು ಚಿಕಿತ್ಸೆ ಮಾಡಿದರೆ ಅದು ಅಜ್ಞಾನಕಲ್ಪಿತವು. ಅಂದರೆ ಅಜ್ಞಾನದಿಂದ ಹುಟ್ಟಿತೆಂದುಸುರ.ವಿರಿ. ಇದು ಹೇಗೆ? ಉಪಾಧಿಯಿಂದ ಹುಟ್ಟಿದ ಅಜ್ಞಾನವು ಉಪಾಧಿಗೆ ಜನಕವಾಗಬಹುದೇ ? ಆದುದರಿಂದ ಉಪಾಧಿಯು ಅಜ್ಞಾನಕಲ್ಪಿತವೆಂಬ ಪಕ್ಷವು ಕೂಡುವದಿಲ್ಲ ಅದು ಸ್ವಭಾವಸಿದ್ಧವೆಂದರೆ ಮೊದಲು ಹೇಳಿದಂತೆ ಬ್ರಹ್ಮನಂತೆ ನಿಜವಾದುದರಿಂದ ಎರಡು ಸತ್ಯವಸ್ತುಗಳನ್ನು ಒಪ್ಪಬೇಕಾಗುವದು. ಆಮೇಲೆ ಅದ್ವೈತವೆಲ್ಲಿಯುಬ ?

ಇದಕ್ಕೆ ಇನ್ನೊಂದು ಮಾರ್ಗವುಂಟು ಜಗತ್ತಿನಲ್ಲಿ ಬ್ರಹ್ಮ ಒಂದೇ ನಿಜವಾದ ವಸ್ತುವು. ಈ ಚೈತನ್ಯ ಒಂದೇ ನಾನಾ ರೂಪಗಳನ್ನು ಧರಿಸಿ ಈ ಜಗದೊಳಗೆ ಬಾಳುವದು ಒಬ್ಬನೇ ಒಬ್ಬ ನಟನು ರಾಜವೇಷ ಧರಿಸಿ ರಂಗಭೂಮಿಗಳಲ್ಲಿ ತನ್ನ ಐಶ್ವರ್ಯವನ್ನು ತೋರುವನು; ಮತ್ತು ತಿರುಕನವೇಷದಿಂದ ದಾರಿದ್ರ್ಯವನ್ನು ಪ್ರಕಟಗೊಳಿಸುವನು. ಹಾಗೆಯೇ ಒಬ್ಬನೇ ಬ್ರಹ್ಮನು ಅಂತಃಕರಣಗಳೆಂಬ ಅನೇಕವೇಷಗಳಿಂದ ನಾನಾ ರೂಪಗಳನ್ನು ಹೊತ್ತು ಉನ್ಮತ್ತ ರಾಜನಾಗಿಯೂ, ವಿರಕ್ತ ಯತಿಯಾಗಿಯೂ, ಆಸಕ್ತ ಸಂಸಾರಿಯಾಗಿಯೂ ಅಕಿಂಚನ ದರಿದ್ರನಾಗಿಯೂ, ಅಜ್ಞ ಪಶುವಾಗಿಯೂ ಮೆರೆಯುವನು. ಮೇಲೆ ಪ್ರತಿಪಾದಿಸಿದ ಮತದಂತೆ ಈ ಮತದಲ್ಲಿ ರಾಜನಿಗೂ ಯತಿಗೂ ಸಂಸಾರಿಗೂ ಇರತಕ್ಕ ಪರಸ್ಪರಭೇದವು ಸುಳ್ಳೇನೂ ಅಲ್ಲ; ಅಜ್ಞಾನ ಕಲ್ಪಿತವಲ್ಲ. ಅದರಂತೆಯೇ ಈ ಭೇದಕ್ಕೆ ಕಾರಣವಾದ ಅಂತಃಕರಣಗಳೆಂಬ ಉಪಾಧಿಯೂ ಸುಳ್ಳಲ್ಲ. ಸತ್ಯವಾದುದೇ. ಹಾಗಾದರೆ ಅಂತಃಕರಣಗಳೂ ಸತ್ಯ ಭೇದವೂ ಸತ್ಯ ಅದ್ವೈತವಾದವು ಹೇಗೆ ಕೂಡುವದು ? ಭೇದವು ಸತ್ಯವಾದರೂ ಅದು ಬ್ರಹ್ಮನಿಗೆ ಸ್ವಾಭಾವಿಕವಲ್ಲ ಅಂತಃಕರಣಗಳೆಂಬ ಉಪಾಧಿಮೂಲಕ ಪ್ರಾಪ್ತವಾದದ್ದು. ಅಂದಮೇಲೆ ಸ್ವಾಭಾವಿಕವಾಗಿ ಬ್ರಹ್ಮ ಒಂದೇ ನಿಜನೆಂಬವಾದಕ್ಕೆ ಬಾಧನೇನು ? ಎಲ್ಲ ಕಡೆಯು

ಲ್ಲಿಯೂ ಆಕಾಶವು ಪಸರಿಸಿರುವದು. ಅದು ಇರುವದು ಒಂದು ಅದರಲ್ಲಿ ಸ್ವಭಾವತಃ ಭೇದವಿಲ್ಲ. ಆದರೂ ಮನೆಗಳ ಗೋಡೆಗಳಿಂದ ಸುತ್ತಲ್ಪಟ್ಟ ಆಕಾಶವು ಬೇರೆ; ಕೊಡಗಳಲ್ಲಿರುವ ಆಕಾಶವು ಬೇರೆ. ಎಂದು ಮನೆಕೊಡ ಮುಂತಾದ ಉಪಾಧಿಗಳಿಂದ ಆಕಾಶವು ಭಿನ್ನವಾಗಿ ತೋರುವಂತೆ ಬ್ರಹ್ಮನ ಅವಸ್ಥೆಯು. ಇದು ಭಾಸ್ಕರಮತವು. (ನ್ಯಾಯವಾದಿಗಳಲ್ಲಿ ಕೆಲವರು)-

ಈ ಮತವೂ ಯುಕ್ತವಾಗಿ ತೋರುವದಿಲ್ಲ. ಯಾಕೆಂದರೆ ಜಗತ್ತಿನಲ್ಲಿ ಉಪಾಧಿಯು ವಸ್ತುವಿನಲ್ಲಿರುವ ಸ್ವಾಭಾವಿಕ ಭೇದವನ್ನು ಪ್ರಕಟಗೊಳಿಸುವದೇ ಹೊರತು, ಇಲ್ಲದ ಭೇದವನ್ನು ಹುಟ್ಟಿಸಲಾರದು. ಆಕಾಶದಲ್ಲಿ ಯಾವದೂ ಸ್ವಭಾವಸಿದ್ಧವಾದ ಭೇದವನ್ನೇ ಘಟಮಠಾದಿಗಳು ವ್ಯಕ್ತಗೊಳಿಸುವವೇ ಹೊರತು ಇಲ್ಲದ ಭೇದವನ್ನು ಹುಟ್ಟಿಸಲಾರವು ಒಳ್ಳೇದ! ಇಲ್ಲದ ಭೇದವನ್ನು ಉಪಾಧಿಯು ಆಕಾಶದಲ್ಲಿ ಹುಟ್ಟಿಸುವದೆಂದು ಕ್ಷಣಹೊತ್ತು ಕಲ್ಪಿಸುವಾ! ಸರ್ವವನ್ನೂ ವ್ಯಾಪಿಸಿದ ಆಕಾಶದಲ್ಲಿ ಒಂದು ಕೊಡವನ್ನು ತಂದಿಟ್ಟರೆ ಆ ಕೊಡದಲ್ಲಿಯೂ ಆಕಾಶವು ಸೇರಿ ಅದು 'ಕೊಡದೊಳಗಿನ ಆಕಾಶ'ವೆಂದು ಕರೆಯಲ್ಪಡುವದು ಆದರೆ ಎಲ್ಲ ಕಡೆಯಲ್ಲಿಯೂ ಏಕವಾಗಿದ್ದ ಆಕಾಶದಲ್ಲಿ ಭೇದವನ್ನು ಹುಟ್ಟಿಸುವ ಈ ಕೊಡಕ್ಕೂ ಆಕಾಶಕ್ಕೂ ಸಂಬಂಧವಾಗುವದೆಂದು ಹೇಳಲಿಕ್ಕೇಬೇಕು. ಇಲ್ಲವಾದರೆ ಕೊಡದೊಳಗಿನ ಆಕಾಶವೆಂದು ನಮಗೆ ಬೇರೆಯಾಗಿ ತೋರುವ ಬಗೆಹೇಗೆ? ಇನ್ನು ಘಟಕ್ಕೂ ಆಕಾಶಕ್ಕೂ ಸಂಬಂಧವಾದ ಮೇಲೆ ಇದು ಘಟಾಕಾಶವೆಂದು ಭೇದವು ಹುಟ್ಟುವದು. ಆಗ ಘಟಕ್ಕೂ ಆಕಾಶದ ಒಂದು ಭಾಗಕ್ಕೂ ಸಂಬಂಧವಾಗುವದೋ ಅಥವಾ ಇಡಿ ಆಕಾಶಕ್ಕೆ ಸಂಬಂಧವಾಗುವದೋ ಎಂದು ಪ್ರಶ್ನೆ ಬರುವದು. ಆಕಾಶದ ಒಂದು ಭಾಗಕ್ಕೆ ಸಂಬದ್ಧವಾಗಿ ಘಟವು ಘಟಾಕಾಶವನ್ನು ನಿರ್ಮಿಸುವದೆಂದು ಒಪ್ಪಿದರೆ ಆ ಆಕಾಶದ ಒಂದು ಭಾಗವು ಸರ್ವಾಕಾಶದಿಂದ ಹೇಗೆ ಭಿನ್ನವಾಗಿ ತೋರಿತು? ಅದಕ್ಕೂ ಒಂದು ಉಪಾಧಿಯು ಬೇಕು. ಮತ್ತು ಆ ಉಪಾಧಿಗೂ ಆಕಾಶದ ಒಂದು ಭಾಗದ ಭಾಗಕ್ಕೂ ಸಂಬಂಧವನ್ನು ಒಪ್ಪಬೇಕು. ಆ ಆಕಾಶದ ಒಂದು ಭಾಗದಲ್ಲಿ ಭಾಗ

ವಾಗಲಿಕ್ಕೆ ಮತ್ತೆ ಬೇರೊಂದು ಉಪಾಧಿಯು ಬೇಕು. ಹೀಗೆ ಜಗತ್ತು ಮುಳುಗುವವರೆಗೆ ವಿಚಾರಮಾಡಿದರೂ ಈ ಪ್ರಶ್ನೆಯು ಮುಗಿಯಲಾರದು. ಇನ್ನು ಘಟವು ಎಲ್ಲ ಆಕಾಶಕ್ಕೂ ಸಂಬದ್ಧವಾಗುವದೆಂದು ಹೇಳಬೇಕು. ಅದೂ ಸಯುಕ್ತಿಕವಾಗಿ ತೋರುವದಿಲ್ಲ. ಯಾಕಂದರೆ ಘಟವು ಎಲ್ಲ ಆಕಾಶವನ್ನು ಆವರಿಸಿದರೆ ಎಲ್ಲವೂ ಘಟಾಕಾಶವಾಗುವದು ಆಮೇಲೆ ಇದು ಘಟಾಕಾಶ ಇದು ಮಹಾಕಾಶವೆಂದು ಭೇದಹುಟ್ಟುವ ಬಗೆ ಹೇಗೆ? ಅದಾ ದರಿಂದ ಆಕಾಶವಲ್ಲಿ ಸ್ವಾಭಾವಿಕವಾಗಿ ಇದ್ದ ಭೇದವನ್ನೇ ಉಪಾಧಿಗಳು ಪ್ರಕಟಗೊಳಿಸುವವು. ಅದರಂತೆಯೇ ಬ್ರಹ್ಮನಲ್ಲಿ ಸ್ವಭಾವಿಕವಾಗಿ ಭೇದ ವನ್ನು ಒಪ್ಪಬೇಕಾಯಿತು. ಅಂದಮೇಲೆ ಅದ್ವೈತವಾದಕ್ಕೆ ಮತ್ತೆ ಹಾಸಿ ತಟ್ಟದೇಬಿಡಲಿಲ್ಲ.

ಮೇಲಾಗಿ ಸ್ವಾಭಾವಿಕವಾಗಿ ಬ್ರಹ್ಮನಲ್ಲಿ ಭೇದವಿಲ್ಲದಿದ್ದರೆ ಬೇರೆಬೇರೆ ಜೀವಗಳಿಗೆ ಬೇರೆಬೇರೆ ಸುಖದುಃಖಗಳ ಅನುಭವವು ಏಕೆ ತಾನೇಬರ ಬೇಕು? ರಾಮರಾಯರಿಗಾದ ಅನೇಕ ವಿಕಾರಗಳ ಅನುಭವವು ನನಗೇಕಾ ಗಬಾರದು? ಯಾಕಂದರೆ ಸ್ವಭಾವತಃ ನಾನು ರಾಮರಾಯರೂ ಒಬ್ಬನೇ ಬ್ರಹ್ಮನಲ್ಲವೇ? ಇದು ಏನು! ಸ್ವಭಾವತಃ ಬ್ರಹ್ಮನು ಒಬ್ಬನಾದರೂ ನಮ್ಮ ನಮ್ಮ ಅಂತಃಕರಣಗಳು ಬೇರೆಯಾದುದರಿಂದ ಎಲ್ಲರ ಸುಖದುಃಖಗಳ ಅನುಸಂಧಾನವು ನಮಗಾಗಲಾರದು. ಹಾಗಲ್ಲ!! ಕೇವಲ ಅಂತಃಕರಣಗ ಳೆಂಬ ಉಪಾಧಿಗಳು ಬೇರೆ ಇರೋಮಾತ್ರದಿಂದ ಅನುಭವಗಳು ಬೇರೆಯಾ ದರೆ ಹಸ್ತಪಾದಾದಿಗಳಲ್ಲಿ ನೋವಾಗಲೀ ಸುಖವಾಗಲೀ ಆದರೆ ಅದು ಒಬ್ಬ ನೇ ಜೀವನಿಗೆ ಬರಬಾರದಾಗಿತ್ತು. ಮನುಷ್ಯನ ದೇಹದಲ್ಲಿ ಎಲ್ಲಭಾಗಗಳಲ್ಲಿ ಆಗತಕ್ಕ ಸುಖದುಃಖಗಳ ಅನುಭವವು ಒಬ್ಬ ಜೀವನಿಗೆ ಬರುವ ಕಾರಣ ವೆಂದರೆ ಜೀವನು ಒಬ್ಬನಿರುವನು; ಕೈಕಾಲುಗಳೆಂಬ ಉಪಾಧಿಗಳು ಎಷ್ಟಿ ದ್ದರೂ ಅವುಗಳಲ್ಲಿ ಬರತಕ್ಕ ಅನುಭವದ ಅನುಸಂಧಾನವು ಇವನಿಗೆ ಆಗೇ ಆಗುವದು.

ಸೌಭರ್ಯಾದಿ ಋಷಿಗಳು ಯೋಗಸಾಮರ್ಥ್ಯದಿಂದ ಏಕಕಾಲಕ್ಕೆ ಅನೇಕ ಶರೀರಗಳನ್ನು ಧಾರಣಮಾಡಿ ತಮ್ಮ ಎಲ್ಲ ಶರೀರಗಳಲ್ಲಿ ಆಗತಕ್ಕ ಸುಖದುಃಖಗಳನ್ನು ಸೌಭರ್ಯ ಋಷಿಯ ಚೈತನ್ಯವು ಅನುಭೋಗಿಸುವದು. ಕೇವಲ ಶರೀರಗಳು ಭಿನ್ನವಾಗಿವೆಯೆಂದು ಆ ಋಷಿಗಳಿಗೆ ಎಲ್ಲ ಅನುಭವಗಳುಬಾರದಿದ್ದರೆ ಕಷ್ಟ ಬಟ್ಟು ಯೋಗಸಾಮರ್ಥ್ಯದಿಂದ ಅವರು ಅನೇಕ ಶರೀರಗಳನ್ನು ಎಲ್ಲಿ ಧಾರಣ ಮಾಡುತ್ತಿದ್ದರು? ಸೌಭರ್ಯ ಋಷಿಯ ಚೈತನ್ಯವು ಸ್ವಭಾವತಃ ಒಂದಾಗಿರುವದರಿಂದ ಅವನ ಅನೇಕ ಶರೀರಗಳಲ್ಲಿಯು ಅನುಭವವು ಅವನಿಗೆ ಆಗುವದು. ಅದರಂತೆಯೇ ಬ್ರಹ್ಮನು ಸ್ವಭಾವತಃ ಒಬ್ಬನಾದುದರಿಂದ ನಾನು ಬ್ರಹ್ಮನಾದ ಕಾರಣ ನನಗೆ ಎಲ್ಲ ಅನಂತ ಜೀವಗಳ ಅನುಭವದ ಅನುಸಂಧಾನವು ಏಕೆಬರಬಾರದು ?

ಮತ್ತು ಅವರವರು ಮಾಡಿದ ಕರ್ಮಗಳನ್ನು ಅವರವರೇ ಭೋಗಿಸಬೇಕಲ್ಲವೇ ! ಅದು ಅಲ್ಲದೇ ಬ್ರಹ್ಮ ಒಂದೇ ನಾನಾದೇಹಗಳನ್ನು ಧಾರಣ ಮಾಡಿದ್ದರೆ ನಾನು ಮಾಡಿದ ಪಾಪಪುಣ್ಯಗಳಿಗೆ ನಾನೊಬ್ಬನೇ ಏಕೆ ಭಾಗೀದಾರನು ? ಎಲ್ಲ ಜೀವಗಳೂ ಸಮವಾಗಿ ಅನುಭವಿಸಬೇಕು !! ಹಾಗಲ್ಲ ! ನನ್ನ ದೇಹವು ಬೇರೆ ಇರುವದರಿಂದ ನನ್ನ ದೇಹವು ಮಾಡತಕ್ಕ ಕರ್ಮಫಲಕ್ಕೆ ನಾನೇ ಬಾಧ್ಯಸ್ಥನು ಅನ್ಯರು ಮಾಡಿದ ಕರ್ಮಫಲಕ್ಕೆ ಅನ್ಯರು ಬಾಧ್ಯಸ್ಥರು. ನಿಜ ! ಇದು ಕೇವಲ ಕಣ್ಣಿಲ್ಲಿ ಮಣ್ಣು ತೂರುವ ಪ್ರಯತ್ನವೇ ಹೊರತು ಸರಳವಿಚಾರವಲ್ಲ. ಯಾಕಂದರೆ ಚೈತನ್ಯವೇ ಒಂದಾದ ಮೇಲೆ ನನ್ನ ದೇಹವೂ ನನ್ನದೇ; ರಾಜರಾಯರ ದೇಹವೂ ನನ್ನದೇ ! ಅಂದ ಮೇಲೆ ನನ್ನ ಪಾಪಪುಣ್ಯಗಳಿಗೆ ಎಲ್ಲರೂ ಬಾಧ್ಯಸ್ತರು; ಎಲ್ಲರ ಪಾಪಪುಣ್ಯಗಳಿಗೆ ನಾನು ಬಾಧ್ಯಸ್ತನು. ಹೀಗಾಗಿ ಕರ್ಮಲೋಪವೆಂಬ ಅನರ್ಥವೇ ಪ್ರಾಪ್ತವಾಗುವದು. ಯಾರೂ ಸತ್ಕರ್ಮಗಳನ್ನು ಮಾಡಲಿಕ್ಕಿಲ್ಲ ದುಷ್ಕರ್ಮಗಳನ್ನು ಬಿಡಲಿಕ್ಕಿಲ್ಲ. ಆದುದರಿಂದ ಈ ಭಾಸ್ಕರ ಮತವು ತ್ಯಾಜ್ಯವೆಂದೆ ಹೇಳಬೇಕು.

ಸಾರಂಶ ಮಾಯಾವಾದಿಯ ಮತದಲ್ಲಿ ಬ್ರಹ್ಮ ಒಂದೇ ಸತ್ಯ ; ಅದನ್ನುಳಿದು ಎಲ್ಲ ವಸ್ತುಗಳೂ ಅಜ್ಞಾನ ಕಲ್ಪಿತ ವಾದವು ಅಂದರೆ ಸುಳ್ಳು.

ಮೊದಲು ಹೇಳಿದಂತೆ ಅಜ್ಞಾನ ಮೂಲಕ ನಮಗೆ ಬರತಕ್ಕ ಸುಖದುಃಖಗಳೂ ಸುಳ್ಳು. ಈ ಸಂಸಾರವು ಪೊಳ್ಳು. ಮೋಕ್ಷವು ಅದು ಒಂದು ಡೊಳ್ಳು ಅಲ್ಲದೇ ನಿಜವೇನೂ ಅಲ್ಲ. ಇವರ ಮತದಲ್ಲಿ ಅಜ್ಞಾನವೇ ಕೂಡದ ಮೇಲೆ ಅಜ್ಞರು ಯಾರೂ ಇಲ್ಲ; ಎಂದಮೇಲೆ ಉಪದೇಶ ಯಾರಿಗೆ ಮೋಕ್ಷವಾರಿಗೆ? ಶಾಸ್ತ್ರಗಳ ಉಪದೇಶವು ಅರಣ್ಯರೋದನವೇ! ಶಿಷ್ಯರ ಶ್ರವಣವು ನಿಷ್ಪ್ರಯೋಜನವೇ. ಎಲ್ಲವೂ ಕಣ್ಣುಕಟ್ಟಾಟ, ಮೋಸ. ಜಗತ್ತು ಬಯಲಾಗುವ ಹೊಗೆಯು, ಜೀವನು ಹುಟ್ಟಿದ್ದು ಸುಳ್ಳು ಬಾಳುವದು ಸುಳ್ಳು; ಸತ್ತದ್ದು ಸುಳ್ಳು. **ಸುಳ್ಳಿನ ಸುಳಿದಾಟವೇ ಸುಳಿದಾಟ!**

ಸಾಕು! ಸಾಕು! ಈ ಸುಳ್ಳಿನ ಗಾಳಿಗೆ ಮೈಯೊಡ್ಡಿ ಮೂಢನಾಗ ಬೇಡ! ತಿಳಿಗಾಳಿಯೇ ತಂಗಾಳಿಯು; ಅದರಿಂದಲೇ ಮನಃಕಮಲವು ವಿಕಸಿತವಾಗಿ ಜ್ಞಾನಭಕ್ತಿ ವೈರಾಗ್ಯಗಳೆಂಬ ಭೃಂಗಗಳು ಅಲೆದಾಡಹತ್ತುವವು. ಅವುಗಳ ಇಂಪಾದ ಝೇಂಕಾರದಸೊಂಪಿಗೆ ಮೈಮರೆತು ಕಮಲನಯನನು ಕುಣಿಯಹತ್ತುವನು. ಸುಖದುಃಖಗಳ ತಾಪವು ಅಳಿದು ಹೋಗುವದು. ಸುಳ್ಳಾಗುವದಿಲ್ಲ! ಬನ್ನಿರಿ ಎಲ್ಲರೂ ಅವನ ವೇಣುನಾದಕ್ಕೆ ಚಪ್ಪಳಿಕ್ಕೋಣ!!

# ೩ನೇ ಪ್ರಕರಣ.

## ಸಿನೇಮಾ.

( ಮಿಥ್ಯಾತ್ವಾನುಮಾನ ಖಂಡನದ ಆಧಾರದಿಂದ ಬರೆದದ್ದು )

---

ರಾಮರಾವ- ನಮಸ್ಕಾರ ಕಿಶನರಾಯರೇ ! ಎಂದು ಬರೋಣವಾಯಿತು ?

**ಕಿಶನರಾವ:-** ನಮಸ್ಕಾರ; ನಮಸ್ಕಾರ ! ನಿನ್ನೆ ಸಾಯಂಕಾಲಕ್ಕೆ ಬಂದೆನು. ಎಲ್ಲ ಕ್ಷೇಮವೇ ?

**ರಾಮ:—** ಎಲ್ಲ ಕ್ಷೇಮ; ಬನ್ನಿ. ಸ್ವಲ್ಪ ಮಾರುತಿಯ ದರ್ಶನವನ್ನು ತೆಗೆದುಕೊಂಡು ಮನೆಯಕಡೆಗೆ ಹೋಗೋಣ.

**ಕಿಶನ—** ಇದು ಏನು ರಾಮರಾಯರೇ ? ಇಲ್ಲಿ ' ಘಟ ಪಟ ' ಶಬ್ದಗಳು ಚಟ ಪಟ ಹಾರುಹತ್ತಿವೆ. ಸುಮ್ಮನೆ ಬ್ರಾಹ್ಮಣನು ಎಷ್ಟು ತಲೆಯೊಡೆದು ಕೊಳ್ಳುತ್ತಾನಪ್ಪಾ ?

**ರಾಮ-** ಕಿಶನರಾಯರೇ ! ಅವರು ಬಹುದೊಡ್ಡ ವಿದ್ವಾಂಸರು. ನ್ಯಾಯ ವೇದಾಂತಗಳಲ್ಲಿ ವಿಶಾರದರು. ಮೇಲಾಗಿ ಹತ್ತು ಎಂಟು ಜನ ವಿದ್ಯಾರ್ಥಿಗಳಿಗೆ ಅನ್ನವಸ್ತ್ರಗಳನ್ನು ಕೊಟ್ಟು ಓದು ಹೇಳುವರು.

**ಕಿಶನ-** ನೀವು ಬೇಕಾದ್ದು ಹೇಳಿ ! ನಿಮ್ಮ ವೇದಾಂತಗ್ರಂಥಗಳಲ್ಲಿ ಶಬ್ದಾಡಂಬರವು ಬಹಳ. ಯಾಕೆ ನಮ್ಮ ಫಿಲೊಸೋಫಿ ( ವೇದಾಂತ )

ಗ್ರಂಥವನ್ನು ಓದಿರಿ. ಭಾಷೆ ಎಷ್ಟು ಸುಲಭ ಕಲ್ಪನೆಗಳು ಎಷ್ಟು ಅಂದವಾದುವು. ಅದ್ವೈತವೇದಾಂತದ ಕಲ್ಪನೆಗಳಾದರೂ ಬಹು ಗಂಭೀರವಾದವು. 'ಎಲ್ಲವೂ ಸುಳ್ಳು ಒಂದೇ ನಿಜ' ವೆಂಬ ಕಠೋರವಾದ ಕುಠಾರಿಯು ಈ ಪ್ರಪಂಚವನ್ನೆಲ್ಲ ಛಿನ್ನಭಿನ್ನವಾಗಿ ಮಾಡಿರುವದು. ಅದಕ್ಕೆ ಪಾಶ್ಚಾತ್ಯ ತತ್ವಜ್ಞರಾದ ಕಾಂಟ ಮೊದಲಾದವರ ಅನುಮತಿಯಾದರೂ ಬಹುಮಟ್ಟಿಗೆ ಉಂಟು.

**ರಾಮು**– ಕಿಶನರಾವ! ವೇದಾಂತದಲ್ಲಿ ನಿಮಗೂ ಗತಿಯಿದ್ದಂತೆ ತೋರುತ್ತದೆ. ಒಳಕ್ಕೆ ಬನ್ನಿ ಆಚಾರ್ಯರ ಭೆಟ್ಟಿಯಾಗಿ ಸಮಯ ಸಿಕ್ಕರೆ ನಾಲ್ಕು ಮಾತುಗಳನ್ನಾಡೋಣ.

**ಕಿಶನ** – ಆಗಲಿ.

( ಒಳಕ್ಕೆ ಹೋಗಿ ಆಚಾರ್ಯರಿಗೆ ನಮಸ್ಕಾರಮಾಡಿ ಕುಳಿತುಕೊಳ್ಳುತ್ತಾರೆ. )

**ಆಚಾರ್ಯ**– ರಾಮರಾಯರೇ ಇವರು ಯಾರು ?

**ರಾಮು**– ಇವರು ನಮ್ಮ ಸಹಾಧ್ಯಾಯಿಗಳು. ಪಾಶ್ಚಾತ್ಯ ವೇದಾಂತ ತರ್ಕಗಳಲ್ಲಿ ಅತಿಕುಶಲರು. ಅದ್ವೈತವೇದಾಂತವನ್ನಾದರೂ ತಿಳಿದವರಾಗಿದ್ದಾರೆ.

**ಆಚಾರ್ಯ**– ವಿಹಿತವಾದುದು.

**ಕಿಶನ**— ಸ್ವಾಮೀ ! ಏನೋ ತಮ್ಮ ತತ್ವಗಳನ್ನು ತಿಳಿಯಬೇಕೆಂಬ ಇಚ್ಛೆಯಿಂದ ಒಂದೆರಡು ಮಾತು ತಮಗೆ ಕೇಳಬೇಕಾಗಿದೆ. ಆಕ್ಷೇಪವಿಲ್ಲವಷ್ಟೇ ? ಆದರೆ ತಮ್ಮ ಶಬ್ದಪ್ರವಾಹದ ಸೆಳೆವಿಗೆ ಮಾತ್ರ ನಾನು ತಡೆಯಲಾರನೆಂದು ಅರಿಕೆ ಮಾಡಿಕೊಳ್ಳುವೆನು

**ಆಚಾರ್ಯ** — ಕಿಶನರಾಯರೇ! ಶಾಸ್ತ್ರಗಳಿಗೆ ಪರಿಭಾಷೆಯೊಂದು ಬಹು ಅಂದಗೇಡಿಯಾದ ಹೆಂಡತಿ ಗಂಟುಬಿದ್ದಿದೆ. ನಮ್ಮ ಶಾಸ್ತ್ರಗಳಷ್ಟೇ ಅಲ್ಲ; ನಿಮ್ಮ ರಸಾಯನ ಶಾಸ್ತ್ರಕ್ಕಾದರೂ H. O. ೨ (ಎಚ್ ಓ ಟೂ=ನೀರಿಗೆ ಪಾರಿಭಾಷಿಕ ಶಬ್ದವು ) ಬಿಟ್ಟಿಲ್ಲ; ಅದರಂತೆಯೇ ಎಲ್ಲಶಾಸ್ತ್ರಗಳ ಸಂಗತಿಯು.

ಈ ಪರಿಭಾಷೆಯು ಕುರೂಪಿಯೂ, ಕಠೋರಳೂ ಆಗಿದ್ದರೂ ಕೆಲಸದಲ್ಲಿ ಬಹುದಕ್ಷಳು. ಆದುದರಿಂದಲೇ ಎಲ್ಲಾ ಶಾಸ್ತ್ರಗಳೂ ಇವಳನ್ನು ಮನ್ನಿಸುವವು. ಆದರೂ ತಮಗೆ ಸುಲಭವಾಗಿ ತಿಳಿಯುಂತೆ ಪ್ರಯತ್ನ ಮಾಡುವೆನು.

**ಕಿಶನ**- ಸ್ವಾಮೀ ತಾವು ಎಂದಾದರೂ ಸಿನೆಮಾಕ್ಕೆ ಹೋಗಿರುವದುಂಟೋ ?

**ಆಚಾರ್ಯರು** — ಅಹುದು ಮೊನ್ನೆ , ಲಂಕಾದಹನಕ್ಕೆ' ವೈದಿಕ ಕೂಟದೊಡನೆ ಹೋಗಿದ್ದೆವು.

**ಕಿಶನ** — ಸರಿಯೋ ತಾವು ಅಲ್ಲಿ ಏನು ನೋಡಿರಿ ?

**ಆಚಾರ್ಯ**— ಒಂದು ಸಣ್ಣ ಕಿಡಿಕೆಯೊಳಗಿಂದ ತಸಬೀರಗಳು ಬಿಳೀ ವಸ್ತ್ರದ ಮೇಲೆ ಮೂಡಿ ಎಲ್ಲತರಹದ ಚೇಷ್ಟೆಗಳನ್ನು ಮಾಡುವವು.

**ಕಿಶನ**— ಆ ಚಿತ್ರಗಳು ತಮಗೆ ಯಲ್ಲಿಯುವರೆಗೆ ಕಾಣುವವು!

**ಆಚಾರ್ಯ**- ಅದು ಏನು ವಿಚಿತ್ರ ರಾಯರೇ ! ಕತ್ತಲೆ ಇರುವವರೆಗೆ ಎಲ್ಲವೂ ಕಾಣುವದು. ಬೆಳಕು ಬಿದ್ದೊಡನೆಯೋ ಎಲ್ಲ ಚಿತ್ರಗಳು ಇಲ್ಲದಂತಾಗಿ ಬಿಳೀ ಪಟವಂದು ಮಾತ್ರ ಕಾಣಹತ್ತುವದು.

**ಕಿಶನ**— ಸ್ವಾಮೀ ಈ ಜಗತ್ತಾದರೂ ಹೀಗಿಯೇ ಇರಲಿಕ್ಕಿಲ್ಲವೇ ಸಿನೇಮಾ ಗೃಹದಲ್ಲಿ ಕತ್ತಲೆ ಕವಿದಾಗ ಆ ಹನುಮಂತನ ಹಾರಾಟವೂ ಲಂಕಾಪಟ್ಟಣದ ಗೋಳಾಟವೂ, ಎಷ್ಟು ಸ್ಪಷ್ಟವಾಗಿ ತೋರುವವು ! ಅದೇ ಬೆಳಕು ಬಿದ್ದೊಡನೆಯೋ ಕತ್ತಲೆಯಲ್ಲಿ ತೋರಿದುದೆಲ್ಲವೂ ಮಾಯವಾಗಿ ಹೊಸ ಜಗವೇ ಮೊಗವೆತ್ತುವದು. ನಾವು ಈಗಾದರೂ ಅಜ್ಞಾನವೆಂಬ ಕತ್ತಲೆಯಲ್ಲಿ ಮುಗ್ಗರಿಸಿ ಬಿದ್ದಿರುವೆವು. ಆದುದರಿಂದಲೇ ನಮಗೆ ಈಗ ನಿಜವೆನಿಸುವದೆಲ್ಲವೂ ಸುಳ್ಳು ಅಥವಾ ಮಿಥ್ಯಾ. ಮುಂದೆ ಅಂಧಃಕಾರವು ಅಳಿದು ಹೋಗಿ ಸುಜ್ಞಾನದ ಸ್ವಚ್ಛಪ್ರಕಾಶವು ಬೀಳಹತ್ತಿದಂತೆ ಈ ಜಗತ್ತೆಲ್ಲವೂ ಮಾಯವಾಗುವದು.

**ಆಚಾರ್ಯ**- ಕಿಶನರಾವ ! ಈ ಜಗತ್ತು ಸುಳ್ಳು ಅಥವಾ ಮಾಯಾ ವೆಂಬುವ ತಮ್ಮ ಅಭಿಪ್ರಾಯವನ್ನಷ್ಟು ವಿಶದ ಮಾಡುವಿರಾ !

**ಕಿಶನ**- ಇದು ನೋಡಿ; ಮೊಲದ ಕೊಂಬು ಆಕಾಶಪುಷ್ಪ ಮುಂತಾದ ಅನೇಕ ಪದಾರ್ಥಗಳು ಈ ಜಗತ್ತಿನಲ್ಲಿ ಎಂದೂ ಇಲ್ಲ. ಆದುದರಿಂದಲೇ ಅವುಗಳಿಗೆ 'ಅಸತ್' ಪದಾರ್ಥಗಳೆನ್ನುವರು. ಈ ಜಗತ್ತು ಮಾತ್ರ ನಮ್ಮ ಕಂಣಿಗೆ ನುಂಣಗೆ ಕಾಣುವದು. ಮುಹ್ಣಪರೂ ಉಣ್ಣಲು ಬಲು ಸವಿತ್ಣಾಗಿ ತಗಲುವದು ಮೊಲದ ಕೊಂಬಿನಂತೆ ಸಟೆ ಹೇಗಾದೀತು !! ಆದರೂ ನಿಜವಾಗಿರುವದು ಒಂದು ಕಂಣಿಗೆ ಕಾಣುವದು ಮತ್ತೊಂದು. ಸಿನೇಮಾದೊಳಗಿನ ಒಂದೇ ಬಿಳೀ ಪಟವು, ಶ್ರೀ ರಾಮಚಂದ್ರನ ವಿರಹತಾಪದಿಂದ ಮಲಿನವಾದ ಪಂಚವಟಿಯೂ, ಸೀತೆಯು ಅಪಹರಣದಿಂದ ತನ್ನ ಮಾನವು ಮುಕ್ಕಾಯಿತೆಂದು ಮರುಗಿ ಅಗ್ನಿಯಲ್ಲಿ ಹಾರಿದ ಲಂಕೆಯೂ ಆಗುವದು. ಈ ಪಂಚವಟಿಯೂ ಲಂಕೆಯೂ ಮೊಲದ ಕೊಂಬಿನಂತೆ ಎಂದೂ ಕಾಣದೇ ಇದ್ದ ಪದಾರ್ಥವೂ ಅಲ್ಲ ಮಿಂಚಿನಂತೆ ವಂಚಿಸಿ ಬಯಲಾಗುವದರಿಂದ ನಿಜವಾದ ವಸ್ತುವೂ ಅಲ್ಲ. ಆದುದರಿಂದಲೇ ಈ ಜಗತ್ತಿನ ಸ್ವರೂಪವು ಹೀಗೆಂದು ನಿರ್ಣಯಿಸಲು ಬರುವದಿಲ್ಲೆಂದು ಶಾಸ್ತ್ರಕಾರರು ಅನ್ನುವರು. ಅದು ಸತ್ಯವೂ ಅಲ್ಲ ಅಸತ್ಯವೂ ಅಲ್ಲ ಇವೆರಡಕ್ಕೂ ವಿಲಕ್ಷಣವಾದುದು.

**ಆಚಾರ್ಯ**- ಕಿಶನರಾವ ನಮ್ಮ ನಿದರ್ಶನಕ್ಕೆ ಬಂದ ವಸ್ತುಗಳನ್ನು ವಿಂಗಡಿಸಿದರೆ ಕೆಲವು ಸತ್ಯವಸ್ತುಗಳೂ ಕೆಲವು ಅಸತ್ಯ ವಸ್ತುಗಳೂ ಎಂದು ಎರಡೇ ಭಾಗಗಳು ಸಿದ್ಧವಾಗುವವು ಈ ಜಗತ್ತು ಸತ್ಯವಲ್ಲವ ಮೇಲೆ ಮೊಲದ ಕೊಂಬಿನಂತೆ ಅಸತ್ಯವಾಗಬೇಕು. ಅದು ಅಸತ್ಯವೂ ಅಲ್ಲವೆಂದು ಹೇಗೆನ್ನುವಿರಿ?

**ಕಿಶನ**- ಆಕಾಶಪುಷ್ಪ ಮೊದಲಾದ ಪದಾರ್ಥಗಳು ಅಸತ್ ಪದಾರ್ಥಗಳು. ಪರಬ್ರಹ್ಮನು ಸತ್ ಅಥವಾ ನಿಜವಾದ ವಸ್ತುವು. ಕಂಣಿಗೆ

ತೋರಿ ಬಯಲಾಗುವ ವಸ್ತುಗಳು ವ್ಯಾವಹಾರಿಕ ಸತ್ ಪದಾರ್ಥಗಳು ಈ ಜಗತ್ತು ಸತ್ಯವಲ್ಲ. ಆದರೆ ವ್ಯಾವಹಾರಿಕ ಸತ್ಯವಾದುದು.

**ಆಚಾರ್ಯ**— ವ್ಯವಹಾರಿಕ ಸತ್ಯವೆಂದರೇನು ? ಆ ಪದಾರ್ಥವು ಎಂತಹದು.

**ಕಿಶನ**— ಈಗ ಸೂರ್ಯನು ಪ್ರಕಾಶದಲ್ಲಿ ' ಲಕ್ ಲಕ್ ' ಹೊಳೆಯುವ ಸಿಂಪು ದೂರದಲ್ಲಿ ನೋಡುವವರಿಗೆ ಬೆಳ್ಳಿಯಂತೆ ತೋರುವದು. ಆ ಬೆಳ್ಳಿಯು ಸಮೀಪದಲ್ಲಿ ಹೋಗುವವರೆಗೆ ತೋರಿ ಅಲ್ಲಿ ಹೋದ ಕೂಡಲೇ ಸಿಂಪಾಗುವದು. ಹೀಗೆ ಮೊದಲು ಒಂದು ಬಗೆಯಿಂದ ತೋರಿ ಸಮೀಪದಲ್ಲಿ ಹೋದರೆ ಮತ್ತೊಂದು ಬಗೆಯಾಗಿ ಕಾಣಲು ಅದಕ್ಕೆ ಭ್ರಮವೆನ್ನುವರು. ಸಿಂಪು ಬೆಳ್ಳಿಯಂತೆ ತೋರುವದು ಭ್ರಮ. ಅದು ಬೆಳ್ಳಿಯಲ್ಲ, ಸಿಂಪು ಎಂದು ತಿಳಿಯುವದೇ ಆ ಭ್ರಮದ ನಾಶ ಅಥವಾ ಬಾಧೆ ಈ ಜಗತ್ತಾದರೂ ಅಖಂಡ ಸಚ್ಚಿದಾನಂದ ಬ್ರಹ್ಮನ ಮೇಲೆ ತೋರಿ ಆ ಬ್ರಹ್ಮಜ್ಞಾನವಾದ ಕೂಡಲೇ ಬಯಲಾಗುವದು. ಸಿಂಪಿನ ಭ್ರಮವು ಬೇಗ ಬಯಲಾಗುವದರಿಂದ ಅದಕ್ಕೆ ಪ್ರಾತಿಭಾಸಿಕವೆಂದೂ ಈ ಜಗತ್ತಿನ ಭ್ರಮವು ಬಹು ದಿವಸಗಳಿಂದ ದೂರಾಗುವದರಿಂದ ಅದಕ್ಕೆ ವ್ಯಾವಹಾರಿಕವೆಂದೂ ಶಾಸ್ತ್ರಕಾರರು ಹೇಳುವರು.

**ಆಚಾರ್ಯ**— ಅಂತೂ ಜಗತ್ತಿನ ಬಾಳುವಿಕೆಯು ( ಸತ್ತಾ ) ನಮ್ಮ ಭ್ರಮ ಮೂಲಕವಾದುದು. ಮುಂದೆ ಬ್ರಹ್ಮಜ್ಞಾನದಿಂದ ಈ ಭ್ರಮವು ನಾಶವಾಗುವದೆಂದು ಹೇಳಿದಂತಾಯಿತು. ಎಂದ ಮೇಲೆ ಈ ಜಗತ್ತು ಮೊಲದ ಕೋಂಬಿನಂತೆ ನಿಜವಾಗಿ ಅಸತ್ಯವೆಂದೇ ಅಂದಂತಾಯಿತು. ಈ ಜಗತ್ತು ಪ್ರತ್ಯಕ್ಷ ತೋರುತ್ತಿರಲು ಅದಕ್ಕೆ ಅಸತ್ಯ ವೆನ್ನಬೇಕೇ ? ಈ ಪ್ರಶ್ನವಂತೂ ಹಾಗಿರಲಿ. ನೀವು ಸಿನೇಮಾದಲ್ಲಿ ಕತ್ತಲೆ ಕವಿದಾಗ ತೋರುವದೆಲ್ಲವೂ ಮುಂದೆ ಪ್ರಕಾಶ ಬಿದ್ದಮೇಲೆ ಬಯಲಾಗುವದರಿಂದ ಈ ಜಗತ್ತಾದರೂ ದೂರಾಗುವದೆಂದು ಅನುಮಾನ ತೆಗೆದಿರಿ. ಆದರೆ ಈ ಅನುಮಾನವು

ನಿಮ್ಮನ್ನು ಬಾಧಿಸುವದು. ಇದು ನೋಡಿ ! ಸಿನೇಮಾದಲ್ಲಿ ಲಂಕಾದಹನವು ಪ್ರಾರಂಭವಾಯಿತು. ರಾಮನ ವಿರಹಾವಸ್ಥೆಯಿಂದ ' ನನಗೆ ' ವ್ಯಥೆಯಾಯಿತು. ಹನುಮಂತನ ನಿಶ್ಚಲ ಭಕ್ತಿಯಿಂದ ' ನಾನು ' ಹರ್ಷಾತಿರೇಕದಿಂದ ಭರಿತನಾದೆನು– ಕತ್ತಲೆಯು ಮುಸುಗಿದ್ದರೂ ' ನಾನು ' ಸುಖಿ ನಾನು ದುಃಖಿ ಎಂಬ ನನ್ನ ವಿಚಾರಗಳ ಮೇಲಿಂದ ನನ್ನನ್ನು ನಾನು ಮರೆತಿರಲಿಲ್ಲವೆಂದು ನಿಶ್ಚಯವಾಯಿತು. ಇಷ್ಟೇ ಅಲ್ಲ ನನಗೆ ' ನಾನು ' ತೋರುತ್ತಿದ್ದೆನು. ಪ್ರಕಾಶ ಬಿದ್ದರೂ ' ನಾನು ' ಅಳಿದು ಹೋಗಲಿಲ್ಲ. ಅಲ್ಲಿಯೆ ಖುರ್ಚಿಯ ಮೇಲೆ ಸ್ವಸ್ಥ ಕುಳಿತಿದ್ದೆನು. ಎಂದ ಮೇಲೆ ಕತ್ತಲೆಯಲ್ಲಿ ಕಂಡದ್ದೆಲ್ಲವೂ ಬಯಲಾಗುವ ಬಗೆ ಹೇಗೆ ? ಅದರಂತೆಯೇ ನಮಗೀಗ ಜಗತ್ತಿನ ಜ್ಞಾನವಾಗುವಂತೆ ಆತ್ಮನ ಜ್ಞಾನವೂ ಆಗುವದು. ಆದುದರಿಂದ ಆ ಆತ್ಮನೂ ಸುಳ್ಳೇನು ? ಇಷ್ಟು ದೂರವೇಕೆ ! ಸಿನೇಮಾದಲ್ಲಿರುವ ಹನುಮಂತನೇ ಸುಳ್ಳಾದ ಮೇಲೆ ಅವನು ಶ್ರೀ ರಾಮನಿಗೆ ಅಭಿವಚನ ಕೊಟ್ಟದ್ದು ಸೀತಾದೇವಿಗೆ ತನ್ನ ಗುರುತು ಹೇಳಿದ್ದೆಲ್ಲವೂ ಸುಳ್ಳಲ್ಲವೇ ?ಅದರಂತೆಯೆ ಈ ಜಗತ್ತೇ ಮಿಥ್ಯಾ ಆದರೆ, ಈ ಜಗತ್ತಿನಲ್ಲಿರುವ ನಾವೂ ನಮ್ಮ ವಿಚಾರಗಳೂ, ನಮ್ಮ ಆಚಾರಗಳೂ ಎಲ್ಲವು ಸುಳ್ಳು, ಎಂದ ಮೇಲೆ ಜಗತ್ತು ಮಿಥ್ಯಾ ಎಂಬ ನಮ್ಮ ಊಹೆಯಾದರೂ ಸತ್ಯವೆಂದು ಹೇಗೆ ಹೇಳಬೇಕು ?

**ಕಿಶನ**— ಹಾಗಾದರೆ ಈ ಜಗತ್ತು ಸತ್ಯವಾದುದೇನು ?

**ಆಚಾರ್ಯ** — ರಾಯರೇ ಇದರಲ್ಲಿ ಏನಾದರೂ ಸಂಶಯ ಉಂಟೇನು ? ಸಿನೆಮಾದಲ್ಲಿ ಬಿಳೀಪಟದ ಮೇಲೆ ಮೂಡಿ ಮಾಯವಾಗುವ ಚಿತ್ರಗಳು ಸುಳ್ಳೇನು ? ಛೇ ಎಂದೂ ಅಲ್ಲ. ಸ್ವಲ್ಪ ಹಿಂತಿರುಗಿ ನೋಡಿ; ನಿಮಗೇನು ಕಾಣುವದು ? ಒಂದು ಸಣ್ಣ ಛಿದ್ರದೊಳಗಿಂದ ಪ್ರಕಾಶವು ಹೊರಟು ಆ ಬಿಳೀಪಟವನ್ನು ಆಚ್ಛಾದಿಸಿರುವದು. ಸ್ವಲ್ಪ ಹೊರಗೆ ಬನ್ನಿ ಆ ಪ್ರಕಾಶವು ಎಲ್ಲಿಂದ ಬರುವದು ನೋಡೋಣ. ಇದು ನೋಡಿ ಏನು ಚಮತ್ಕಾರ!! ಪ್ರಖರವಾದ ದೀಪದ ಪ್ರಕಾಶವು ತಸಬೀರಗಳ ಮೇಲೆ ಬಿದ್ದು ಆ ಮೇಲೆ ಆ

ಕಿಟಕಿ ಯೊಳಗಿಂದ ಹೊರಬಿದ್ದದೆ. ಈ ಪ್ರಕಾಶದ ಸಹಾಯದಿಂದ ತಸಬೀರಗಳು ಬಿಳೀ ಪಟದ ಮೇಲೆ ಮೂಡಿ ಅನೇಕ ಚೇಷ್ಟೆಗಳನ್ನು ಮಾಡುತ್ತಲಿವೆ, ಬದಿಯಲ್ಲಿಯೇ ಒಬ್ಬನು ಕುಳಿತು ಸರ್ವಕಾರ್ಯಗಳನ್ನು ನಿರ್ವಹಿಸುತ್ತಾನೆ. ಇದರಲ್ಲಿ ತಸಬೀರುಗಳು ಸುಳ್ಳೇನು; ಅಥವಾ ಪ್ರಕಾಶ ಸುಳ್ಳೇನು ? ಎಂದೂ ಅಲ್ಲ; ಎಂದ ಮೇಲೆ ಆ ಬಿಳೀ ಪಟದ ಮೇಲೆ ಮೂಡಿದ ಗೊಂಬೆಗಳೇನು ಅಪರಾಧ ಮಾಡಿರುವವು ? ಸ್ವಲ್ಪ ಹೊತ್ತು ಮೂಡಿ ಮುಳುಗುವ ಮಾತ್ರದಿಂದ ಅವು ಅಲ್ಪಾಯುಷಿಗಳಾದರೂ ಸುಳ್ಳಾಗಲಾರವು. ಆದರೆ ಆ ಚಿತ್ರಗಳಲ್ಲಿ ತೋರುವ ಎಲ್ಲ ಚಲನವಲನಗಳು ಆ ಚಿತ್ರಗಳಲ್ಲಿಲ್ಲ, ಅದು ಆ ಚಕ್ರದಲ್ಲಿರುವದು. ಅದರಂತೆಯೇ ಆ ಚಿತ್ರಗಳು ಸ್ವತಂತ್ರವಲ್ಲ-ಅವು ಆ ಚಾಲಕನ ಇಚ್ಛಾನುವೃತ್ತಿಗಳು. ಹೀಗಿದ್ದೂ ಅವು ಸ್ವತಂತ್ರವಾಗಿ ಎಲ್ಲ ಕಾರ್ಯಗಳನ್ನು ಮಾಡುತ್ತವೆ ಎಂದು ಗ್ರಹಿಸಿದರೆ ಅದು ಮಾತ್ರ ಮರುಳತನವು ಹೀಗೆಯೇ ಈ ಜಗತ್ತಾದರೂ ಅನಿತ್ಯವೆಂದು ಹೇಳಬಹುದು ಆದರೆ ಅಸತ್ಯವೆಂದು ಹೇಳಲಾಗದು. ಯಾಕಂದರೆ ಪ್ರತ್ಯಕ್ಷವಾಗಿ ಈ ಕಂಣಿಗೆ ತೋರುವ ಜಗವು ಹೊಗೆ ಹ್ಯಾಗಾದೀತು ?

**ಶಿಶನ**— ಹಾಗಾದರೆ ಕಂಣಿಗೆ ತೋರುವದೆಲ್ಲವೂ ನಿಜವೇನು ?

**ಆಚಾರ್ಯ**— ಛೇ ಹಾಗೆಂದೂ ಅನ್ನಲಾರೆವು. ಚೈತ್ರ ವೈಶಾಖಮಾಸ ಬಿಸಲು ಕೆಂಡದಂತೆ ಸುರಿಯುತ್ತಿದೆ. ಪಾಂತಸ್ಥನೊಬ್ಬನು ನೀರಡಕೆಯಿಂದ ಬಾಯಾರಿ ಬೇಸರಗೊಂಡು ಒಂದು ಗಿಡದ ಕೆಳಕ್ಕೆ ಕುಳಿತುಕೊಂಡನು ಜಲಾಶಯು ಒಂದು ಕಾಣಹತ್ತಿತು. ಆಗ ಆ ದಾರೀಕಾರನಿಗೆ ಅದು ಬಿಸಲ್ಗುದರೆ ಎಂಬ ಸಂಶಯವು ಬಾಧಿಸಹತ್ತಿತು. ಆದರೂ ನೀರಡಕೆಯ ಪೀಡೆಯನ್ನು ತಡೆಯಲಾರದೇ ಎದ್ದು ಆ ಜಲಾಶಯದ ಕಡೆಗೆ ಹೊರಟನು ನಿಜವಾಗಿ ಅದು ನೀರು ಬಿಸಲ್ಗುದರೆ ಅಲ್ಲ. ಅವನಿಗೆ ಬಹು ಆನಂದವಾಗಿ ಮೆಲ್ಲಮೆಲ್ಲನೆ ನೀರು ಕುಡಿದು ನೀರಡಿಕೆಯನ್ನು ತೀರಿಸಿಕೊಂಡನು. ಆಗ ಅವನಿಗೆ ಅದು ಬಿಸಲ್ಗುದರೆ ಎಂಬ ಭ್ರಾಂತಿಯು ಹೋಯಿತು. ಹೀಗೆಯೇ

ಕಂಣಿಗೆ ಮೋಸವಾದರೆ ವಾಸನೆಯಿಂದ ಪರೀಕ್ಷಿಸಬೇಕು; ಅದರಿಂದಲೂ ನಿಶ್ಚಯವಾಗದಿದ್ದರೆ ಕಿವಿಯಿಂದ ಕೇಳಬೇಕು; ಸ್ಪರ್ಶದಿಂದ ಮುಟ್ಟಬೇಕು. ನಾಲಿಗೆಯಿಂದ ರುಚಿ ನೋಡ ಬೇಕು. ಇವೆಲ್ಲವುಗಳಿಗೂ ಬಗೆಹರಿಯದಿದ್ದರೆ ನಿಮ್ಮ ಅಂತರಾತ್ಮನಿಗೆ ಅಪೀಲು ಮಾಡಬೇಕು. ಇಂದ್ರಿಯಗೋಚರವಾದ ಎಲ್ಲ ವಸ್ತುಗಳನ್ನು ನಿರ್ಣಯಿಸತಕ್ಕ ನ್ಯಾಯಾಧೀಶನು ಇವನೇ ಮಂಣಿನಲ್ಲಿ ಹುಟ್ಟಿ ಮಂಣಿಗಾಗಿ ಜೀವಿಸಿ ಕಡೆಗೆ ಮಂಣುಪಾಲಾಗಿ ಹೋದರೂ ಈ ಮಂಣು ಮಾಯವೆಂಬುವದು ಮೂರ್ಖತನವಲ್ಲವೇ.

**ಶಿಶನ—** ಹೀಗೆ ಈ ಜಗತ್ತು ಸತ್ಯವಾದರೆ ಇದರಲ್ಲಿ ವಿರಕ್ತಿಏಕೆ ? ವಿರಕ್ತಿ ಇಲ್ಲದೆ ಮುಕ್ತಿ ಸಿಗಲಾರದು. ಆದುದರಿಂದಲೇ ಸಜ್ಜನರು ಈ ಜಗತ್ತು ಒಂದು ಕಣ್ ಕಟ್ಟು; ಅದರಲ್ಲಿ ಮನ ನಡಿಸಬೇಡಿರೆಂದು, ಸಾರಿ ಸಾರಿ ಕೂಗುವರು.


**ಆಚಾರ್ಯ**—ರಾಯರೇ ಈ ಜಗತ್ತು ಕಣಕಟ್ಟಾಟವಲ್ಲ. ಮನುಷ್ಯನು ಅಹಂಭಾವದಿಂದ ಮತ್ತನಾಗಿ ಸೃಷ್ಟಿಕರ್ತನ ಕೀಲವನ್ನು ತಿಳಿಯುವಲೇ 'ಈ ಜಗತ್ತೆಲ್ಲವೂ ನನ್ನ ಸುಖಕ್ಕಾಗಿರುವದು ನಾನು ಈ ಮಣ್ಣಿನ ಮಾಲಕನೆಂದು ಹಂಬಲಿಸುತ್ತಾ ವ್ಯವಹರಿಯುವೆನು ಜಗತ್ತಿನಲ್ಲಿಯ ಎಲ್ಲ ಪದಾರ್ಥಗಳು ವಿಕಾರ ಹೊಂದುವವು. ಅವುಗಳ ಮೂಲ್ಯವು ಹೆಚ್ಚುಕಡಿಮೆಯಾಗುವದು. ಈ ಜಗತ್ತು ಅನಿತ್ಯವಾಗಿದ್ದರೂ ಇದು ನಿತ್ಯವೆಂದು ತಿಳಿಯುವನು. ಅದರಂತೆಯೇ ವರ್ತಿಸುವನು ಇದೇ ಭ್ರಮವು. ಈ ಭ್ರಮದ ಮಡುವಿನಲ್ಲಿ ಬೀಳಬೇಡರೆಂದು ಸಜ್ಜನರು ಹೇಳುವರು. ರಾಯರೇ ಸ್ವಲ್ಪ ಈ ವಿಶ್ವದ ಅಗಾಧ ಚಿತ್ರವನ್ನು ಕಣ್ಣೆದುರಿಗೆ ತಂದುಕೊಳ್ಳಿ ! ಭೂಪ್ರಷ್ಟದಲ್ಲಿ ನಿಂತು ಮೇಲೆ ನೋಡಲು ಅನಂತವಾದ ಆಕಾಶವು ಆವರಿಸಿರುವದು. ನಾವಿ

ರುವ ಭೂಮಿಯಕಿಂತಲೂ ಅನೇಕಪಟ್ಟು ದೊಡ್ಡವನಾದ ಸೂರ್ಯನು ಪ್ರಕಾಶಿಸುವನು. ಬೆಳಕು ಬೆಳಕೆಂದು ಬೆಳಕಿಗೆ ಮರುಳಾಗ ಬೇಡಿರಿ ಕತ್ತಲೆಯನ್ನು ಹಳಿಯ ಬೇಡಿರಿ. ಕತ್ತಲೆಯ ಗರ್ಭದಲ್ಲಿ ಅನಂತ ಜ್ಯೋತಿಗಳು ಮಿಣುಕುತ್ತಿರುವವು. ಚಂದ್ರನು ಶಾಂತನಾಗಿ ಈ ಜಗತ್ತನ್ನು ಬೆಳಗುತ್ತಿರುವನು ಏನು ಬ್ರಹ್ಮಾಂಡ ಕಟಾಹವಿದು. ಏನು ಪ್ರಚಂಡವಾದ ವ್ಯಾಪಾರವಿದು. ಆದರೂ ಇದರಲ್ಲಿ ಸ್ವಲ್ಪ ಕೂಡಾ ಅರಾಜಕತೆಯಿಲ್ಲ; ನಿಯಮ; ನಿಯಮ; ಈ ಭವ್ಯವಾದ ವಿಶ್ವವು ನಿಯಮಗಳಿಂದ ಸುತ್ತಲೂ ಬಿಗಿಯಲ್ಪಟ್ಟಿದೆ. ಕಡ್ಡಿಯೂ ಕೂಡ ನಿಯಮ ವಿಲ್ಲದೆ ಕದಲಲಾರದು. ಇಂತಹ ಅಗಾಧವಾದ ಚಿತ್ರದ ಹಿಂದೆ ಒಂದು ಸ್ವತಂತ್ರವಾದ ಇಚ್ಛೆಯು ಈ ವಿಶ್ವದ ಚಾಲಕತ್ವವನ್ನು ವಹಿಸಿರಬೇಕೆಂದು ಪ್ರತಿಯೊಬ್ಬನಿಗೆ ಮನವರಿಕೆಯಾಗುತ್ತದೆ. ಅವನ ಇಚ್ಛೆಯಿಂದಲೇ ಬೇಗು ಬೆಳಗು; ಮೂಡುವದು; ಮುಳುಗುವದು. ಆದರೆ ಈ ವಿಶ್ವವೆಲ್ಲವೂ ಬಿರುಗಾಳಿಗೆ ಬಯಲಾಗುವ ಧೂಳವಾಗಿದ್ದರೆ ಆ ಈಶ್ವರನ ಐಶ್ವರ್ಯವೇತಹದು; ಆ ಸರ್ವಸಮರ್ಥನ ಸಾಮರ್ಥ್ಯಕ್ಕೆ ಏನೆನ್ನಬೇಕು! ಸೃಷ್ಟಿಯು ಅನಿತ್ಯವಾದರೂ ನಿಜವಾದುದೆಂದು ಆ ಈಶ್ವರನು ಈಶ್ವರನು, ಆ ಸೃಷ್ಟಿಕರ್ತನು ಸೃಷ್ಟಿಕರ್ತನು. ಕಣ್ಣಿನಿಂದ ನೋಡಲಾರದೇ, ಕಿವಿಯಿಂದ ಕೇಳಿದರೂ ನಂಬಲಿಕ್ಕೆ ಇಚ್ಛೆಯಿಲ್ಲದೆ ನಮ್ಮ ಮನಸ್ಸು, ಸೃಷ್ಟಿಯ ಅನಂತ ವ್ಯಾಪಾರಗಳ ಸುವ್ಯವಸ್ಥಿತೆಯನ್ನೂ, ಸೂಕ್ಷ್ಮತೆಯನ್ನೂ, ನೋಡಿ ಗಾಬರಿಯಾಗಿ ತನ್ನ ಕುತ್ಸಿತ ಶಂಕೆಗಳನ್ನು ಬದಿಗಿರಿಸಿ ಆಸ್ತಿಕ ಬುದ್ಧಿಯಿಂದ ಪರಮಾತ್ಮನೆಡೆಗೆ ನಡುನಡುಗುತ್ತಾ ತೆರಳುವದು. ಪರಮಾತ್ಮನ ಮಹಾತ್ಮ್ಯದ ಅಗಾಧ ನಿದರ್ಶನವಾದ ಈ ಸೃಷ್ಟಿಯೇ ಸುಳ್ಳಾದಮೇಲೆ, ಆ ಸೃಷ್ಟಿಕರ್ತನಾದರೂ ಸುಳ್ಳು, ಅವನ ಮಹಾತ್ಮ್ಯವೂ ಸುಳ್ಳು. ಎಲ್ಲವೂ ಸುಳ್ಳು. ನಮ್ಮ ಮರುಳತನ ಒಂದೇ ನಿಜವಲ್ಲವೇ !!

**ಕಿಶನ**— ರಾಮರಾವ ಆಚಾರ್ಯರ ಯೋಗ್ಯತೆಯು ನನಗೆ ಮೊದಲು ತಿಳಿದಿರಲಿಲ್ಲ. ಅವರು ನನಗೆ ಈ ಹೊತ್ತು ವಿಚಾರದ ಹೊಸದಾರಿಯನ್ನು ತೋರಿಸಿದ್ದರಿಂದ ನಾನು ಅವರಿಗೆ ಅತ್ಯಂತ ಋಣಿಯಾಗಿದ್ದೇನೆ ಇಂತಹ ಗುರುಗಳ ಕೈಯಲ್ಲಿ ಅನೇಕ ಜನ ಶಿಷ್ಯರು ತಯಾರಾಗಬೇಕು. ಅದೇ ನಮ್ಮ ನಿಜವಾದ ಭಾರತಮಾತೆಯ ಏಳ್ಗೆಯು. ಇನ್ನು ಹೊತ್ತಾಯಿತು. ಆಚಾರ್ಯರೇ ಅಪ್ಪಣೆಯನ್ನು ಕೊಡಬೇಕು.

**ಆಚಾರ್ಯ**— ಒಳ್ಳೇದು ಹೋಗಿಬರೋಣಾಗಲಿ.

ಪಾಠಶಾಲೆಯು ಲಕ್ಷದಲ್ಲಿರಲಿ.



## ೪ನೇ ಪ್ರಕರಣ

# ಜಟ್ಟಿಗಳ ಕುಸ್ತಿ.

( ಕಥಾಲಕ್ಷಣದ ಆಧಾರದಿಂದ ಬರೆದದ್ದು )

ಜೀವನವು ಜಗಜಟ್ಟಿಯ ಕುಸ್ತಿಯು. ( Life is a great struggle ) ರಾಜನು ಚತುರಂಗ ಬಲದೊಡನೆ ಹೋರಾಡುವದೂ, ಪಂಡಿತನು ಪಂಡಿತನೊಡನೆ ವಾದವಿವಾದ ಮಾಡುವದೂ, ಯತಿಯು ವಿಕಾರಗಳನ್ನು ಹತ್ತೊತ್ತುವದೂ, ಈ ಕುಸ್ತಿಯ ಪ್ರಕಾರಗಳು. ರಾಜನು ಶರೀರದಿಂದ ಹೋರಾಡುವನು; ಪಂಡಿತನು ನಾಲಿಗೆಯಿಂದ ಕಲಹ ಮಾಡುವನು; ಯತಿಯು ಮನಸ್ಸಿನಿಂದ ಗೆಲ್ಲುವನು.

ಇಲ್ಲಿ ಹೋರಾಡುವವರು ವಾಕ್ಚತುರರು; ಸಭಾಸ್ಥಾನವೇ ಅವರ ಕಣವು. ಮಧ್ಯಸ್ತರೇ ನಿರ್ಣಯ ಹೇಳುವವರು. ವಿಚಾರಸರಣಿಯೇ ಅವರ ಪದ್ಧತಿಯು. ವಾಕ್ಚಾಪಲ್ಯವೇ ಅವರ ಆಯುಧವು. ಗುರುಶಿಷ್ಯರು ತತ್ವವನ್ನು ತಿಳಿಯುವದಕ್ಕೆ, ಮತ್ತು ಸರಿಗಟ್ಟುವ ಪಂಡಿತರು ಈರ್ಷೆಗೆ ಬಿದ್ದು ಧನಮಾನಗಳಿಗೆ, ವಾದವಿವಾದ ಮಾಡುವರು. ಈ ವಾಗ್ಯುದ್ಧವಾದರೂ ನಿಯಮಬದ್ಧವಾದುದು. ವಾದವನ್ನು ಹೇಗೆ ಮಾಡಬೇಕು, ಜ

ಯಾಪಜಯಗಳ ನಿರ್ಣಯವನ್ನು ಯಾರು ಮಾಡಬೇಕು ಮುಂತಾದ ನಿಯಮಗಳನ್ನು ಸಂಕ್ಷೇಪದಿಂದ ವಿವರಿಸುವದೇ ಈ ಲೇಖನದ ಉದ್ದೇಶವು.

ಎಲ್ಲ ಪ್ರಕರಣಗ್ರಂಥಗಳು ಪರಮೋದ್ದೇಶವಾದ ತತ್ವಜ್ಞಾನದ ಗೋಸುಗ ಹೊರಟಿರುತ್ತವೆ. ವಾದವಿವಾದದ ಹಾಳುರಗಳೇಕೆ ಇದರಲ್ಲಿ ಸೇರಬೇಕೆಂದು ಕೆಲವರು ಆಕ್ಷೇಪಿಸಬಹುದು. ಆದರೆ ಸ್ವಲ್ಪ ಸೂಕ್ಷ್ಮದೃಷ್ಟಿಯಿಂದ ವಿಚಾರ ಮಾಡಲಾಗಿ ಈ ಆಕ್ಷೇಪವು ಸರಿಯಲ್ಲವೆಂದು ಎಲ್ಲರೂ ಮನಗಾಣುವರು. ಈ ವಾದವಿವಾದಕ್ಕೆ 'ಕಥಾ' ಎಂದು ಹೆಸರುಂಟು. ಇದು ವಾದ, ಜಲ್ಪ, ವಿತಂಡವೆಂದು ಮೂರುವಿಧವಾಗಿರುವದು. ಈ ಮೂರೂ ವಿಧವಾದ ಕಥಾಪ್ರಸಂಗವು ಅಜ್ಞಾನವನ್ನೂ ಸಂಶಯವನ್ನೂ ಹೊಡೆದೋಡಿಸಿ ಪಾಷಂಡಿಗಳ ಮತದ ಗಾಳಿಯುಕೂಡಾ ಸೋಂಕದಂತೆ ತತ್ವಜ್ಞಾನಕ್ಕೆ ನೆರವಾಗುವದು. ಆದುದರಿಂದಲೇ ಈ ಕಥಾ ಪ್ರಸಂಗವು ಹರಟೆಕೊಚ್ಚುವ ಹಾಳುರಗಳೆಯಲ್ಲ; ಆದರೆ ಈ ವಾದವಿವಾದದಿಂದ ತತ್ವವು, ಮಜ್ಜಿಗೆಯೊಳಗಿಂದ ಬೆಣ್ಣೆಯು ತೇಲುವಂತೆ, ಮೇಲೆ ತೋರಹತ್ತುವದು. ಮನಸಿನೊಳಗಿನ ಅಜ್ಞಾನವು ಅಳಿದು ಹೋಗುವದು; ಅಲ್ಲದ ಸಂಶಯಗಳು ಬಂದು ನಮ್ಮ ಮನಸ್ಸನ್ನು ತಲ್ಲಣಗೊಳಿಸುತ್ತಿರಲು ಈ ಕಥಾಪ್ರಸಂಗದಿಂದ ಅವೆಲ್ಲವೂ ದೂರಾಗುವವು.

ಅನೇಕ ವಿದ್ವಜ್ಜನರುಕೂಡಿ, ವಿಚಾರಯುಕ್ತ ವಾಕ್ಯಗಳನ್ನು ಪ್ರಯೋಗಿಸುವದೇ ಕಥೆಯೆನಿಸುವದು. ಕಥೆಯಲ್ಲಿ ಪ್ರಯೋಗಿಸುವ ಮಹಾವಾಕ್ಯಗಳನ್ನು ತಿಳಿಯುವಷ್ಟು ಅವರಿಗೆ ವಿದ್ವತ್ತೆ ಇದ್ದರಾಯಿತು. ಮೇಲಾಗಿ ಅವರು ಶಾಂತಚಿತ್ತರೂ ಸರ್ವಜನರ ವಿಶ್ವಾಸಕ್ಕೆ ಪಾತ್ರರೂ, ಕಾಲುಕೆದರಿ ಜಗಳ ತೆಗೆಯದವರೂ ಇರಬೇಕು. ಪೂರ್ವಪಕ್ಷವು ಪ್ರಬಲವಿರುವದೋ ಉತ್ತರಪಕ್ಷವು ಪ್ರಬಲ ವಿರುವದೋ ಎಂದು ತಿಳಿಯುವದೇ ವಿಚಾರವೆನಿಸುವದು.

ಮೊದಲು ಹೇಳಿದಂತೆ ಈ ಕಥೆಯು ವಾದ, ಜಲ್ಪ ವಿತಂಡಗಳೆಂದು ಮೂರು ವಿಧವಾಗಿರುವದು. ಗುರುಶಿಷ್ಯರು ಪರಸ್ಪರ ಪ್ರೇಮದಿಂದ ಈ ಷಾರ್ಸಸೂಯಗಳನ್ನು ತೊಲಗಿ ತತ್ವವನ್ನು ನಿರ್ಣಯಿಸಬೇಕೆಂದು ಸಂವಾದ ಮಾಡುವದು. ಅದೇ ವಾದವೆನಿಸುವದು. ಗುರುಶಿಷ್ಯರು ತತ್ವವನ್ನು ನಿಶ್ಚಯಿಸಿದ್ದರೂ ಸಭೆಯ ಕಲ್ಯಾಣಕ್ಕಾಗಿ ವಾದವಿವಾದ ಮಾಡಿದರೂ, ಅದೂ ವಾದವೆನಿಸುವದು. ಮಿತ್ರರಾಗಲೀ ಅಥವಾ ನಿರಪೇಕ್ಷಿಗಳಾದ ಸಜ್ಜನರಾಗಲೀ ವಾದ ಕಥೆಯನ್ನು ಪ್ರಾರಂಭಿಸಬಹುದು.

ಇನ್ನು ಎರಡನೇ ವಿಧವಾದ ಜಲ್ಪ ಕಥೆಯಲ್ಲಿ ಸಜ್ಜನರೇ ಸ್ಪರ್ಧೆಯಿಂದ ದ್ರವ್ಯಸಂಪಾದಿಸಬೇಕೆಂದಾಗಲೀ, ಬಹು ಜನರಲ್ಲಿ ಮಾನಹೊಂದಬೇಕೆಂದಾಗಲೀ ಸೇರುವರು. ಆದರೆ ಅವರಿಂದೂ ಅನ್ಯಾಯ ಮಾರ್ಗವನ್ನು ಹಿಡಿಯುವದಿಲ್ಲ. ಮೂರನೇ ವಿಧವಾದ ವಿತಂಡಾ ಕಥೆಯಲ್ಲಿ ಮಾತ್ರ ಪಾಷಂಡಿಗಳ ಕೂಡ ಪ್ರಸಂಗ ಮಾಡಬೇಕಾಗುವದು. ಈ ಜಗತ್ತೇ ಹುಟ್ಟಿವದೆಂದು ಗೃಹಿಸಿ, ತಿಂದುಂಡು ತಿರುಗುವ ಚಾರ್ವಾಕನಾಗಲೀ ಎಲ್ಲವೂ ಶೂನ್ಯವು ಎಲ್ಲವೂ ಕ್ಷಣಿಕವೆಂದು ಹೇಳುವ ಬೌದ್ಧನಾಗಲೀ ಬಂದರೆ, ಈ ವಿತಂಡಾರೂಪಕಥೆಯನ್ನು ಸುರುವು ಮಾಡಬೇಕು. ಜಲ್ಪದಲ್ಲಿ ಇಬ್ಬರೂ ಸಜ್ಜನರು ಕೂಡಿ ವಾದ ಮಾಡುವದರಿಂದ ವಾದಿಪ್ರತಿವಾದಿಗಳಿಬ್ಬರೂ ತಮ್ಮ ಪಕ್ಷವನ್ನು ಸಾಧಿಸಿಕೊಂಡು ಪರಪಕ್ಷವನ್ನು ದೂಷಿಸುವರು. ಆದರೆ ಪಾಷಂಡಿಯ ಕೂಡ ವಾದ ಮಾಡಬೇಕಾದರೆ ಸಜ್ಜನರು ವಿತಂಡಾಕಥೆಯಲ್ಲಿ ತಮ್ಮ ತತ್ವಗಳನ್ನೊಂದೂ ಬೈಲಿಗೆ ತರಬಾರದು. ಅವರು ವೇದವನ್ನು ಅಂಗೀಕರಿಸುವದಿಲ್ಲ; ಆದುದರಿಂದ ವೈದಿಕ ಪ್ರಮಾಣಗಳು ಹಾಸ್ಯಾಸ್ಪದವಾಗುವವು. ಇದುಗೋಸ್ಕರ ಸಜ್ಜನರು ಇಂತಹ ವಿತಂಡದಲ್ಲಿ ತಮ್ಮ ತತ್ವಗಳನ್ನು ಸಾಧಿಸುವ ಗೋಜಿಗೆ ಹೋಗದಲೇ ಕೇವಲ ಪರಪಕ್ಷವನ್ನು ದೂಷಿಸುತ್ತಾ ಹೋಗಬೇಕು. ವಾದಕ್ಕೂ, ಜಲ್ಪವಿತಂಡಗಳಿಗೂ ಇನ್ನೊಂದು ವಿಶೇಷವೇನಂದರೆ, ಪ್ರಾಶ್ನಿಕರು ( ಮಧ್ಯಸ್ಥರು ) ವಾದದಲ್ಲಿ ಇದ್ದರೂ ನಡೆಯುತ್ತದೆ ಇಲ್ಲದಿದ್ದರೂ ನಡೆಯುತ್ತದೆ. ಜಲ್ಪ ವಿತಂಡಗಳಲ್ಲಿ ಮಾತ್ರ

ಪ್ರಾಶ್ನಿಕರು ಬೇಕೆಬೇಕು. ಯಾಕಂದರೆ, ವಾದ ಮಾಡುವ ವಿಷಯುವಾವದು, ಯಾವ ತರಹದ ಕಥೆಯನ್ನು ಪ್ರಾರಂಭಿಸಬೇಕು; ಮತ್ತು ಮೊದಲು ಯಾರು ಶುರು ಮಾಡಬೇಕು, ವಾದಿ ಪ್ರತಿವಾದಿಗಳ ಗುಣದೋಷಗಳನ್ನು ತೀರಿಸುವದು, ಯಾರಾದರೂ ಸೋತರೆ ಅದನ್ನು ಪ್ರಕಟಗೊಳಿಸುವದು, ಇವೇ ಮೊದಲಾದ ಕೆಲಸಗಳನ್ನು ಮಾಡುವವನೇ ಪ್ರಾಶ್ನಿಕನೆನಿಸುವನು. ಆದುದರಿಂದ ಜಲ್ಪವಿತಂಡಗಳಲ್ಲಿ ವಾದಿ ಪ್ರತಿವಾದಿಗಳು ದುರಾಗ್ರಹಕ್ಕೆ ಬಿದ್ದು ಬಡಿದಾಡಹತ್ತಿದರೆ ಪ್ರಾಶ್ನಿಕರ ಉಪಯೋಗ. ವಾದ ಕಥೆಯಲ್ಲಿ ಅವರು ತತ್ವನಿರ್ಣಯಕ್ಕಾಗಿ ಮಾನಾಪಮಾನಗಳನ್ನು ಬಿಟ್ಟು ಪರಸ್ಪರ ಪ್ರೇಮದಿಂದ ಹೆಣಗುತ್ತಿರುವದರಿಂದ, ಆಗ್ರಹಕ್ಕೆ ಆಸ್ಪದವೇ ಇಲ್ಲ. ಎಂದಮೇಲೆ ಪ್ರಾಶ್ನಿಕರಾದರೂ ಏಕೆಬೇಕು ? ಇನ್ನು ಅನಾಯಾಸವಾಗಿ ಯಾರಾದರೂ ದೊರೆತರೆ ಅವರನ್ನು ಪ್ರಾಶ್ನಿಕರೆಂದು ನಿಯಮಿಸಬಹುದು.

ಪ್ರಾಶ್ನಿಕರು ಮಾತ್ರ ಸಜ್ಜನರಾಗಿರಬೇಕು. ಸಿಟ್ಟು ಸೆಡವುಗಳು ಅವರಿಗೆ ತಟ್ಟಿರಬಾರದು. ಎಲ್ಲ ಶಾಸ್ತ್ರಗಳಲ್ಲಿ ಮನಮುಟ್ಟಿ ದುಡಿದಿರಬೇಕು. ಇಲ್ಲವಾದರೆ ಅವರಿಗೆ ವಾದಿ ಪ್ರತಿವಾದಿಗಳ ವಿವಾದಗಳನ್ನು ನಿರ್ಣಯಿಸುವ ಶಕ್ತಿ ಹೇಗೆ ಬರಬೇಕು? ಇದಲ್ಲದಲೆ ಪ್ರಾಶ್ನಿಕರು ವಾದಿಯು ಹೇಳಿದ ವಿಷಯವನ್ನೂ ತಾವು ಸ್ವತಃ ತಿಳಿದು ಕೊಂಡು; ಪ್ರತಿವಾದಿಗೆ ಅದನ್ನು ಹೇಳಲಿಕ್ಕೆ ಬರಬೇಕು. ಸಭೆಯಲ್ಲಿ ಪ್ರಾಶ್ನಿಕರು ಒಬ್ಬರಿರಬೇಕು. ಅಥವಾ ಮೂರು, ಐದು, ಏಳು, ಹೀಗೆ ವಿಷಮ ಅಂಕೆಯವರು ಇರುವದು ವಿಹಿತ; ಯಾಕಂದರೆ ಅವರಲ್ಲಿಯೇ ನಿರ್ಣಯದ ಬಗ್ಗೆ ವಾದ ವಿವಾದ ಬಿದ್ದರೆ ಬಹು ಮತದಿಂದ ನಿರ್ಣಯಿಸಲಿಕ್ಕೆ ಬರುವದು. ಆದರೆ ಎರಡು ನಾಲ್ಕು ಹೀಗೆ ಸಮರಿದ್ದರೆ ವಾದವಿವಾದ ಬಿದ್ದಾಗ ಅವರಲ್ಲಿಯು ಎರಡೂ ಬಣಗಳು ಸಮವಾದರೆ ಮತ್ತೆ ಅದನ್ನು ನಿರ್ಣಯಿಸುವವರು ಯಾರು? ಆದುದರಿಂದ ಪ್ರಾಶ್ನಿಕರು ವಿಷಮರಿರುವದೇ ಒಳ್ಳೇದು. ಆದರೂ ಎಲ್ಲ ಸಂಶಯಗಳನ್ನು ದೂರ ಮಾಡಿ, ನಿಶ್ಚವನ್ನು ಮುಚ್ಚು ಮರೆ ಇಲ್ಲದೇ ಹೇಳಿ ರಾಗದ್ವೇಷಗಳನ್ನು ಹಳಿಯುವ ಒಬ್ಬನೇ ಪ್ರಾಶ್ನಿಕನಿರುವದೇ ಪ್ರಶಸ್ತ

ವೆಂದು ಸಜ್ಜನರ ಮತ. ಒಬ್ಬರೆ ಇರಲಿ ಅನೇಕರೇ ಇರಲಿ ಪ್ರಾಶ್ನಿಕರು ಪರಮಾತ್ಮನಲ್ಲಿ ಭಕ್ತಿಯುಳ್ಳವರಾಗಿರಬೇಕು. ಭಕ್ತಿಯೇ ಸದ್ಗುಣಗಳ ಕಾರುಕು.

ಈ ಪ್ರಕಾರವಾಗಿ ಮಲ್ಲಯುದ್ಧವು ಸಜ್ಜಾದಮೇಲೆ ವಾದಿ ಪ್ರತಿವಾದಿಗಳು ವಾದವನ್ನು ಹೇಗೆ ಸುರುವು ಮಾಡಬೇಕು? ವಾದ ಕಥೆಯಲ್ಲಿ ಹೋರಾಡುವವರು ಹೊನ್ನು ಹೆಣ್ಣು ಮಣ್ಣಿನ ಆಶೆ ತೊರೆದು ವಿರಕ್ತರಾಗಿ ತತ್ವವನ್ನು ಕಡೆಯಬೇಕೆಂದು ಹವಣಿಸುವರು ಕಣ್ಣು ಕಿವಿ ಮೂಗುಗಳು ಈ ತತ್ವವನ್ನು ಕಡಿಯಲಾರವು. ಆಗಮವೇ ಇದಕ್ಕೆ ಯುಕ್ತವಾದ ಕಡಗೋಲು. ರಾಗದ್ವೇಷಗಳ ಬಿಸಿಲು ಇದಕ್ಕೆ ಬಡಿಯಬಾರದು ಲೋಭ ಮೋಹಗಳ ಬಿಸಿನೀರು ಇದರಲ್ಲಿ ಬೆರೆಯಬಾರದು. ಅಂದರೆ ಕಡೆದ ಮೇಲೆ ಹೊರಡುವ ಅಬೆಣ್ಣೆಯ ನುಣುಪೂ ರುಚಿಯೂ ಬಣ್ಣಿಸಲಳವಲ್ಲ; ಅದನ್ನು ಅನುಭವದ ಬೆಂಕಿಯ ಮೇಲೆ ಕಾಯಿಸಿ ಸೇವಿಸಿದರೆ ಭವರೋಗವು ದೂರವಾಗಿ, ಭಕ್ತವತ್ಸಲನ ಪಾದವು ಸಮೀಪಿಸುವದು. ಆದುದರಿಂದಲೇ ವಾದಿಗೆ ಪ್ರತಿವಾದಿಯು ಪ್ರಸ್ತುತ ವಿಷಯದಲ್ಲಿ ಪ್ರಮಾಣವನ್ನು ಕೇಳಲು, ವಾದಿಯು ಅವನ ಪ್ರಶ್ನವನ್ನೇ ಖಂಡಿಸಿ ಮಾನಭಂಗ ಮಾಡಲಿಕ್ಕೆ ಹಾತೊರೆಯದೇ ಶಾಂತಚಿತ್ತದಿಂದ ಆಗಮವನ್ನೆ ಪ್ರಮಾಣವಾಗಿ ಕೊಡಬೇಕು. ಯಾಕಂದರೆ ತತ್ವವು ಕಂಣಿಗೆ ಕಾಣದು, ಬುದ್ಧಿಗೆ ತೋಚದೆಂದು ಆಗಮವೇ ಸಾರುತ್ತದೆ.

ऋग्यजुःसामाथर्वाश्च भारतं पंचरात्रकं ।
मूलरामायणंचैव संप्रोच्यंते सदागमाः ।
अनुकूलाय एतेषां तेचप्रोक्तास्सदागमाः ॥

ಋಗ್ವೇದ ಯಜುರ್ವೇದ ಸಾಮವೇದ ಮತ್ತು ಅಥರ್ವಣವೇದ ಗಳೆಂಬ ನಾಲ್ಕು ವೇದಗಳೂ ಮೂಲರಾಮಾಯಣವೂ ಸದಾಗಮವೆನಿ

ಸುವವು. ಇನ್ನು ಇವುಗಳಿಗೆ ಅನುಸರಿಸಿರುವ ಇತರ ಗ್ರಂಥಗಳೂ ಸದಾ ಗಮಗಳೆನಿಸುವವು ಇನ್ನುಳಿದವು ದುರಾಗಮಗಳು ಅವುಗಳಿಂದೆಂದೂ ತತ್ವನಿರ್ಣಯವಾಗಲಾರದು

ವಾದಿಯು ಪ್ರತಿವಾದಿಗೆ ವೇದಪ್ರಮಾಣವನ್ನು ಹೇಳಿದಮೇಲೆ ಪ್ರತಿವಾದಿಯು ಆವೇದವಾಕ್ಯಕ್ಕೆ ಎರಡನೇ ಅರ್ಥವನ್ನು ಹೇಳಿ ತನ್ನ ಪಕ್ಷವನ್ನು ಕಾಯ್ದು ಕೊಳ್ಳಬೇಕೇ ಹೊರತು ಆ ವಾಕ್ಯವು ಸರ್ವಧಾ ಅಪ್ರಮಾಣವೆಂದು ಹೇಳಕೂಡದು. ಯಾಕಂದರೆ ಪ್ರತಿವಾದಿಯೂ ವೇದಕ್ಕೆ ಮಾನ ಕೊಡುವ ಆಸ್ತಿಕನೇ ಅಲ್ಲವೆ.? ವಾದಿಯು ವೇದವಾಕ್ಯಕ್ಕೆ ಅನ್ಯಾರ್ಥವನ್ನು ಕಲ್ಪಿಸಿದರೆ ಪ್ರತಿವಾದಿಯು ಕೆಲಸವು ತೀರಲಿಲ್ಲ; ತಾನು ಹೇಳಿದ ಅರ್ಥಕ್ಕೆ ಅನುಕೂಲವಿರುವ ಇತರ ವೇದವಾಕ್ಯಗಳನ್ನು ಅವನು ಉದಾಹರಿಸಬೇಕು; ಅಂದರೆ ಅವನ ನೆಟ್ಟು ಗಟ್ಟಿಯಾಗುವದು.

ಆಮೇಲೆ ವಾದಿಯು ಪ್ರತಿವಾದಿಯು ವಾಕ್ಯಗಳಿಗೆ ಅನ್ಯಾರ್ಥವನ್ನು ಹೇಳಿ, ತನ್ನವಾಕ್ಯಗಳಿಗೆ ಬೇರೆತಾತ್ಪರ್ಯದ ಕಲ್ಪನೆಯನ್ನು ದೂಷಿಸಿ ಪ್ರತಿವಾದಿಗೂ ತನ್ನ ತಾತ್ಪರ್ಯವೇ ಸರಿಯೆಂದು ಸಾಧಿಸಿದರೆ, ವಾದಿಯು ತನ್ನ ಕಲ್ಪನೆಗೆ ಬೆಂಬಲವಾಗಿ ಆ ವಾಕ್ಯವು ಹೊರಟ ಸಂದರ್ಭ ಮುಂತಾದ ಉಪಪತ್ತಿಯನ್ನು ಚನ್ನಾಗಿ ಬೈಲಿಗಿಟ್ಟು ತನ್ನ ಮತವು ಮನಸಿನಲ್ಲಿ ನಡುವಂತೆ ಯತ್ನಿಸಬೇಕು. ಆ ಮೇಲೆ ಪ್ರತಿವಾದಿಯು ಸೋತನೆಂದು ಕೊಬ್ಬದಲೇ, ತತ್ವನಿರ್ಣಯವಾಯಿತೆಂದು ಉಬ್ಬಿ ಬಂಧುಪ್ರೇಮದಿಂದ ವಾದಿಯು ಅವನನ್ನು ಕೂಡಿಕೊಂಡು ಸೌಮ್ಯರೀತಿಯಿಂದ ಅವನು ಹಿಡಿದ ಅಡ್ಡಮಾರ್ಗವನ್ನು ಬಿಡಿಸಬೇಕು ಇದೇ ವಾದಿಯ ನಿಜವಾದ ಜಯವು. ಈ ಪ್ರೇಮದ ಬಡಿದಾಟವು ಯಾರಿಗೆ ಬೇಸರಾದೀತು ? ಪ್ರೇಮರಸದಿಂದ ಬೆಳೆದು ವಾದದ ಉಷ್ಣತೆಯಿಂದ ಹಣ್ಣಾದ ಈ ತತ್ವಫಲವು ಯಾರಿಗೆ ಕಹಿಯಾದೀತು?

ವಿತಂಡಾ ಮತ್ತು ಜಲ್ಪ ಕಥೆಗಳಲ್ಲಿ ಸಭಿಕರು ಸಭಾಪತಿಗಳು ಪ್ರಾಶ್ನಿಕರು ಕೂಡಿ ಕಥಾಪ್ರಕಾರವನ್ನು ನಿರ್ಬಂಧ ಮಾಡಿದವೇಲೆ ಕಥೆಯು ಪ್ರಾರಂಭವಾಗಿ ಯಾರಾದರೂ ಒಬ್ಬರು ಸೋಲುವವರೆಗೆ ಮಾತ್ರ ನಡೆಯುವದು; ಯಾಕಂದರೆ ಜಯವೇ ಮುಖ್ಯೋದ್ದೇಶವು; ವೈರಿಯ ಅಪಜಯವೇ ಸಂತೋಷದ ಕಾರಣವು. ಆದರೆ ವಾದದಲ್ಲಿ ವಾದಿಯಾಗಲೀ ಪ್ರತಿವಾದಿಯಾಗಲೀ ತತ್ವವಿರುದ್ಧವಾದ ಮಾರ್ಗಹಿಡಿಯುವವರೆಗೆ ಮಾತ್ರ ಕಥೆಯು; ಇಬ್ಬರಲ್ಲಿ ಯಾರಾದರೂ ಅಡ್ಡಮಾರ್ಗ ಹಿಡಿದೊಡನೆಯೇ ಕಥೆ ಬಂದಾಗುವದು. ಯಾಕಂದರೆ ತತ್ವನಿರ್ಣಯದ ಉದ್ದಿಶ್ಯವಾಗಿ ಮಾತ್ರ ವಾದವು ನಡೆಯುವದು. ಅಡ್ಡಮಾರ್ಗ ಹಿಡಿದರೂ ಯಾವ ವಾದಿಯಾಗಲೀ ಪ್ರತಿವಾದಿಯಾಗಲೀ ಅದನ್ನು ಕಡೆಗೆ ಒಪ್ಪಿಕೊಂಡರೆ ಅವನ ವಿಮಲ ಚೈತನ್ಯಕ್ಕೆ ಮಾನಕೊಟ್ಟು ಉದಾರ ಬುದ್ಧಿಯನ್ನು ಕೊಂಡಾಡುವರು. ಆಗ್ರಹದಿಂದ ತಪ್ಪನ್ನು ಒಪ್ಪಿಕೊಳ್ಳದೊಡೆ, ಜನರು ಹೀಯಾಳಿಸುವರು; ಹೆಚ್ಚು ಆಗ್ರಹ ಹಿಡಿದರೆ ಒಮ್ಮೊಮ್ಮೆ ದಂಡಿಸುವರು.

ಸಾಕು! ಸಾಕು! ಈವಾದವಿವಾದದಮಾತು; ಅಲ್ಲಿ ಏನೋ ಇಂಪಾಗಿ ಕೇಳಬರಹತ್ತಿದೆ. ಸ್ವಲ್ಪಕಿವಿಗೊಡಿರಿ ಮುಕುಂದನು ಮನಃಪಟಲದಲ್ಲಿ ಮೂಡಿರುವನು; ಅವನ ಮುಗುಳುನಗೆಯ ಬೆಳದಿಂಗಳಲ್ಲಿ ಮನಸ್ಸು ಪ್ರಸನ್ನವಾಗಿ ಹರಿಯುತ್ತಿರುವದು. ಏನ ಈವೈಭವ!! ಶಬ್ದಗಳಿಂದ ಬರೆದರೆ ಅದು ನೀರಸವಾಗುವದು, ನಾವು ಮಾಡಿದ್ದೆಲ್ಲವನ್ನೂ ಅವನ ಅಡಿಗಳಿಗೆ ನೀಡಿ, ಕೇಡುಬಾರದಂತೆ ಬೇಡಿಕೊಂಡು, ಎಡರುಗಳನ್ನು ದಾಟಿಕೊಂಡು, ಈ ಸಂಸಾರವನ್ನು ಸವಿಮಾಡೋಣ!



# ೫ನೇ ಪ್ರಕರಣ,

## ಬಿಚ್ಚು ನುಡಿಗಳು.

( ಕರ್ಮ ನಿರ್ಣಯದ ಆಧಾರದಿಂದ ಬರೆದದ್ದು. )

ಈ ನಾಡಿನಲ್ಲಿ ಸದ್ದು ಸ್ವಲ್ಪಕೂಡಾ ಕಾಣದು. ಗಾಳಿಗೆ ಸ್ವಲ್ಪಾದರೂ ವಿಶ್ರಾಂತಿ ? ನೀರು ಕುದುರೆಯ ಓಟದಿಂದ ಓಡುವದು ಇಲ್ಲವಾದರೆ ಸೂರ್ಯನ ಉಷ್ಣತೆಯಿಂದ ವಾಯುವಾಗಿ ಗಗನಕ್ಕೆ ಹಾರುವದು ಗಿಡಗಂಟಿಗಳು ಮೊಳಕೆಯೊಡೆದು ಬಾಳಿ ಬಯಲಾಗುವವು. ಸುವ್ಯಕ್ತನೆನಿಂತಹಾಗೆ ತೋರುವ ಕಲ್ಲು ಬಂಡೆಗಳೂ, ಸುಖನಿದ್ರೆಯಲ್ಲಿ ಮಲಗಿದಂತೆ ತೋರುವ ಬೈಲಪ್ರದೇಶಗಳು, ಕ್ಷಣ ಕ್ಷಣಕ್ಕೆ ಬದಲಾಗುವವು. ಅವು ನಮ್ಮ ಕುರುಡುಗಣ್ಣುಗಳಿಗೆ ಮಾತ್ರ ಕಾಣಿಸದು. ಈ ನಮ್ಮ ಕಾಯವು ಮಗುವಾಗಿ ಹುಟ್ಟಿ ಮಕ್ಕಳಾಗಿ ಬೆಳೆದು ಸುಖದುಃಖಗಳನ್ನು ಸವಿದು ಮತಿಗೆಟ್ಟು ಮುದುಕರಾಗಿ ಮಡಿದು ಹೋಗುವರು. ಕಾಲನ ಗಾಲಿಗಳಂತೆ ಸೂರ್ಯಚಂದ್ರರು ಬೇಸರಿಲ್ಲದೆ ತಿರುಗುತ್ತಿರುವರು. ಇಲ್ಲಿ ಜೀವಿಸುವವರು ಸ್ಥಿರವಾರಯ್ಯಾ!!

ಈ ಎಲ್ಲ ಚಲನವಲನವು ಆ ಅಗಾಧಮಹಿಮನ ಸಂಕಲ್ಪವಲ್ಲವೇ! ಅವನಿಗೆ ಬೆದರಿಯೇ ಗಾಳಿಯು ಬೀಸುವದು; ಸೂರ್ಯನು ಮೂಡುವನು ಮುಳುಗುವನು. ಅವನ ಇಚ್ಛೆಗನುಸರಿಸಿಯೇ ನಾವು ಈ ಸೃಷ್ಟಿಯ ಚಲನ

ವನ್ನು ಮನಮುಟ್ಟಿ ಮುಂದುಮಾಡಬೇಕು. ಈ ಸೃಷ್ಟಿಚಕ್ರವು ತಿರುಗಲಿಕ್ಕೆ ನಮ್ಮ ಸಹಾಯ-ವೇನೂ ಬೇಡಾ; ಆದರೂ ಆ ದೊಡ್ಡ ಗಾಲಿಯು ತಿರುಗುವಾಗ ನಮ್ಮನಮ್ಮ ಸಣ್ಣ ಗಾಲಿಗಳಿಗೆ ಗತಿಕೊಟ್ಟು, ಅವನ ಕಟ್ಟಿನಾಡಿದ ಕೆಲಸಗಳನ್ನು ಮಾಡುತ್ತಾ ಜೀವಿಸಿದರೆ ಆ ಸೃಷ್ಟಿಚಕ್ರಕ್ಕೆ ಸಹಾಯ ಮಾಡಿದಂತಾಯಿತು.

× × × ×

ಆ ಪುರುಷನ ಹೆಸರೇ ಹೆಸರು; ಅದು ಅರ್ಥ ಪೂರ್ಣವಾಗಿರುವದು. ನಮ್ಮದುಮಾತ್ರ ಕೇವಲ ಗುರುತು. ಆತನು ಬ್ರಹ್ಮನೆಂದರೆ ಗುಣಗಳಿಂದ ಉಕ್ಕೇರುವ ಉದಧಿಯು; ವಿಷ್ಣುವೆಂದರೆ ಎಲ್ಲವನ್ನು ವ್ಯಾಪಿಸಿದವನು. ನಿಜವಾಗಿಯೂ ಅವನು ಗುಣಪೂರ್ಣನು ಸರ್ವವ್ಯಾಪಿಯು ಆದುದರಿಂದಲೇ ಹೆಸರು ಅರ್ಥವುಳ್ಳದ್ದೆನಿಸುವದು; ನಮ್ಮದೋ? ಕುಬೇರನೆಂದು ಹೆಸರಿದ್ದರೂ ಗಳಿಗೆಯಲ್ಲಿ ಮುಕ್ಕುಕಾಳುಗಳು ಸಿಕ್ಕದು. ಸುಮ್ಮನೇ 'ಹೋಗು' 'ಬಾ' ಎಂದರೆ ಕೆಲಸವು ಸಾಗದೆಂದು, ಹಾಲುಮೊಸರು ಮಾರುವ ಹೆಣ್ಣು ಮಕ್ಕಳು ನೆನಪಿಗ ಶಿಗಣೆಗೋಡೆಯ ಮೇಲೆ ಮೊಸರಿನ ಬಟ್ಟೆಟ್ಟಂತೆ, ಮುತ್ತಿನಂತ ಹೆಸರುಗಳನ್ನು ಮೂರ್ಖರಿಗೆ ಕೊಟ್ಟವರು ಮೂಢರಲ್ಲವೇ? ತಮ್ಮ ದುಸ್ಥಿತಿಯನ್ನು ನೋಡಿಕೊಂಡು ಆ ಆದಿಪುರುಷನಲ್ಲಿರುವ ಗುಣಗಳೂ ಸುಳ್ಳೆಂದು ಕೆಲವರು ಗಳಹುವರು. ಇದಂತೂ ಶುದ್ಧ ತಪ್ಪು.

\+ + + +

"ಹೇ ಧನವಂತ ದಯಾಘನಾ! ನಿನ್ನನ್ನು ಹೊಗಳಲು ನೀನೇ ಕಲಿಸು; ಹೇ ಜ್ಞಾನಮೂರ್ತಿಯೇ! ಬಹುದಿನದಿಂದ ಹರಿಯುವ ತಿಳಿಯು ಹೊಳೆಗೆ ನೀನೇ ಕೂಡಿಸು."

"ಹೀಗೆ ಹೊಗಳಲು ನೀನು ಮುಗುಳುನಗೆನಕ್ಕು ಮನಸ್ಸನ್ನು ಅರಳಿಸಿ ಮದವನ್ನು ಓಡಿಸುವದಿಲ್ಲವೋ? ಜ್ಞಾನವನ್ನು ಹುಟ್ಟಿಸುವದಿಲ್ಲವೋ?"

"ಹೇ ಬಲಿಷ್ಠನಾದ ಇಂದ್ರಾಧಿಪತಿಯೇ! ನಾನು ಧನಿಕನಾಗಿ ಉಂಡತಿ ಸುಖಬಡಬೇಕೆಂದು ಎಲ್ಲಾಗೂ ಅಪ್ಪಣೆಮಾಡು! ಬಾ! ಈ ಸೋಮವು ಕುಡಿದು ಮತ್ತನಾಗು"

" ಸೋಲುಸೋಸದ ಸ್ವಾಮಿಯನ್ನು, ನನ್ನನ್ನು ಕಾಪಾಡಲಿಕ್ಕೆ, ವೈರಿಗಳನ್ನು ಓಡಿಸಲಿಕ್ಕೆ, ಕರೆಯುವೆನು"

" ಶೂರನಾದ ವೀರನೇ, ಅದ್ವಿತೀಯನಾದ ಧೀರನೇ! ನಿನ್ನ ಸ್ತುತ್ಯ ಸ್ವರೂಪವನ್ನು ಜನರ ಮನಸ್ಸಿನಲ್ಲಿ ನಡುವಂತೆ ಉಪದೇಶಿಸುವೆನು. "

" ಸ್ವಾಮೀ! ಸಮೀಪದಲ್ಲಾಗಲೀ ದೂರದಲ್ಲಾಗಲೀ ನನ್ನದೆಲ್ಲವೂ ನಿನಗಲ್ಲವೇ? ಸರ್ವವ್ಯಾಪಿಯಾದ ವಿಷ್ಣುವೇ! ನಿನ್ನನ್ನು ಕರೆಯಲು ನನಗೆ ಬಾರದು ನೀನೇ ಏಕೆ ಬರಬಾರದು! ,,

* * *

ಏನು ಮಾಡಿ ನಾವು ಆತನನ್ನು ಸಂತೋಷಪಡಿಸಬಹುದು? ಕೆಲಸ ಮಾಡಿದರೆ ಆತನು ನಲಿಯುವನು. ಈ ಸಂಸಾರದ ತಂತಿಗಳನ್ನು ಬಾರಿಸಿದರೆ ಅವು ಸುಖದುಃಖಗಳ ಕಠೋರವಾದ ಧ್ವನಿಯನ್ನು ಹುಟ್ಟಿಸಿ ಬೇಸರ ಬಡಿಸುವವು. ಅದೇ ಆ ತಂತಿಗಳಿಗೆ ಭಕ್ತಿಯ ನೀರು ಕೊಟ್ಟು, ಭವದ ಆಶೆ ದೊರೆದು ಬಾರಿಸಹತ್ತಿದರೆ ಅವು ಇಂಪಾದ ಧ್ವನಿಗೈಯ್ಯುವವು. ಇದರಲ್ಲಿ ಕಳೆಯು ಹೊಳೆಯ ಹತ್ತುವದು. ಬಾಂಬೋಳಿಯು ಪೆತ್ತನ ಪಾದವು ತೋರ ಹತ್ತುವದು. ಭಕ್ತಿಯಿಲ್ಲದೇ ಭವರೋಗವು ತಪ್ಪೀತೇ? ಅರಸಿಲ್ಲದ ರಾಜ್ಯವು ಅನಾಯಕವಾದಂತೆ ಮುಕುಂದನಿಲ್ಲದ ಜ್ಞಾನವು ಕಾಡು ಆಡವಿಯೋ!! ಯಾವ ಕೆಲಸ ಮಾಡಿದರೂ ಒಡೆಯನಿಗೆ ಒಪ್ಪಿಸದೊಡೆ ಅದು ಹೊಲಸಾಗುವದೇ ಹೊರತು ಹುಲಸಾಗದು. ಆದುದರಿಂದಲೇ ಗೀತೆಯಲ್ಲಿ ಭಗವಂತನು ಅರ್ಜುನನಿಗೆ ಹೀಗೆ ಹೇಳಿರುವನು. " ಮನವನ್ನು ನನ್ನಲ್ಲಿ ನಡಿಸು; ಭಕ್ತಿಯು ಪಡನೂಡಲಿ; ನನ್ನನ್ನು ಪೂಜಿಸು; ನನಗೆ ನಮಿಸು; ನನಗೆ ನೀನು ಬೇಕಾದವನು; ನನ್ನೆಡೆಗೆ ನಿನ್ನನ್ನು ಬರಮಾಡಿಕೊಳ್ಳುವೆನೆಂದು ಸಾರಿ ಸಾರಿ ಹೇಳುವೆನು. "

# ೬ ನೇ ಪ್ರಕರಣ.

## ಬ್ರಹ್ಮಪುರದ ಮಾರ್ಗ.

( ಪ್ರಮಾಣಲಕ್ಷಣದ ಆಧಾರದಿಂದ ಬರೆದದ್ದು )

ಈ ಜಗತ್ತಿನಲ್ಲಿ ಹುಟ್ಟಿ ಜ್ಞಾನದ ಬೆಳಕಿನಲ್ಲಿ ಅಲೆದಾಡುವೆನೆಂದು ಪ್ರತಿಒಬ್ಬನು ದೇವರಿಗೆ ಮಾತು ಕೊಟ್ಟಿದ್ದಾನೆ. ಜ್ಞಾನವು ಸ್ಥಿರವಾಗಿ ಉರಿಯಬೇಕಾದರೆ ಆ ಪ್ರಣತಿಯಲ್ಲಿ ಪ್ರಮಾಣವು ತುಂಬಿರಬೇಕು; ಸಂಶಯವು ಬೀಸಬಾರದು; ವಿಪರ್ಯಯವು ಅದನ್ನು ಆರಿಸಬಾರದು. ಅದರ ಸ್ವಚ್ಛಪ್ರಕಾಶದಲ್ಲಿ ತನ್ನ ಕುಂದುಕೊರತೆಗಳನ್ನು ಮನಗಟ್ಟು ಮಾಡಿಕೊಂಡು, ಅಂತಃಕರಣವನ್ನು ಬೆಳಗಿ, ಅಂತರಾತ್ಮನನ್ನು ನೋಡಬೇಕು. ನೈಜಸುಖವನ್ನು ಅನುಭವಿಸಿ ಸ್ವಚ್ಛಂದವಾಗಿ ನಲಿದಾಡಬೇಕು.

ಇದ್ದ ವಸ್ತುವನ್ನು ಇದ್ದಹಾಗೆ ತಿಳಿಯುವದೇ ಪ್ರಮಾಣವೆನಿಸುವದು. ಎಮಗಿಗೆ ಕನ್ನಡಿಯು ತೂಗಾಡುತ್ತಿದ್ದರೆ 'ಅದು ಕನ್ನಡಿಯು' ಎಂಬ ಜ್ಞಾನವು ಪ್ರಮಾಣವೆನಿಸುವದು. ಅದನ್ನು ನೋಡಿದ ಕಣ್ಣಾದರೂ ಪ್ರಮಾ

ಣವೇ ಆದುದರಿಂದಲೆ ಪ್ರಮಾಣವು, ಕೇವಲ ಪ್ರಮಾಣ ಮತ್ತು ಅನು ಪ್ರಮಾಣವೆಂದು ಎರಡು ವಿಧ— 'ಅದು ಕನ್ನಡಿ' ಎಂಬ ಜ್ಞಾನವು ಕೇವಲ ಪ್ರಮಾಣವು; 'ಅದು ಕನ್ನಡಿಯೆಂದು ತಿಳಿಯಲಿಕ್ಕೆ ನಮ್ಮ ಕಣ್ಣು ಸಾಧನವು. ಇದ್ದ ವಸ್ತುಗಳನ್ನು ಇದ್ದಹಾಗೆ ತಿಳಿಯಲಿಕ್ಕೆ ಸಾಧನಗಳಾದ ನಮ್ಮ ಕಣ್ಣು, ಕಿವಿ, ಮೂಗು ಮುಂತಾದವುಗಳು ಅನುಪ್ರಮಾಣ ಗಳೆನಿಸುವವು.

ಕೇವಲ ಪ್ರಮಾಣವು ನಾಲ್ಕು ವಿಧವಾಗಿರುವದು- ಈಶ್ವರಜ್ಞಾನ, ಲಕ್ಷ್ಮೀಜ್ಞಾನ, ಯೋಗಿಜ್ಞಾನ, ಅಯೋಗಿಜ್ಞಾನ- ಈಶ್ವರ ಲಕ್ಷ್ಮೀ ಜ್ಞಾನಗಳು ಅನಾದಿಕಾಲದಿಂದ ಹರಿಯುತ್ತಿರುವವು; ಅವು ಎಂದೂ ಬತ್ತುವದಿಲ್ಲ. ಆದರೆ ಈಶ್ವರಜ್ಞಾನದ ಪ್ರವಾಹವು ಬೇರೆ ಹೊಳೆಹಳ್ಳಗಳನು ಪೇಕ್ಷಿಸುವದಿಲ್ಲ; ಲಕ್ಷ್ಮೀಜ್ಞಾನವು ಮಾತ್ರ ಆ ಪ್ರವಾಹದ ಸೆಳವಿಗೆ ಸಂಪೂರ್ಣ ಒಳಪಟ್ಟಿರುವದು. ಈಶ್ವರಜ್ಞಾನವು ಮೂರು ಲೋಕಗಳನ್ನು ಬೆಳಗಿ ತನ್ನಲ್ಲಿ ಎಲ್ಲವನ್ನೂ ತಿಳಿದು ಪರರಲ್ಲಿಯೂ ಎಲ್ಲವನ್ನು ಗ್ರಹಿಸುವದು. ಲಕ್ಷ್ಮೀ ಜ್ಞಾನವು ಈಶನಲ್ಲಿ ಎಲ್ಲವನ್ನು ತಿಳಿಯದಿದ್ದರೂ, ಎಲ್ಲರಕಿಂತಲೂ ಹೆಚ್ಚು ತಿಳಿಯುವದು. ಅವನನ್ನುಳಿದು ಸರ್ವವಿಷಯಗಳನ್ನು ಆವಳು ಚನ್ನಾಗಿ ಅರಿತವಳು. ಆದರೂ ಈಶ್ವರನ ತಿಳಿಯ ಹೊಳವು ಬೇರೇ; ಲಕ್ಷ್ಮೀದೇವಿಯ ತಿಳಿವು ಹೊಳವು ಬೇರೆಯೇ !!

ಋಜುಯೋಗಿಗಳ ಜ್ಞಾನವಾದರೂ ಅನಾದಿ ಕಾಲದಿಂದ ಬಂದದ್ದು; ಅನಂತ ಕಾಲದವರೆಗೆ ಹೋಗುವದು. ಈ ಋಜು ಯೋಗಿಗಳು ಉಳಿದ ಜೀವರಕಿಂತಲೂ ಈಶ್ವರನನ್ನು ಬಹುಮಟ್ಟಿಗೆ ಹೆಚ್ಚಾಗಿ ತಿಳಿದವರು. ಈಶನಿಗೂ ಲಕ್ಷ್ಮೀದೇವಿಗೂ ಎಲ್ಲವೂ ಕಂಣೆದುರಿಗೆ ಕಟ್ಟಿರುವದು. ಆದರೆ ಋಜುಯೋಗಿಗಳು ಇತರ ವಿಷಯಗಳನ್ನೆಲ್ಲ ತಿಳಿಯಲಿಕ್ಕೆ ಸಮರ್ಥರಿದ್ದರೂ, ಆಲೋಚನೆ ಮಾಡಿ ತಲೆತುರಿಸಿದ ಮೇಲೆ ಅವರಿಗೆ ಎಲ್ಲವೂ ಕಣ್ಣುಂದೆ ನಿಲ್ಲುವದು. ಈ ಯೋಗಿಗಳ ಜ್ಞಾನವು ಯೋಗಪ್ರಭಾವ,

ದಿಂದ ಮುಕ್ತಿಯವರೆಗೆ ಹೆಚ್ಚೆಚ್ಚಾಗಿ ಉಕ್ಕೇರುತ್ತಾ ಹೋಗುವದು. ಮುಕ್ತಿಯಲ್ಲಿ ಮಾತ್ರ ಅದಕ್ಕೆ ಏರಿಳತಗಳು ಬರಲಾರವು. **ಅಯೋಗಿಜ್ಞಾನವು** ಹುಟ್ಟಿ ಸಾಯುವದು. ಅವರ ಹಾಸಿಗೆಯೂ ಸಂಣದು.

ಇನ್ನು ಅನುಪ್ರಮಾಣವು ಮೂರು ತೆರನಾಗಿರುವದು; ಪ್ರತ್ಯಕ್ಷ ಅನುಮಾನ, ಆಗಮ. ಸ್ವಚ್ಛವಾದ ಇಂದ್ರಿಯಗಳಿಗೆ ವಸ್ತುಗಳ ಗೋಚರವೇ **ಪ್ರತ್ಯಕ್ಷ** ವೆನಿಸುವದು. ಕಂಣಿಗೆ ಗಿಡಗಂಟೆಗಳು ಕಾಣುವದು; ಕಿವಿಗೆ ಇಂಪಾದ ಗಾಯನವು ತಲ್ಪುವದು, ಮೂಗಿಗೆ ಸುಗಂಧವಾಸನೆ ತಟ್ಟುವದು, ಮೈಗೆ ಬೆಚ್ಚಗೆ, ತಂಣಗೆ ತಗಲುವದು; ನಾಲಿಗೆಗೆ ಕಹಿ, ಸೀ ಎಂದು ರುಚಿ ಗೊತ್ತಾಗುವದೂ – ಇವೆಲ್ಲವೂ ಪ್ರತ್ಯಕ್ಷದ ಉದಾಹರಣೆಗಳು.

ಕಾಡಿನಲ್ಲಿ ಹಾದು ಹೋಗುತ್ತಿರಲು ಗುಡ್ಡದ ಮೇಲೆ ಹೊಗೆಯು ಹಾಯುತ್ತಿರುವದನ್ನು ನೊಡಿದ ಕೂಡಲೇ ಅಲ್ಲಿ ಬೆಂಕಿ ಇರಬೇಕೆಂದು ನಾವು ಊಹಿಸುವೆವು. ಹೊಗೆಯನ್ನು ನೋಡಿದರೆ ನಮಗೆ ಅಲ್ಲಿ ಬೆಂಕಿ ಇರಬೇಕೆಂದು ಏಕೆ ತಿಳಿಯಬೇಕು ? ಯಾಕಂದರೆ ಈ ಮೊದಲು ಹೊಗೆಯು ಬೆಂಕಿಯನ್ನಗಲಿ ಎಂದೂ ಇರುವದಿಲ್ಲೆಂದು ಚನ್ನಾಗಿ ನಾವು ಮನಗಂಡಿದ್ದೇವೆ. ಆದುದರಿಂದಲೇ ಹೊಗೆಯು ಬೇಕಿಯ ಚಿನ್ಹವು ( ಲಿಂಗ ). **ತಪ್ಪದೇ** ತನ್ನ ಜೊತೆಗಾರನ ಗುರುತು ಮಾಡಿಕೊಡುವ ಈ ಹೊಗೆಯೇ **ಅನುಮಾನ** ವೆನಿಸುವದು.

ಮನುಷ್ಯನು ಮೂಢನು. ತಪ್ಪತಿಳುವಳಿಕೆಯಲ್ಲಿ ಮುಳುಗಿರುವನು. ಸಂಶಯದಿಂದ ಚಂಚಲನಾಗಿರುವನು. ಹೆಜ್ಜೆಹೆಜ್ಜೆಗೆ ಮುಗ್ಗರಿಸುವನು; ಮೇಲಾಗಿ ಅನ್ಯರನ್ನು ವಂಚಿಸಲಿಕ್ಕೆ ಹವಣಿಸುವನು. ಆದುದರಿಂದಲೇ ಸಹಸಾ ಯಾಗೂ ಯಾರಮಾತಿನಲ್ಲಿಯೂ ವಿಶ್ವಾಸವಿಡುವದಿಲ್ಲ. ಆದರೆ **ಆಗಮವು** ಈ ಎಲ್ಲ ದೋಷಗಳಿಂದ ದೂರಿರುವದು. ಯಾಕಂದರೆ ಯಾ

ವ ಮನುಷ್ಯನೂ ಇದನ್ನು ರಚಿಸಿಲ್ಲ. ಆದುದರಿಂದಲೇ ಇದು ಉತ್ತಮ ಪ್ರಮಾಣವೆನಿಸುವದು.

ಹೀಗೆ ಜ್ಞಾನಕ್ಕೆ ಸಾಧನಗಳು ಇವು ಮೂರು. ಅದರಲ್ಲಿ ಬಲಾಬಲ ವಿಚಾರ ಮಾಡಲು ನಮ್ಮ ಅಂತರಾತ್ಮನಾದ ಸಾಕ್ಷಿಯೇ ಕೊನೆಯ ಪ್ರಮಾಣವೆಂದು ಗೊತ್ತಾಗುವದು ಸುಖದುಃಖಾದಿಗಳ ಜ್ಞಾನವು ಈತನಿಗೆ ಹೊರತು ಅನ್ಯ ಇಂದ್ರಿಯಗಳಿಗೆ ತಿಳಿಯಲಾಗದು ಸಾಕ್ಷಿಯು ಪ್ರತ್ಯಕ್ಷದಲ್ಲಿಯೇ ಅಂತರ್ಭೂತವಾಗಿರುವದು

**ನೆನಪು** ಮಾಡಿಕೊಳ್ಳುವದಾದರೂ ಒಂದು ವಿಧದ ಪ್ರತ್ಯಕ್ಷವೇ ! ಅದಕ್ಕೆ ಮಾನಸ ಪ್ರತ್ಯಕ್ಷವೆನ್ನುವರು. ಮನಸ್ಸು ಎರಡು ವಿಧವಾಗಿ ಜ್ಞಾನವನ್ನು ಹುಟ್ಟಿಸುವದು. ಐದು ಇಂದ್ರಿಯುಗಳಿಗೆ ರಾಜನಾಗಿ ಮನುಷ್ಯ ಅವುಗಳದ್ವಾರಾ ಕಣ್ಣಿಂದ ನೋಡುವದು; ಕಿವಿಯಿಂದ ಕೇಳುವದು; ಮುಂತಾದ-ಜ್ಞಾನವನ್ನು ಹುಟ್ಟಿಸುವದು; ಮತ್ತು ಸ್ವತಂತ್ರವಾಗಿ ಸ್ಮರಣೆಯನ್ನು ತಂದು ಕೊಡುವದು. ಹಿಂದಿನ ಅನುಭವಗಳು ಮನಸ್ಸಿನಲ್ಲಿ ಸಂಸ್ಕಾರ ರೂಪದಿಂದ ವಾಸಮಾಡಿಕೊಂಡು, ಅನುಕೂಲ ವಸ್ತುಗಳನ್ನು ಇಂದ್ರಿಯುಗಳ ಸಹಾಯದಿಂದ ಹೊಂದಿದೊಡನೆಯೇ 'ನೆನಪು' ಹುಟ್ಟುವದು. ಈ ನೆನಪೂ ಪ್ರಮಾಣವೆನಿಸುವದು. ನೆನಪು ಪ್ರಮಾಣವಾಗದಿದ್ದರೆ ಹಿಂದಿನ ನಮ್ಮ ಅನುಭವವು ಸುಳ್ಳಾಗಬೇಕಾದೀತು !!

ವೇದವು ದಟ್ಟಡವಿಯು; ಪ್ರಮಾಣಜ್ಞಾನವೇ ಅದರ ಗರ್ಭದಲ್ಲಿರುವ ಬ್ರಹ್ಮಪುರಕ್ಕೆ ಮಾರ್ಗವು. ಈ ಪಟ್ಟಣದ ಸುತ್ತ ಕಾಡು ಗಿಡಗಳು ಬೆಳದಿವೆ. ಮೋಡಗಳು ಮೇಲೆ ಮುಚ್ಚಿವೆ. ಪ್ರಮಾಣಜ್ಞಾನದ ಮಾರ್ಗದಿಂದ ಆ ಪುರವನ್ನು ಸಂಶೋಧಿಸಿ ಪ್ರವೇಶಿಸಿದೊಡನೆಯೇ ಝಗ್ಗೆಂದು ಬೆಳಕಿನಿಂದ ಕಣ್ಣು ಕುಕ್ಕುವದು, ಮುಂಣು ಬೇಡಾಗುವದು, ಮೋಹವು ಮಾಯವಾಗುವದು; ದೋಷವು ದೂರಾಗುವದು. ಎಲ್ಲಿ ಹೋದರೂ ಆನಂದವೇ ಆನಂದ !! ಇನ್ನು ಏನು ಬೇಕು?

# ೭ ನೇ ಪ್ರಕರಣ.

## ಇಬ್ಬಣವಿಲ್ಲದೆ ನಿಬ್ಬಣವೆಂತು ?

( ತತ್ತ್ವೋದ್ಯೋತದ ಆಧಾರದಿಂದ ಬರೆದದ್ದು. )

ಈ ವಿಶ್ವದ ಅಗಾಧ ವ್ಯಾಪಾರವನ್ನು ಆಲೋಚಿಸಿ ನೋಡಲು, ಮನುಷ್ಯನು ಬೆಪ್ಪಾಗುವನು. ಸೂರ್ಯೋದಯ ಸೂರ್ಯಾಸ್ತ, ಋತುಗಳ ಚಕ್ರ ಮುಂತಾದ ನಿಯತವಾದ ಕಾಲಗತಿಯನ್ನು ನೋಡಿ, ನಮ್ಮ ಮಂದಬುದ್ಧಿಗೆ ಅನಿಯತವಾದವೆಂದು ತೋರುವ ಪ್ರಸಂಗಗಳು ಕೂಡ ನಿಯತವಾದುವೆಂದು ಮನವರಿಕೆಯಾಗಿ ಈ ಭವ್ಯನಾಟಕದ ಸೂತ್ರಧಾರನು ಯಾವನಿರಬಹುದೆಂದು ಕುತೂಹಲ ಬಡುವದು. ಸಕಲ ಚರಾಚರ ವಸ್ತುಗಳು ಯಾವನ ಆಳಿಕೆಗೆ ಒಳಪಟ್ಟಿರುವವೋ, ಯಾವನ ಆಜ್ಞೆಯಿಲ್ಲದೆ ಹೆಜ್ಜೆಯನ್ನು ಕೂಡಾ ಇಕ್ಕಲಾರವೋ ಅಂತಹಾ ಈ ಮಹಾಮಹಿಮನು ಯಾರಿರಬಹುದು!! ಯಾವನ ಇಚ್ಛೆಯಿಲ್ಲದೇ ಕಡ್ಡಿಯು ಕೂಡ ಕದಲಲಾರದೋ ಅಂತಹ ಪುರುಷೋತ್ತಮನು ಯಾರು! ಸೃಷ್ಟಿಚಕ್ರದಲ್ಲಿ ಎಲ್ಲ ಚೇತನಾಚೇತನ ವಸ್ತುಗಳನ್ನು ಗರಗರನೇ ತಿರುಗಿಸುವ ಅವನ ಸಂಕಲ್ಪವೇ ಸಂಕಲ್ಪವು!! ಷಡ್ಗುಣೈಶ್ವರ್ಯ

ಸಂಪನ್ನನಾದ ಅನಂತಕಲ್ಯಾಣ ಗುಣಗಳಿಂದ ಯುಕ್ತನಾದ, ಅನಂತ ಶಕ್ತಿಗಳಿಂದ ಭೂಷಿತನಾದ ಸಚ್ಚಿದಾನಂದ ಮೂರ್ತಿಯಾದ ಈ ಪರಮಾತ್ಮನು ಜಗತ್ತನ್ನು ಹುಟ್ಟಿಸಿ ಜೋಕೆಮಾಡಿ ನುಂಗಿಬಿಡುವನು. ಅಗಾಧ ವ್ಯಾಪಾರ ವಿಚಿತ್ರಲೀಲೆ!!

ಈ ಸೃಷ್ಟಿಚಕ್ರದಲ್ಲಿ ಸಿಲುಕಿದ ಜಡವಸ್ತುಗಳು ಮತ್ತು ಚೇತನಪುರುಷರು ಆ ನಿಯಾಮಕನಿಗೆ ಅಧೀನರಾಗಿರಬಹುದು. ಆದರೆ ಆ ಚಕ್ರದಿಂದ ಹೊರಬಿದ್ದ ಮುಕ್ತರು ಪರಮಾತ್ಮನಿಗೇಕೆ ಅಧೀನರಾಗಬೇಕು? ಮೋಕ್ಷದಲ್ಲಿ ಜೀವನು ಪರಮಾತ್ಮನು ಎಂದು ಭೇದ ಉಳಿದರೆ ತಾನೇ ಜೀವನು ಆಳು ಪರಮಾತ್ಮನು ಅರಸು ಎಂದು ಹೇಳುವದು? ಜೀವಾತ್ಮನು ಮೋಕ್ಷಸ್ಥಿತಿಯಲ್ಲಿ ಕೂಡಾ ಪರಮಾತ್ಮನಿಂದ ಭಿನ್ನನಿರುವನೆಂಬುದಕೆ ಏನು ಪ್ರಮಾಣ? ಒಳ್ಳೇದು ಏನೋ ಒಂದು ಪ್ರಮಾಣದಿಂದ ಜೀವಬ್ರಹ್ಮರು ಮುಕ್ತಾವಸ್ಥೆಯಲ್ಲಿ ಕೂಡಾ ಭಿನ್ನರಿರುವರೆಂದು ಸಾಧಿಸಿರಿ! ಆದರೆ ಅವರು ನಿಜವಾಗಿ (ಪಾರಮಾರ್ಥಿಕವಾಗಿ) ಬೇರೆ ಬೇರೆ ಇರವಲೇ ನಮಗೆ ಬೇರೆ ಬೇರೆ ಎಂದು ತೋರಿದರೂ ಮುಂದೆ ಅವರು ಒಂದಾಗುವರು. ಅಂದರೆ ಅವರು ಬೇರೆ ಬೇರೆ ಎಂದು ತೋರುವದು ಸುಳ್ಳು ಅಥವಾ ಮಿಥ್ಯಾ.

ಮಿಥ್ಯಾ ಪದಾರ್ಥವೆಂದರೇನು? ಬ್ರಹ್ಮನಂತೆ ಸತ್ ಪದಾರ್ಥವೂ ಅಲ್ಲ ಮೊಲದ ಕೊಂಬಿನಂತೆ ಅಸತ್ ಪದಾರ್ಥವೂ ಅಲ್ಲ. ಇವೆರಡೂ ಪದಾರ್ಥಗಳಿಗೂ ವಿಲಕ್ಷಣವಾದ ಜಗತ್ತೇ ಮಿಥ್ಯಾ ಅಂದರೆ ಸುಳ್ಳು. ಇಂತಹ ಮಿಥ್ಯಾಪದಾರ್ಥಗಳು ಋಗ್ವೇದದಲ್ಲಿ ಕೂಡಾ ನಿವೇದಿಸಲ್ಪಟ್ಟಿವೆ.

**नासदासीन्नोसदासीत्तदानीं नासीद्रजोनो व्योमा परोयत्।**

ಮಹಾ ಪ್ರಲಯಕಾಲದಲ್ಲಿ ಸತ್ ಪದಾರ್ಥವೂ ಇರಲಿಲ್ಲ ಅಸತ್ ಪದಾರ್ಥವೂ ಇರಲಿಲ್ಲ; ಆದರೆ ಇವೆರಡಕ್ಕೂ ವಿಲಕ್ಷಣವಾದ ಅನಿರ್ವಚಳು ಅಥವಾ ಮಿಥ್ಯಾಭೂತವಾದ ತಮಸ್ಸು ಅಥವಾ ಅವಿದ್ಯಾ ಎಂಬುವದು

ಪಸರಿಸಿತ್ತು. ಇದೇ ಈ ವೇದವಾಕ್ಯದ ತಾತ್ಪರ್ಯ. ಎಂದಮೇಲೆ ಮಿಥ್ಯಾ ಪದಾರ್ಥವು ವೇದಕ್ಕೆ ಸಮ್ಮತವು. ಅಂತಹ ಮಿಥ್ಯಾಭೂತವಾದ ಭೇದವೇ ಮುಕ್ತಾವಸ್ಥೆಯಲ್ಲಿ ಇರುವದು. ನಿಜವಾದ ಭೇದವಲ್ಲ.

ಆಗದು! ಈ ವೇದವಾಕ್ಯದಿಂದ ಮಿಥ್ಯಾಭೂತ ಪದಾರ್ಥವು ಇತ್ತೆಂದು ಎಂದೂ ಸಿದ್ಧವಾಗುವದಿಲ್ಲ. ಈ ವಾಕ್ಯದಿಂದ ಪ್ರಲಯಕಾಲದಲ್ಲಿ ಸತ್ ಪದಾರ್ಥವೂ ಇದ್ದಿಲ್ಲ. ಅಸತ್ ಪದಾರ್ಥವವೂ ಇದ್ದಿಲ್ಲ; ಕೇವಲ ತಮಸ್ಸು ಮಾತ್ರ ಇತ್ತೆಂದು ಅರ್ಥವಾಗುತ್ತದೆ; ಆದರೆ ಆ ತಮಸ್ಸು ಮಿಥ್ಯಾ ಪದಾರ್ಥವೆಂಬುವದು ಮಾತ್ರ ವೇದಾರ್ಥವಲ್ಲ. मूर्तामूर्ताभिप्रायेणोक्तं अमूर्तमसदुच्यते । मूर्तं मूर्तेतरद्ब्रह्म नसत्तन्नासदुच्यते । ಸತ್ ಅಂದರೆ ಮೂರ್ತ ಪದಾರ್ಥಗಳು ಅಸತ್ ಪದಾರ್ಥವೆಂದರೆ ಅಮೂರ್ತ ಪದಾರ್ಥವು. ಶ್ರುತ್ಯಂತರದಿಂದ ಮೂರ್ತ ಪದಾರ್ಥಗಳೆಂದರೆ ಭೂಮಿ, ನೀರು, ಮತ್ತು ಬೆಂಕಿ. ಅಮೂರ್ತಪದಾರ್ಥ ವಾಯು ಮತ್ತು ಆಕಾಶಗಳು. ಆದುದರಿಂದ ನಾಸದಾಸೀತ್ ' ಎಂಬ ವೇದವಾಕ್ಯದ ಅರ್ಥವು ಹೀಗಿರುವದು— " ಪ್ರಲಯಕಾಲದಲ್ಲಿ ಅಸತ್ ಅಂದರೆ ಅಮೂರ್ತ ಪದಾರ್ಥಗಳಾದ ವಾಯು ಆಕಾಶಗಳೂ ಇದ್ದಿಲ್ಲ ಸತ್ ಅಂದರೆ ಮೂರ್ತಪದಾರ್ಥಗಳಾದ ಭೂಮಿ, ನೀರು, ಬೆಂಕಿಗಳೂ ಇದ್ದಿಲ್ಲ ಸತ್ವ, ರಜ, ತಮೋಗುಣಗಳೂ ಇದ್ದಿಲ್ಲ; ಸರ್ವವ್ಯಾಪಿಯಾದ ಅವ್ಯಾಕೃತ ಆಕಾಶವೂ ಇದ್ದಿಲ್ಲ. " ಎಂದಮೇಲೆ ಪ್ರಲಯಕಾಲದಲ್ಲಿರುವ ಅವಿದ್ಯಾ ಅಥವಾ ತಮಸ್ಸು ಅಥವಾ ಪ್ರಕೃತಿಯು, ಮೂರ್ತ ಅಂದರೆ ಭೂಮಿ, ನೀರು ಬೆಂಕಿಗಳು ಅಮೂರ್ತ ಅಂದರೆ ಆಕಾಶ ವಾಯುಗಳೆಂಬ ಪದಾರ್ಥಗಳಿಂದ ವಿಲಕ್ಷಣವಾದುದೆಂದೇ ಪ್ರಾಪ್ತವಾಗುವದೇ ಹೊರತು, ಅದು ಸದಸದ್ವಿಲಕ್ಷಣ ಅಂದರೆ ಮಿಥ್ಯಾ ಅಥವಾ ಅನಿರ್ವಚನೀಯವೆಂದು ಎಲ್ಲಿಯೂ ಉಕ್ತವಾಗಿಲ್ಲ ಮಿಥ್ಯಾ ಪದಾರ್ಥವು ವೇದದಲ್ಲಿ ಅಪ್ರಸಿದ್ಧವಾದುದರಿಂದ, ಇನ್ನು ಮಿಥ್ಯಾಭೂತವಾದ ಭೇದವನ್ನು ಸಾಧಿಸುವ ಬಗೆಯೆಂತು !!

ಶ್ರುತಿಪುರಾಣಗಳಲ್ಲಿ ಪ್ರಪಂಚವು ಅನಿರ್ವಚನೀಯವು; ಅಚಿಂತ್ಯವು ಎಂದು ಅನೇಕ ವಾಕ್ಯಗಳು ದೊರೆಯುವವು. ಆದರೆ ಅನಿರ್ವಚನೀಯ

ಹೊಂದಲಿ ಅಥವಾ ಅಚಿಂತ್ಯವೆಂದರೆ ಮಿಥ್ಯಾ ಅಥವಾ ಸುಳ್ಳು ಎಂದು ಅರ್ಥ ವಲ್ಲ ಯಾಕಂದರೆ ಅದೇ ವಾಕ್ಯಗಳಲ್ಲಿ ಬ್ರಹ್ಮವೂ ಅನಿರ್ವಚನೀಯವು ಅದೂ ಅಚಿಂತ್ಯವು ಎಂದು ಉಕ್ತವಾಗಿದೆ. ಎಂದಮೇಲೆ ಬ್ರಹ್ಮವೂ ಸುಳ್ಳೇನು ಮತ್ತೆ ? ಹಾಗೆಂದೂ ಆಗದು. ಪರಮಾತ್ಮನ ಅಗಾಧವ್ಯಾಪಾರಗಳನ್ನೂ ಸೃಷ್ಟಿಯಅದ್ಭುತ ರಚನೆಯನ್ನೂ ನೋಡಿ ಅವುಗಳಿಗೆ ಅಚಿಂತ್ಯ ಅನಿರ್ವಚನೀಯವೆಂದು ಕರೆದಿರುವರೇ ಹೊರತು ಅವು ಸುಳ್ಳೆಂದು ಎಂದೂ ತಾತ್ಪರ್ಯವಲ್ಲ.

ಇನ್ನು ಕೆಲವೆಡೆಯಲ್ಲಿ ಬ್ರಹ್ಮವೇ ಋತವೆಂದೂ, ಪ್ರಪಂಚವು ಅನೃತವೆಂದೂ ಹೇಳಿವೆ. ಪ್ರಪಂಚವು ಪರಿಣಾಮ ಹೊಂದುವದರಿಂದ ಅನೃತವೂ ಬ್ರಹ್ಮವು ಪರಿಣಾಮಹೊಂದದಿರುವದರಿಂದ ಋತವೂ ಎಂಬದೇ ಇದರ ತಾತ್ಪರ್ಯವು

ಮತ್ತೆ ಬೇರೆ ಸ್ಥಳಗಳಲ್ಲಿ ಬ್ರಹ್ಮವು ಸತ್ಯವೆಂದೂ ಜಗತ್ತು ಅಸತ್ಯವೆಂದೂ ಉಕ್ತವಾಗಿದೆ. ಸತ್ಯವೆಂದರೆ ಶುಭವಾದದ್ದು; ಜಗತ್ತು ಸಂಸಾರವಾದುದರಿಂದ ಅಸತ್ಯವೆಂದರೆ ಅಶುಭವೆನಿಸುವದು. ಅಥವಾ ನಿಯಮಬಂದ ಯಾರ ಚಿತ್ತವು ಹೊರಗೆ ತಿರುಗುವದೋ ಅವರು ಅಸತ್ ಅಂದರೆ ದುಷ್ಟ ಜನರು ಅಂಥ ಜನರು ಈ ಜಗತ್ತನ್ನೇ ಚಿಂತಿಸುವದರಿಂದ ಇದಕ್ಕೆ ಅಸತ್ಯವೆನ್ನುವರು. ಇನ್ನು ಪರಬ್ರಹ್ಮನಲ್ಲಿಯಾರ ಚಿತ್ತವು ಸುಸ್ಥಿರವಾಗಿನೆಲೆಸಿರುವದೋ, ಅವರು ಸತ್ ಅಂದರೆ ಸಜ್ಜನರು. ಅವರು ಧ್ಯಾನಮಾಡುವ ಆ ಬ್ರಹ್ಮವು ಸತ್ಯವು.

ಸಾರಾಂಶ ಈ ಜಗತ್ತಾದರೂ ಪರಮಾತ್ಮನಂತೆಯೇ ಪ್ರಮಾಣವಾದದ್ದು. ಆದರೂ ಆವನ ಅಧೀನದಲ್ಲಿರುವದು. ನದಿಯ ಪ್ರವಾಹದಂತೆ ಅನಾದಿಯಾದರೂ ಕ್ಷಣಕ್ಷಣಕ್ಕೆ ವಿಕಾರಹೊಂದುವದು. ಗೀತಾದಲ್ಲಿ ಹೇಳಿದಂತೆ ಅಲ್ಪಬುದ್ಧಿಗಳೂ ತಮೋಯೋಗ್ಯರು ಮಾತ್ರ ಈ ಜಗತ್ತು ಸುಳ್ಳೆಂದು ಜನರ ಕಂಣಿನಲ್ಲಿ ಮಂಣುಹಾಕುವರು. ಪರಮಾತ್ಮನ ಮಹಿ

ಮೆಯು ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳಲ್ಲಿ ವ್ಯಕ್ತವಾಗುವದು. ಅವನ ಮಹಿಮೆಯಂತೂ ಸತ್ಯವಾದದ್ದು. ಎಂದ ಮೇಲೆ ಜಗತ್ತು ಹೇಗೆತಾನೇ ಸುಳ್ಳಾದೀತು ?

ಕೇವಲ ಕಂಣಿಗೆ ಕಾಣುವ ಮಾತ್ರದಿಂದ ಈ ಜಗತ್ತು ಸುಳ್ಳೆಂದು ಸಾಧಿಸುವರು. ಇವಂತೂ ತಮ್ಮನ್ನು ತಾವೇ ಮೋಸಹಾಕಿಕೊಳ್ಳುವ ಯುಕ್ತಿಯು. ದೇವರು ಯೋಗ್ಯರಾದವರಿಗೆ ಕಂಣಿಗೆ ಕಾಣುವದಿಲ್ಲವೇ ? ಅವನೂ ಸುಳ್ಳೇನು ಹಾಗಾದರೆ ? ಮೇಲಾಗಿ ಪ್ರತ್ಯಕ್ಷವಾಗಿ ತೋರುವ ಈ ಜಗತ್ತು ಸುಳ್ಳು ಹೇಗೆ ? ಜಗತ್ತು ಅಜ್ಞಾನದಿಂದ ಬ್ರಹ್ಮನಲ್ಲಿ ವಿವೃತವಾಗಿ ಮುಂದೆ ಬ್ರಹ್ಮಜ್ಞಾನದಿಂದ ಅಳಿದುಹೋಗುವದೆಂದು ಮಾಯಾವಾದಿಗಳ ಮತವು. ಆದರೆ ಜಗತ್ತು ಮೊದಲು ಅಜ್ಞಾನಕಲ್ಪಿತವೆಂಬುವದಕ್ಕೆ ಏನು ಪ್ರಮಾಣ.

ಮೇಲಾಗಿ ಬ್ರಹ್ಮಸೂತ್ರಗಳಲ್ಲಿ ಬೌದ್ಧಮತ ನಿರಾಕರಣ ಮಾಡುವ ಕಾಲಕ್ಕೆ ಹೊಟ್ಟ ಸೂತ್ರಗಳು ( नासतो ऽदृष्टत्वात्; नाभाव उपलब्धेः वैधर्म्याच्च न स्वप्नादिवत् ಮುಂತಾದವುಗಳು ) ಜಗತ್ತು ಸುಳ್ಳೆಂಬುವದನ್ನು ಸ್ಪಷ್ಟವಾಗಿ ನಿರಾಕರಿಸುತ್ತವೆ. ಯಾಕಂದರೆ ಈ ಸೂತ್ರಗಳ ಪ್ರಸಕ್ತಿಯು ಹೀಗೆ ಹೊರಟಿವೆ:— “ ಶೂನ್ಯದಿಂದ ಜಗತ್ತು ಏಕೆ ಹುಟ್ಟಬಾರದ ? ಯಾಕಂದರೆ ಜಗತ್ತಿನಲ್ಲಿ ಶೂನ್ಯದಿಂದ ( ಅಭಾವದಿಂದ ) ಯಾವ ಪದಾರ್ಥವೂ ಹುಟ್ಟಿದಂತೆ ನಿದರ್ಶನಕ್ಕೆ ಬಂದಿಲ್ಲ. ಬಂಜೆಯ ಮಗನಿಗೆ ಮಕ್ಕಳು ಎಷ್ಟು ಮಂದಿ ? ಅಲ್ಲ; ಜಗತ್ತು ಶೂನ್ಯದಂತೆ ಅಸತ್ ಪದಾರ್ಥವಾಗಿದ್ದರೆ ಅದು ಶೂನ್ಯದಿಂದ ಉತ್ಪನ್ನವಾದರೆ ಏನು ಬಾಧಕ ? ಜಗತ್ತು ಅಸತ್ ಪದಾರ್ಥವೇ ಅಲ್ಲ. ಯಾಕಂದರೆ ಅದು ನಿಜವಾದ ಪದಾರ್ಥವೆಂದು ಪ್ರತಿಯೊಬ್ಬನಿಗೆ ಅನುಭವಬರುವದು. ಮತ್ತು ಅದು ಸ್ವಪ್ನದಂತೆ ಕಂಣಿಗೆ ತೋರಿ ಮಂಣಾಗುವ ಮಾಯವಲ್ಲ; ಯಾಕಂದರೆ ಅದು ಸ್ವಪ್ನದಕಿಂತಲೂ ವಿಲಕ್ಷಣವಾದುದು. ” ಇದರಿಂದ ಜಗತ್ತು ಸುಳ್ಳು ಅಥವಾ ನಿಜವೆಂಬದನ್ನು ವಾಚಕರೇ ವಿಚಾರಿಸ ಬೇಕು.

ಮಾಯಾವಾದಿಯು ವೇಷಾಂತರವನ್ನು ಧರಿಸಿದ ಶೂನ್ಯವಾದಿಯಾದ ಬೌದ್ಧನೆಂಬುವದಕ್ಕೆ ಏನೂ ಸಂಶಯವಿಲ್ಲ; ಯಾಕಂದರೆ ಮುಖ್ಯ ಮುಖ್ಯ ವಿಚಾರಗಳಲ್ಲಿ ಬೌದ್ಧನಿಗೂ ಮಾಯಾವಾದಿಗೂ ಶಬ್ದಭೇದವಿದ್ದರೂ ಅರ್ಥ ಸಾಮ್ಯವದೆ. ಅದು ಹೇಗಂದರೆ:—

| ಮಾಯಾವಾದಿ. | ಶೂನ್ಯವಾದಿ |
|---|---|
| ೧ ಜಗತ್ತು ಪಾರಮಾರ್ಥಿಕ ಸತ್ಯ ಪದಾರ್ಥವಲ್ಲ. ಅದು ವ್ಯಾವಹಾರಿಕ ಸತ್ಯಪದಾರ್ಥವು ಎಂದು ವ್ಯವಹಾರಿಕ ಸತ್ಯವನ್ನು ಅಂಗೀಕಾರಮಾಡಿರುತ್ತಾರೆ. | ೧ **सत्यंतुद्विविधं प्रोक्तं सांवृतं पारमार्थिकं** ಸತ್ಯವು ಎರಡು ವಿಧವಾಗಿರುವದು. ಒಂದು ಸಾಂವೃತ, ಅಂದರೆ ವ್ಯಾವಹಾರಿಕ ಮತ್ತೊಂದು ಪಾರಮಾರ್ಥಿಕ. |
| ೨ ಪರತತ್ವವಾದ ಬ್ರಹ್ಮವು ನಿರ್ಗುಣ ನಿರಾಕಾರ ನಿರ್ವಿಶೇಷವಾದುದು. | ೨ **निर्विशेषं स्वयंभातं निर्लेपमजरामरं । शून्यंतत्वं** ಶೂನ್ಯತತ್ವವು ನಿರ್ವಿಶೇಷವಾದುದು. ಸ್ವಪ್ರಕಾಶವಾಗಿಯೂ ನಿರ್ಲೇಪವಾಗಿಯೂ ಅಜರಾಮರವಾಗಿಯೂ ಇರುವದು |
| ೩ ಬ್ರಹ್ಮನಲ್ಲಿರತಕ್ಕ ಸತ್ವಾದಿ ಧರ್ಮಗಳು ಕೂಡ ಪಾರಮಾರ್ಥಿಕವಲ್ಲ. | **नास्यसत्वं असत्वंवा।** ಶೂನ್ಯಕ್ಕೆ ಸತ್ವವೂ ಇಲ್ಲ. ಅಸತ್ವವೂ ಇಲ್ಲ. |
| ೪ ಬ್ರಹ್ಮವು ಯಾವ ಶಬ್ದಗಳಿಂದಲೂ ವಾಚ್ಯವಲ್ಲ. ಲಕ್ಷಣದಿಂದ ಮಾತ್ರ ಬೋಧ್ಯವು. | ೪ ಶೂನ್ಯವೂ ಎಲ್ಲ ಶಬ್ದಗಳಿಗೆ ಅಗೋಚರವು. **अवाच्यं सर्व शब्दैः तल्लक्ष्यते चाखिलैः पदैः** |
| ೫ ಬ್ರಹ್ಮವು ಅಖಂಡವಾದು. | ೫ ಶೂನ್ಯವೂ ಅಖಂಡವಾದದು. |

ಸರ್ವವೂ ಶೂನ್ಯವು ಜಗತ್ತು ವ್ಯಾವಹಾರಿಕವು ಎನ್ನುವ ಬೌದ್ಧನಿಗೂ ಸರ್ವವೂ ಬ್ರಹ್ಮವು, ಈ ಜಗತ್ತು ವ್ಯಾವಹಾರಿಕವು. ಬ್ರಹ್ಮವು ನಿರ್ವಿಶೇಷ ನಿರಾಕಾರ ಅಖಂಡವೆನ್ನುವ ಮಾಯಾವಾದಿಗೂ ಭೇದವೇನಯ್ಯಾ ? ಶಬ್ದ ವಷ್ಟೇ ಭೇದ; ಅವರು ಶೂನ್ಯವೇ ಪರತತ್ತ್ವವೆನ್ನುವರು; ಅದಕ್ಕೇನೇ ಇವರು ಬ್ರಹ್ಮವೆನ್ನುವರು.

ಮಾಯಾವಾದಿಗಳು ಶ್ರುತಿಯನ್ನು ಮುಂದು ಮಾಡಿಕೊಂಡು ತಮ್ಮ ಅದ್ವೈತವಾದವನ್ನು ಪುಷ್ಟೀಕರಿಸುವರು. ಶ್ರುತಿಯಲ್ಲಿ ಬ್ರಹ್ಮಜ್ಞಾನದಿಂದ ಸರ್ವ ಜ್ಞಾನವೂ ಆಗುತ್ತದೆಂದು ಹೇಳಿದೆ. ಬ್ರಹ್ಮನ ಅತಿರಿಕ್ತವಾದ ಈ ಪ್ರಪಂಚವೆಲ್ಲವೂ ನಿಜವಾಗಿ ಸತ್ಯವಾದರೆ ಈ ಮಾತು ಕೂಡುವ ಬಗೆಹೇಗೆ? ಆದುದರಿಂದ ಬ್ರಹ್ಮವೊಂದೇ ನಿಜವಾದದ್ದು. ಕತ್ತಲೆಯಲ್ಲಿ ಬಿದ್ದ ಹಗ್ಗ ವನ್ನು ಹಾವೆಂದು ಗ್ರಹಿಸಿದಂತೆ ಅಜ್ಞಾನದಿಂದ ಈ ಬ್ರಹ್ಮನಲ್ಲಿ ಪ್ರಪಂಚವು ತೋರುತ್ತದೆ. ಆದುದರಿಂದಲೇ ಅದು ಮಿಥ್ಯಾ ಅಂದರೆ ಸುಳ್ಳು, ಮುಂದೆ ಅದೇ ಶ್ರುತಿಯಲ್ಲಿಯೇ ( यथा सौम्यैकेन मृत्पिंडेन सर्वं मृण्मयं विज्ञातंस्यात् वाचारंभणं विकारोनामधेयं मृत्तिकेत्येव सत्यम् )ಕಾರ್ಯವು ಕಾರಣವಸ್ತು ವನ್ನು ಬಿಟ್ಟಿರಲಾರದ. ಯಾಕಂದರೆ ಮಣ್ಣಿನಿಂದ ಹುಟ್ಟುವ ಕೊಡ ಹರಿವಾಣ ಗಡಿಗೆಗಳನ್ನು ಮಣ್ಣನ್ನು ಬಿಟ್ಟು ಬೇರೆಯಾಗಿ ತೋರಿಸಲಿಕ್ಕೆ ಶಕ್ಯವೋ ? ಆದುದರಿಂದ ಒಂದು ಮಣ್ಣನ್ನು ನಾವು ತಿಳಿದು ಕೊಂಡರೆ ಮಣ್ಣಿನಿಂದ ಹುಟ್ಟುವ ಕೊಡ ಹರಿವಾಣ ಗಡಿಗೆಗಳೆಲ್ಲವನ್ನು ತಿಳಿದಂತಾಯಿತು. ಸತ್ಯ ವಾಗಿರುವದು ಮಣ್ಣು ಒಂದೇ; ಉಳಿದ ಕೊಡ ಹರಿವಾಣ ಮುಂತಾದವುಗ ಳು ಕೇವಲ ಶಬ್ದಗಳಿಂದ ವ್ಯವಹಾರಾರ್ಹವು. ಕೊಡರೂಪ ವಿಕಾರವು ವಸ್ತು ಗತ್ಯಾ ಮಣ್ಣಿನಲ್ಲಿರುವದಲ್ಲ; ಆದುದರಿಂದಲೇ ವಿಕಾರಗಳೆಲ್ಲವೂ ಸುಳ್ಳು. ಅದರಂತೆಯೇ ಬ್ರಹ್ಮ ಒಂದೇ ನಿಜ ಇತರ ಪ್ರಪಂಚವೆಲ್ಲವೂ ಸುಳ್ಳು; ಅಂತೆ ಯೇ ಬ್ರಹ್ಮಜ್ಞಾನದಿಂದ ಎಲ್ಲವೂ ತಿಳಿದಂತಾಗುವದು.

ಆ ಶ್ರುತಿಯ ಅರ್ಥವೇ ಹೀಗಲ್ಲ; ಅಲ್ಲಿ ಬ್ರಹ್ಮಜ್ಞಾನದಿಂದ ಸರ್ವಜ್ಞಾನ ವಾಗುವದೆಂದು ಪ್ರಸಕ್ತವಾದದ್ದೇನೋ ನಿಜ. ಆದರೆ ಅದು ಹೇಗೆ ?

ಎಂದು ಪ್ರಶ್ನೆ ತೆಗೆದರೆ, ಪುರುಷ ಮತಿವೈಚಿತ್ರ್ಯದಿಂದ ಜಗತ್ತಿನಲ್ಲಿ ಅನೇಕ ಭಾಷೆಗಳು ಹೊರಟಿವೆ. ಮೃತ್ತಿಕಾ ಎಂಬ ಸಂಸ್ಕೃತ ಶಬ್ದಕ್ಕೆ ಕನ್ನಡದಲ್ಲಿ ಮಣ್ಣು ಎಂತಲೂ ಮರಾಠಿಯಲ್ಲಿ ' ಮಾತೀ ' ಎಂತಲೂ ಹಿಂದಿಯಲ್ಲಿ ' ಮಟ್ಟೀ ' ಎಂತಲೂ ಇಂಗ್ಲೀಷದಲ್ಲಿ ' Earth ' ಎಂತಲೂ ಹೆಸರುಗ ಳುಂಟು. ಆದುದರಿಂದ ಈ ನಾಲಿಗೆಯ ವ್ಯಾಪಾರದಿಂದ ವೃತ್ತಿಕಾ ಎಂಬು ದಕ್ಕೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಹೆಸರುಗಳುಂಟು ಆದರೆ ಸನಾತ ನಕಾಲದಿಂದ ಬಂದ ಗೀರ್ವಾಣ ಭಾಷೆಯಲ್ಲಿ ಉಪಯೋಗಿಸಿದ ವೃತ್ತಿಕಾ ಎಂಬ ಶಬ್ದವೇ ನಿತ್ಯವಾದದು. ಮಣ್ಣು, ಮಾತಿ, ಮಟ್ಟೀ, Earth ಎಂಬ ಶಬ್ದಗಳು ಅನಿತ್ಯವಾದವು ವೃತ್ತಿಕಾ ಎಂಬ ವೈದಿಕ ಶಬ್ದದಿಂದ ಪ್ರಾಕೃತ ಶಬ್ದಗಳಿಂದಾಗುವ ಫಲವು ದೊರೆಯುತ್ತದೆ. ಅದರಂತೆಯೇ ಪ್ರಧಾನ ಭೂತವಾದ ಬ್ರಹ್ಮಜ್ಞಾನದಿಂದ ಅಪ್ರಧಾನ ಭೂತವಾದ ಪ್ರಪಂಚ ವು ಗತಾರ್ಥವೇ ! ಆದುದರಿಂದ ಪರಸ್ಪರ ಪದಾರ್ಥಗಳ ಹೋಲಿಕೆಯಿಂದ ಮತ್ತು ಮುಖ್ಯ ಪದಾರ್ಥಗಳ ಜ್ಞಾನದಿಂದ ಅಮುಖ್ಯ ಪದಾರ್ಥಗಳನ್ನು ಜನರು ತಿಳಿದುಕೊಳ್ಳುವಂತೆ ಬ್ರಹ್ಮಜ್ಞಾನದಿಂದ ಜಗತ್ತಿನ ಜ್ಞಾನವಾಗು ವದು. ಅದರಿಂದ ಜಗತ್ತು ಸುಳ್ಳೆಂದರ್ಥವಲ್ಲ. ಇನ್ನು ಕಾರಣ ಜ್ಞಾನ ದಿಂದಲೇ ಕಾರ್ಯವನ್ನು ತಿಳಿಯಬೇಕೆಂದು ವಾಚಾರಂಭಣ ದೃಷ್ಟಾಂತವ ನ್ನು ಉದಾಹರಿಸಿದರೆ ಮುಂದೆ ಒಂದು ನಖನಿಕೃಂತನ (ಉಗುರು ತೆಗೆಯುವ ಕತ್ತಿ ) ದಿಂದ ಎಲ್ಲ ಉಕ್ಕಿನ ಸಾಮಾನಗಳ ಜ್ಞಾನವಾಗುವದೆಂಬ ದೃಷ್ಟಾಂ ತವನ್ನು ಕೊಟ್ಟಿದ್ದಾರೆ. ಅಲ್ಲಿ ನಖನಿಕೃಂತನವು ಕಾರ್ಯವು- ಅದರಿಂದ ಕಾರಣ ಜ್ಞಾನವಾಗುವದೆಂದು ಹೇಳಿದಂತಾಯಿತಲ್ಲಾ ? ಆದದರಿಂದ ಹೋಲಿಕೆಯಿಂದ ತಿಳುಕೊಳ್ಳಬೇಕೆಂದೇ ದೃಷ್ಟಾಂತದ ತಾತ್ಪರ್ಯವು

ಇರಲಿ. ಈ ಎಲ್ಲ ಮಾತುಗಳಿಂದ ಜಗತ್ತು ಸುಳ್ಳಲ್ಲವೆಂಬುದು ನಿಶ್ಚ ಯವಾಗುತ್ತದೆ. ಎಂದ ಮೇಲೆ ವೇದದಲ್ಲಿ ಹೇಳಿದ ಮಿಥ್ಯಾಪದಾರ್ಥವು ಯಾವದು? ಮಿಥ್ಯಾ ಪದಾರ್ಥ ವೇದಕ್ಕೆ ಸಮ್ಮತವಾಗದ ಮೇಲೆ ಮುಕಿ

ಯಲ್ಲಿರತಕ್ಕ ಭೇದವು ಮಿಥ್ಯಾ ಎಂದು ಹೇಳುವ ಬಗೆಯಂತೂ ದೂರೋಪಾಸ್ತವಾಯಿತು.

ಇನ್ನೊಂದು ವಿಚಾರ! ಮುಕ್ತಾವಸ್ಥೆಯಲ್ಲಿ ಭೇದವಿಲ್ಲವಷ್ಟೇ! ಎಂದ ಮೇಲೆ ಮುಕ್ತನಿಗೂ ಸಂಸಾರದಲ್ಲಿರುವ ನನಗೂ ಭೇದವಿಲ್ಲ; ಅಂದರೆ ನಾನೂ ಮುಕ್ತನೇ ಅಥವಾ ಮುಕ್ತನೂ ಸಂಸಾರಿಯೋ ಏಕಂದರೆ ಇಬ್ಬರುಗೂ ಭೇದವಿಲ್ಲ !।

ಚನ್ನಾಗಿದೆ! ಭೇದವು ಅಜ್ಞಾನಮೂಲಕವು. ಸಂಸಾರಿಯು ಅಜ್ಞಾನಿಯಾದುದರಿಂದ ಅವನಿಗೆ ಮುಕ್ತನು ಭಿನ್ನನಾಗಿ ತೋರುವದು. ಸಂಸಾರಿಗೂ ಅಜ್ಞಾನವು ಹೋಯಿತೆಂದರೆ ಎಲ್ಲಭೇದವು ಅಳಿಸಿಹೋಗಿ ಐಕ್ಯದ ಸಾಮ್ರಾಜ್ಯವು ತಳವೂರುವದು.


ಭೇದವು ಅಜ್ಞಾನಮೂಲಕವಾದರೆ, ಈಶ್ವರನಿಗೂ ತಾನು ಸಂಸಾರಿಯೆಂದು ಅನುಭವ ಬರಲಿ. ಯಾಕಂದರೆ ಈಶ್ವರನು ಸರ್ವಜ್ಞನು; ಅಜ್ಞಾನವಂತೂ ಅವನಿಗೆ ಇಲ್ಲವೇ ಇಲ್ಲ. ಎಂದಮೇಲೆ ಅವನಿಗೆ ಭೇದಜ್ಞಾನ ಬರುವಬಗೆ ಹೇಗೆ. ಸಂಸಾರಿಗೂ ತನಗೂ ಭೇದಜ್ಞಾನ ಬರದಿರಲು ಈಶ್ವರನೂ ದು:ಖಿಯಾಗಲಿ. ಇಂತಹ ಅನಿಷ್ಟಗಳು ಪ್ರಾಪ್ತವಾಗುವವೆಂದೇ ಭೇದವು ಅಜ್ಞಾನಮೂಲಕವಲ್ಲವೆಂಬದು ನಿಶ್ಚಯುವಾಗುತ್ತದೆ. ಗೀತಾದಲ್ಲಿ ಪರಮಾತ್ಮನು ಸಂಸಾರಿಗೆ ಅಜ್ಞಾನವು; ತನಗೆಜ್ಞಾನವು ಎಂದು ಸಂಸಾರಿಗೂ ತನಗೂ ಭೇದವನ್ನೇ ತೋರಿಸಿರುವನು. ಆದುದರಿಂದಲೇ ಮುಕ್ತನಿಗೂ ಸಂಪೂರ್ಣ ಜ್ಞಾನವಿರುವದರಿಂದ ಅವನಿಗೂ ಭೇದಜ್ಞಾನವು ಉಂಟಾಗಿ ತಾನೂ ಸಂಸಾರಿಯೂ ಬೇರೆಯೆಂದು ತಿಳಿದುಕೊಳ್ಳುವನು. ಮುಕ್ತಾವಸ್ಥೆಯಲ್ಲಿ ಭೇದಜ್ಞಾನವು ಸುಸ್ಥಿರವಾದ ಮೇಲೆ ಈಶ್ವರನೂ ಮುಕ್ತಜೀವರೂ ಭಿನ್ನರೆಂದು ಬೇರೆಏಕೆ ಹೇಳಬೇಕು?

ಗೀತಾದಲ್ಲಿ ಪರಮಾತ್ಮನು ತನ್ನ ಜ್ಞಾನವನ್ನು ಹೊಂದಿದವರು ತನ್ನಂತೆ ಆಗುವರೆಂಬ ( **मम साधर्म्यमागताः** ) ಪ್ರತಿಜ್ಞಾ ಮಾಡಿರುತ್ತಾನೆ. ಉಪನಿ

ಷತ್ತಿನಲ್ಲಿ ( निरंजनः परमं साम्य मुपैति ) ಜೀವನು ಪುಣ್ಯಪಾಪಗಳನ್ನು ತೊಲಗಿ ಸಾಮ್ಯಹೊಂದುವನೆಂದು ಮುಕ್ತಾವಸ್ಥೆಯಲ್ಲಿ ಭೇದವನ್ನೇ ಹೇಳಿದ್ದಾರೆ. ಪ್ರತ್ಯಕ್ಷವು, ಯುಕ್ತಿಯೂ, ಆಗಮವೂ ಬಲವಾಗಿ ಭೇದವನ್ನು ಬೆನ್ನುಕಟ್ಟುವದರಿಂದ, ಮೇಲೆ ಮೇಲೆ ಐಕ್ಯವನ್ನು ಸರುವಂತೆ ತೋರುವ ವೇದಗಳು ಕೂಡಾ ಘಾಬರಿಗೊಂಡು ಭೇದ ಪಕ್ಷವನ್ನೇ ಅಂಗಿಕರಿಸುವವು.

ತಿಳಿಯದ ಕೂಸು ವಿವೇಕವನ್ನು ಹಳಿದು ಎಲ್ಲವೂ ಒಂದೇದು ವ್ಯವಹಾರ ಮಾಡುವದು ತಿಳಿಗೇಡಿ ಮನುಷ್ಯನು ಕಾರ್ಯವೂ ಅಕಾರ್ಯವು ಒಂದೇ ಎಂದು ತಿಳಿದು ಜಗದಲ್ಲಿ ನಡೆದು ನಗೆಗೇಡಿ ಯಾಗುವನು. ಹೀಗೆ ಹುಚ್ಚುತನದಿಂದಲೇ ಒಂದೆಂಬ ಭಾವನೆಯುಬರುವದು ಈ ಹುಚ್ಚುತನವಿಂದ ಪರಮಾತ್ಮನೆಂದಾದರೂ ಮೆಚ್ಚಬಹುದೇ ? ಯೋಗಿಯು ಸಮಾಧಿಸ್ತನಾಗಿ ದೇವರನ್ನು ಚಿಂತಿಸಹತ್ತಿದಾಗ ತನ್ನನ್ನು ತಾನು ಮರೆತುಬಿಡುವನು; ಆದುದರಿಂದ ಅವನು ದೇವರೊಡನೆ ಐಕ್ಯಹೊಂದಿದನೆಂದು ಹೇಳುವರು. ಇದಂತೂ ಶುದ್ಧತಪ್ಪು, ಯಾಕಂದರೆ ಮರವು ಅಜ್ಞಾನದಲಕ್ಷಣವಲ್ಲವೇ ? ಅವನಿಗಿನ್ನೂ ಅಜ್ಞಾನವಿರುವದರಿಂದಲೇ ಆ ಯೋಗಿಯು ತನ್ನನ್ನು ತಾನು ಮರೆತುಬಿಟ್ಟನು. ಆದದರಿಂದಲೇ ಏಕಕಾಲಕ್ಕೆ ಅನೇಕ ವಿಷಯುಗಳನ್ನು ಗ್ರಹಿಸುವವರೇ ಹೆಚ್ಚಿನ ಜ್ಞಾನಿಗಳೆಂದು ಜಗತ್ತಿನಲ್ಲಿ ಅಷ್ಟಾವಧಾನಿ, ಶತಾವಧಾನಿ ಎಂಬ ನಾಮಗಳಿಂದ ಹೆಸರಾಗಿರುವರು. ತನ್ನ ಜ್ಞಾನವೇ ತನಗಿಲ್ಲದ ಯೋಗಿಯು ದೇವರನ್ನು ತಿಳಿಯುವದೆಂತಪ್ಪು. ಸ್ವಚ್ಛವಾದ ಅಪರೋಕ್ಷ ಜ್ಞಾನವಾದರೆ ಎಲ್ಲವೂ ಬೇರೆ ಬೇರೆಯಾಗಿ ತಮ್ಮ ತಮ್ಮ ಸ್ವಭಾವ ಧರ್ಮಗಳಿಂದ ವಿದಿತವಾಗುವವು. ಐಕ್ಯವೇ ನಮ್ಮ ಅವಸ್ಥೆಯಾದರೆ ಮೋಹವೇ ಮೋಕ್ಷಕ್ಕೆ ಸಾಧನವಾದೀತು. ಹುಚ್ಚುತನವೇ ಹೆಚ್ಚಿನದಾದೀತು ಜ್ಞಾನವೇ ಅಳಿದು ಹೋದೀತು. ನಾವು ಎಷ್ಟು ಜಪಮಾಡಿದರೇನು; ತಪಮಾಡಿದರೇನು; ಮುಕ್ತರಾದರೇನು ? ಸಮಸ್ತಗುಣ ಪರಿಪೂರ್ಣನಾದ ಪರಮಾತ್ಮನ ಪಾಸಂಗಕ್ಕೆ ಕೂಡಾ ಹತ್ತಲಾರೆವು. ಅವನ ಸ್ಥಾನವು ಮುಕ್ತಾ ಮುಕ್ತ ದೊರೆಯುವದು ದುರ್ಲಭವೆಂದು ಶ್ರುತಿಗಳು ಮೊಳಗುತ್ತವೆ. ಇಂತಹ

ಪರಮಾತ್ಮನೊಡನೆ ಐಕ್ಯಭಾವನ್ನು ಹೊಂದಿ ಆನಂದ ಹೊಂದುವ ನಮ್ಮನ್ನೇ ಕೊಂದುಹಾಕಿ ಎಲ್ಲವೂ ಪರಮಾತ್ಮನನ್ನು ಮಾಡಿದಲ್ಲಿ ಮೋಜೇನು? ಹೇಳಬಾರದೇ? ಆದೇ ನಾನೆಂಬ ಕನ್ಯೆಯನ್ನು ಇಟ್ಟುಕೊಂಡು ಅವಳ ಅಹಂಕಾರವನ್ನು ಕಿತ್ತುಹಾಕಿ; ಭಕ್ತಿಯಿಂದ ಬೆಳಿಸಿ ವಿರಕ್ತಿಯಿಂದ ತೊಳಿಸಿ ಜ್ಞಾನದಿಂದ ತಿಳಿಸಿ, ಮುಕ್ತಿಯಲ್ಲಿ ಪರಮಾತ್ಮನೊಡದೆ ಮದುವೆಗೆ ಕಳಿಸಿದರೆ ಆ ಆನಂದದ ಪಾರಾವಾರವನ್ನು ತಿಳಿಯುವವರಾರು? ಇದೆಲ್ಲ ಸೊಬಗಿಗೆ ನಾನು ಪರಮಾತ್ಮನೆಂಬ ಇಬ್ಬಣ (ಎರಡು ಬಣ-ಭೇದ)ವೇ ಕಾರಣವಲ್ಲವೇ; ಆದುದರಿಂದ ಈ ಲೋಕದಲ್ಲಿ ಕೂಡ ಇಬ್ಬಣವಿಲ್ಲದೊಡೆ ನಿಬ್ಬಣದ ಸೊಬಗೇ ಕುಂದುವದು !!! ಈ ಕಲ್ಯಾಣಕ್ಕೆ ನೆರವಾಗಿರಿ.



# ೮ನೇ ಪ್ರಕರಣ.

## ಶ್ರುತಿದೇವಿಯ ತತಿಯು.

( ತತ್ವನಿರ್ಣಯದ ಆಧಾರದಿಂದ ಬರೆದದ್ದು. )

ಅಪಾರ ಮಹಿಮನ ಅಗಾಧ ಚರಿತ್ರೆಯನ್ನು ತಿಳಿಯುವ ಬಗೆ ಎಂತು? ಕಣ್ಣಿನಿಂದ ನೋಡಲ್ಯಾ; ಕಿವಿಯಿಂದ ಕೇಳಲ್ಯಾ? ನಾಲಿಗೆಯಿಂದ ರುಚಿ ಹತ್ತೀತೇ? ಮೂಗಿಗೆ ವಾಸನೆ ತಟ್ಟೀತೆ? ಕೈಗೆ ಮುಟ್ಟೀತೆ! ಏನುಮಾಡಲಿ ಎಲ್ಲಿ ಹುಡುಕಲಿ!! ಮನಸ್ಸಾದರೂ ಅವನನ್ನು ತರ್ಕಿಸಲಿಕ್ಕೆ ಶಕ್ತವಾದೀತೇನು? ಛೇ? ಅನಂತರಾಶಿಯನ್ನು ಒಂದೊಂದೇ ಎಣಿಸಿ ಕೊನೆಗಾಣಬಹುದೇ? ಅನ್ಯರ ಸಹಾಯವಿಲ್ಲವಲೇ ನನ್ನನ್ನು ನಾನು ಚನ್ನಾಗಿ ತಿಳಿಯದವನು ಅವನನ್ನು ಹೇಗೆ ತಿಳಿಯುವದು? ನಾನು ಯಾರ ಮಗನೆಂಬದಕೆ ತಂದೆ ತಾಯಿಗಳ, ಗುರುಹಿರಿಯರ, ಆಪ್ತೇಷ್ಟರ, ವಾಕ್ಯವೇ ಪ್ರಮಾಣ ಹೊರತು, ನಾನು ನನ್ನತಂದಿಯ ಮಗನೆಂಬದು ನನ್ನ ಕಣ್ಣುಕಂಡಿಲ್ಲ. ಲೌಕಿಕದಲ್ಲಿ ಸಹ ಅನ್ಯರಲ್ಲಿ ನಂಬಿಗೆ ಇಲ್ಲವೊಡೆ ಅರಘಳಿಗೆ ಕೂಡಾ ಕೆಲಸವಾಗದು. ಇಂಗ್ಲಂಡವು ಯಾವದೇಶವೋ ಯಾವ ಕೋಶವೋ? ನೂರರಲ್ಲಿ ತೊಂಭತ್ತರಕಿಂತಲೂ ಹೆಚ್ಚು ಜನರು ಹಿಂದೆನೋಡಿಲ್ಲ ಮುಂದೆ ಎಂದೂ ನೋಡುವದಿಲ್ಲ. ಆದರೂ ಹಿಂದುಸ್ತಾನಕ್ಕೆ ಇಂಗ್ಲಂಡವು ನಡುಮನೆಯಂ

ತಾಗಿದೆ. ಪ್ರತ್ಯಕ್ಷವಾಗಿ ಕಂಡದ್ದೆ ಪ್ರಮಾಣವೆನ್ನುವವರು ಒಂದು ಘಳಿಗೆ ಕೂಡಾ ಈ ಜಗತ್ತಿನಲ್ಲಿ ಬಾಳರು. ಎಂದಮೇಲೆ ಆ ಮಹಾಪುರುಷನನ್ನು ಕಂಡು ಹಿಡಿಯ ಬೇಕಾದರೆ ಅನ್ಯರಾರು ನಮಗೆ ಗತಿಯು? ಪರಮಾಪ್ತಳೂ, ಭಗವದ್ಗುಣಕಥಾನಿರತಳೂ ಆದ ಶ್ರುತಿಯೇ ನಮಗೆ ಗತಿಯು !!

ಆ ವೇದಕ್ಕೆ ಯಾವ ದೋಷಗಳೂ ತಟ್ಟಲಾರವು. ನಮ್ಮ ಬುದ್ಧಿಯ ವಿಪರೀತ ಕಲ್ಪನೆಯೂ, ಮನಸಿನ ಮಾತ್ಸರ್ಯವೂ, ಕಣ್ಣಿನ ಕೊಂಕೂ, ಕಿವಿಯ ಕಿವಡತನವೂ ನುಡಿಯ ಕೊಡತನವೂ- ಯಾವೂ ಅದರಲ್ಲಿ ಬೆರತಿಲ್ಲ. ಅವಳು ಅಯೋನಿಜೆಯು; ಯಾಕಂದರೆ ವೇದವು ಅಪೌರುಷೇಯುವಲ್ಲವೇ ? ಯಾವ ಮನಸ್ಸಿನ ಗರ್ಭದಲ್ಲಿಯೂ ವೇದವು ವಾಸಿಸಿಲ್ಲ; ಗುಣದೋಷಗಳೆಂಬ ಶುಕ್ರಶೋಣಿತವ ಸಂಬಂಧನೇ ಇಲ್ಲ. ಯಾವ ನೀಚ ಉದ್ದೇಶದ ಬೇನೆಯನ್ನೂ ತಿನ್ನದಲೆ ಪರಮ ಪವಿತ್ರವಾದ ಪರಮಾತ್ಮನ ಮುಖವು ಶ್ರುತಿಯನ್ನುಸುರಿತು. ಇಂತಹ ಪವಿತ್ರ ಸ್ಥಳದಲ್ಲಿ ಪ್ರಕಟವಾಗಿರುವ ವೇದವೇ ಪರಮಾತ್ಮನ ಗುಣಗಳನ್ನು ಹೊಗಳುವದು- ಅದೇ ನಮಗೆ ಜ್ಞಾನದಬೀಡು !!

ಆಕಾಶವು ಎಲ್ಲ ಕಡೆಯಲ್ಲಿ ಹಬ್ಬಿರುವದು ಶಬ್ದವೇ ಅದರಗುಣವು. ಈ ಶಬ್ದಗಳಿಂದ ವರ್ಣಗಳು ಉತ್ಪನ್ನವಾಗುವವು ಆವರ್ಣಗಳ ಸಮುದಾಯವೇ ಪದವು. ಪದಗಳು ಕೂಡಿ ವಾಕ್ಯವಾಗುವದು. ಇಂತಹ ವಾಕ್ಯಗಳ ಗುಂಪೇ ವೇದವೆನಿಸುವದು; ಸರ್ವಜ್ಞನಾದ ಪರಮಾತ್ಮನು ಅದನ್ನು ಸದಾ ಗೃಹಿಸಿರುವದರಿಂದ ನಿತ್ಯವೆನಿಸುವದು.

ಈ ವೃದ್ಧಮಾತೆಯು ದಯಾಸಾಗರನಾದ ಪರಮಾತ್ಮನ ಅನಂತ ಗುಣಗಳನ್ನು ತನ್ನ ಅಂತಃಕರಣದಲ್ಲಿ ಪೋಣಿಸಿ ಸದಾ ಜಪಿಸುತ್ತಿರುವಳು ಅವಳು ಅನ್ನುವದೇನಂದರೆ:- " ಸರ್ವವನ್ನೂ ತಿಳಿದು, ತನ್ನೊಳು ಗುಣಗಳನ್ನಳಿದು ದೋಷಗಳನ್ನು ಅಳಿದು ಪರಮಾತ್ಮನೇ ಜಗವನ್ನು ಹಡೆದು ಜೋಕೆಮಾಡಿ ನುಂಗಿ ಸೀರಲ್ಲಾಡುವನು. ಅವನನಾಡೇ ನಿಜನಾದ ಸುಖದ

ಬೇಡು. ಅವನನ್ನು ತಿಳಿಯಿರಿ. ಮೋಹವ ಕಳೆಯಿರಿ; ಸಂಸಾರವ ಹಳಿಯಿರಿ ಎಂದರೆ ಅವನ ನಾಡು ಒಪನೆಯೇ ದೊರೆಯುವದು. ದುಃಖವನ್ನು ನೀಗಿ ಸುಖಸಾಮ್ರಾಜ್ಯಕ್ಕೆ ಅಧಿಕಾರಿಗಳಾಗುವಿರಿ."

ಇದೆಲ್ಲವನ್ನೂ ಬಿಟ್ಟು ಕೆಲವರು ವೇದಕ್ಕೆ ಐಕ್ಯದಲ್ಲಿ ತಾತ್ಪರ್ಯವೆಂದು ಹೇಳುವರು ಇದಕ್ಕೆ ಪ್ರಮಾಣವೆಂದು ಕೆಲವು ವೇದವಾಕ್ಯಗಳನ್ನು ಉದಾಹರಿಸುವರು. ಅದು ಹಾಗಿರಲಿ- ಸ್ವತಃ ನಮಗೆ 'ನಾವು ದುಃಖಿಗಳು ಪರತಂತ್ರರು' ಎಂದು ಪರಮಾತ್ಮನಿಂದ ವಿಲಕ್ಷಣರೆಂಬ ಅನುಭವವು ಪ್ರತ್ಯಕ್ಷವಾಗಿ ಬರುತ್ತಿದೆ. ಇದರಿಂದ ನಮ್ಮ ಸಾಕ್ಷಿಯಂತೂ ಭೇದವನ್ನು ಬೋಧಿಸುತ್ತದೆ. ವೇದವಾದರೂ ಐಕ್ಯವನ್ನು ಬೋಧಿಸುವದೆಂದು ಕೆಲವರ ಮತ. ಇದರಲ್ಲಿ ಎರಡೂ ಸತ್ಯವಾಗಲರವು, ಇನ್ನು ಯಾವದು ಸುಳ್ಳಾಗಬೇಕು? ಇದು ನಿಜ ಇದು ಸುಳ್ಳು ಇದು ಪ್ರಮಾಣ ಇದು ಅಪ್ರಮಾಣವೆಂದು ಗ್ರಹಿಸುವದೇ ನಮ್ಮ ಸಾಕ್ಷಿಯು; ಒಂದು ಪಕ್ಷದಲ್ಲಿ ಅದೇ ಅಪ್ರಮಾಣವಾದರೆ ಐಕ್ಯವನ್ನುಸುರುವ ವೇದವಾದರೂ ಪ್ರಮಾಣವೆಂದು ಏತರಮೇಲಿಂದ? ಯಾಕಂದರೆ ವೇದವು ಪ್ರಮಾಣವೆಂದು ಹೇಳುವ ನಮ್ಮ ಸಾಕ್ಷಿಯೇ ಖೊಟ್ಟಿಯೆಂದು ಗ್ರಹಿಸಿದ್ದೇವೆ. ಆದುದರಿಂದ ಸಾಕ್ಷಿಯು ಸುಳ್ಳಾದರೆ ವೇದವೂ ಸುಳ್ಳಾಗುವದು. ಅದಕ್ಕೆ ಸಾಕ್ಷಿಯು ಸತ್ಯವೆಂದು ಅವಶ್ಯವಾಗಿ ಒಪ್ಪಬೇಕು. ಸಾಕ್ಷಿಯಂತೂ ಭೇದವನ್ನು ಬೋಧಿಸುತ್ತದೆ. ವೇದಕ್ಕಾದರೂ ಭೇದದಲ್ಲಿಯೇ ತಾತ್ಪರ್ಯ ವಿರಬೇಕು

ಮೋಕ್ಷವೇ ನಮಗೆ ಪರಮ ಪುರುಷಾರ್ಥವು. ಯಾವನ ಪ್ರಬಲ ಸಂಕಲ್ಪವು ನಮ್ಮನ್ನು ಈ ಸಂಸಾರದಲ್ಲಿ ಅಡಕಿಸಿರುವದೋ, ಅವನ ಮನಸ್ಸು ಪ್ರಸನ್ನವಾಗದ ಹೊರತು ಆ ಗಂಟು ಸಡಿಲಾಗುವ ಬಗೆಎಂತು? ಅವನು ಪ್ರಸನ್ನನಾಗಬೇಕಾದರೆ ಅವನು ನಮ್ಮ ಕಿಂತಲೂ ಅಧಿಕನೆಂಬ ಜ್ಞಾನವು ಅವಶ್ಯವು. ಯಾಕಂದರೆ ಗೀತೆಯಲ್ಲಿ ಪರಮಾತ್ಮನೇ- **योमामेवमसंमूढो जानाति पुरुषोत्तमम्। ससर्वविद्भजतिमां सर्व भावेन भारत**

ತನ್ನನ್ನು ಗುಣಗಳಿಂದ ಅಧಿಕನೆಂದು ತಿಳಿದವನೇ ತನ್ನನ್ನು ಹೊಂದುವ ನೆಂದು ಕೈಯೆತ್ತಿ ಹೇಳಲು, ನಾನು ನೀನು ಒಂದೆಂದರೆ ಅವನು ಪ್ರಸನ್ನಾಗ ಬಹುದೇ ? ಅವನು ಪ್ರಸನ್ನನಾಗದೊಡೆ ಅವನಾವನಪ್ಪಾ ಈ ಜನ್ಮದಗಂಟು ಹರಿಲಿಸುವವನು ? ಗಂಟುಹರಿಲಾಗದೊಡೆ ಬಿಡುಗಡೆ ಹೇಗೆ ?

ಶರಣು ಹೋದ ಶ್ರುತಿಗಾದರೂ ಮಾನಕೊಡಿರಿ; **तत्त्वमसि** ಎಂದು ಒಂಬತ್ತು ಸಾರೆ ಒಂಬತ್ತು ದೃಷ್ಟಾಂತವನ್ನು ಕೊಟ್ಟು ಜೀವನು ಪರಮಾತ್ಮ ನಲ್ಲವೆಂದು ಭೇದವನ್ನು ಸ್ಥಾಪಿಸುವ ವೇದವು ಹಡುಗಾಟಿಕೇನಯ್ಯಾ ? ಅಲ್ಲಿಯ ಪ್ರಸಕ್ತಿಯು ಹೀಗಿದೆ- ಮೊದಲು ಜೀವ ಪರಮಾತ್ಮರು ಭಿನ್ನ ರೆಂದು ಬೋಧಿಸುವದಕ್ಕೆ ಪರಮಾತ್ಮನ ಅಗಾಧ ಮಹಾತ್ಮ್ಯೆಯೂ ಅವನು ಅ ಸಹಾಯನಾಗಿ ತೇಜ, ಅಪ್, ಅನ್ನ ಮುಂತಾದ ಸಮಸ್ತ ಜಗತ್ತನ್ನು ಸೃಷ್ಟಿ ಮಾಡಿದನೆಂದೂ ನಿವೇದಿತವಾಗಿದೆ. ಈ ಮಹಾತ್ಮ್ಯೆಯು ಶ್ರುತಿಯೆಂಬ ಕನ್ನಡಿಯಲ್ಲಿಯೇ ಹೊಳೆಯುವದು; ಮಿಕ್ಕಕಡೆ ದೊರೆಯದು. ಆದುದ ರಿಂದ ಉನ್ಮತ್ತನಾದ ಜೀವನು ಎಚ್ಚತ್ತಾಗ ವೈಮರಿತು ಮೂಢನಾಗುವನು ಮಲಗಿದಾಗ ಮಾನವನ್ನು ತೊರೆದು ಜೀವನು ಪರಮಾತ್ಮನ ಅಡಿಗಳಲ್ಲಿ ಅಡಗುವನು. ಈ ರೀತಿಯಾಗಿ ಜಾಗರಸ್ವಾಪಗಳಲ್ಲಿ ಶರೀರೇಂದ್ರಿಯಗಳು ಅತ್ತಿತ್ತಹರಿದಾಡಿ ಜೀವನು ಶ್ರಾಂತನಾಗಿ ಭ್ರಾಂತಿಗೊಂಡು ಕೊನೆ ಗೆ ಕಟ್ಟಿಹಾಕಿದವನನ್ನೆ ಕಾಣಬೇಕೆಂದು ಹಾತೊರೆಯುವನು. ಇಲ್ಲಿ ಒಂದು ದೃಷ್ಟಾಂತ ಕೊಟ್ಟಿರುವರು. " ಯಾವರೀತಿಯಾಗಿ ಗೂಟಕ್ಕೆ ಬಿಗಿದ ಗಿಳಿ ಯು ಟಣಪಣ ಹಾರಾಡಿದರೂ ಬಿಡುಗಡೆ ಹೊಂದದೇ ಬೇಸತ್ತು ಗೂಟ ಆಶ್ರಯಿಸುವದೋ ಅದೇ ರೀತಿಯಾಗಿ ಜೀವನು ಎಷ್ಟು ಒದ್ದಾಡಿದರೂ ಮನಸಿನ ಶಾಂತತೆಯು ಸಿಗದೊಡೆ ಕರುಣಾಳುವಾದ ಪರಮಾತ್ಮನಿಗೆ ಶರಣು ಹೋಗುವನು, " ಇದರಿಂದ ಜೀವ ಪರಮಾತ್ಮರು ಒಂದೆಂದು ಶ್ರುತಿಯು ಅಭಿಪ್ರಾಯವೋ ಅಥವಾ ಜೀವನು ದಾಸನು ಪರಮಾತ್ಮನು ಈಶನೆಂದು ಶ್ರುತಿಗೆ ತಾತ್ಪರ್ಯವೋ ವಾಚಕರೇ ಊಹಿಸಲಿ !!

" ಎಲ್ಲ ಪ್ರಜೆಗಳು ಸತ್ತಿನಲ್ಲಿ ಹುಟ್ಟಿ ಸತ್ತಿನಲ್ಲಿ ಮೆಟ್ಟು ಮಾಡಿರುವವು" ನನ್ನ ದೇಹದಲ್ಲಿ ನನ್ನ ಹೊರತು ಅನ್ಯರು ಕಾಣರಲ್ಲಾ ಎಂಬ ಮಗನ ಆಕ್ಷೇಪಕ್ಕೆ ಮತ್ತೆ ತಂದೆಯು ಹೇಳುವದೇನಂದರೆ: —

" ಭ್ರಮರವು ಮಂದವಾಗಿ ಅಲೆದು ನಾನಾವೃಕ್ಷಗಳ ಮಕರಂದವನ್ನು ಕೂಡಿಸಿ ಮಧುವನ್ನು ಮಾಡಲು ಆ ನಾನಾರಸಗಳು ತಾನು ಮಾವಿನ ರಸವು ನಾನು ಹಲಸಿನ ರಸವು ಎಂದು ವ್ಯಕ್ತಿಶಃ ತಿಳಿಯಲಾರವು; ಹಾಗೆಯೇ ಈ ಎಲ್ಲ ಪ್ರಜೆಗಳು ತಮ್ಮತಮ್ಮ ದೇಹಗಳಲ್ಲಿಯೇ ಪರಮಾತ್ಮನಲ್ಲಿ ಬೆರತಿದ್ದರೂ ಅದನ್ನು ಅರಿಯರು. ಈ ಪರಮಾತ್ಮನ ಆಶ್ರವನ್ನು ಅರಿಯದ ಅಪರಾಧದಿಂದಲೇ ಸಿಂಹ ವ್ಯಾಘ್ರಾದಿಗಳಾಗಿರುವವು.

" ಗಂಗಾನದಿಗಳು ಪೂರ್ವಕ್ಕೆ ಹರಿಯುತ್ತಾ ಸಮುದ್ರಕ್ಕೆ ಕೂಡುವವು; ಕೆಲವು ಪಶ್ಚಿಮಕ್ಕೆ ಹರಿಯುತ್ತಾ ಸಮುದ್ರಕ್ಕೆ ಕೂಡುವವು. ಸಮುದ್ರದಿಂದ ಹುಟ್ಟಿ ಸಮುದ್ರವನ್ನೇ ಪ್ರವೇಶಿಸುವವು. ಆದರೂ ನಾನು ಗಂಗೆ ನಾನು ಯಮುನೆ ಇವು ಸಮುದ್ರವೆಂದು ಹೇಗೆ ತಿಳಿಯುವದಿಲ್ಲವೋ ಹಾಗೆಯೇ ಸರ್ವ ಜೀವಗಳು ಪರಮೇಶ್ವರನಿಂದ ಉತ್ಪನ್ನರಾಗಿ, ಅವನ ಆಶ್ರಯವನ್ನೇ ತಿಳಿಯದಾಗುತ್ತವೆ.

" ಈ ಜೀವವೆಂಬ ವೃಕ್ಷಕ್ಕೆ ಪರಮಾತ್ಮನು ಪ್ರಭುವಾಗಿ, ಅದರ ರಸವನ್ನು ಸವಿದು; ಅದರ ಒಂದು ಟೊಂಗೆಯನ್ನು ಈಶನು ಬಿಟ್ಟೊಡೆ ಒಣಗಹತ್ತುವದು. "

ಈ ವಚನಗಳ ಮೇಲಿಂದ ಶ್ರುತಿಯು ಭೇದಕ್ಕೆ ಬೆಂಬಲವಾಗಿರುವದೋ ಅಥವಾ ಅಭೇದವನ್ನು ಅನುಮೋದಿಸುವದೋ ನೀವೇ ವಿಚಾರಿಸಿರಿ ಅಭೇದವನ್ನು ಕಟ್ಟಿಕೊಂಡು ಈ ಜಗತ್ತು ಸುಳ್ಳೆಂದು ಸಾರಿ ಕೀರಿಕೆಯನ್ನು ಹೊಂದುವರ . ತಳಮೂರಿದ ಭೇದವನ್ನು ಟೊಂಗಿ ಕತ್ತರಿಸಿ ಒಣಗಿಸಬೇಕೆಂದು ಪ್ರಯತ್ನಿಸಿದರೆ ಅದು ಕಸಿ ಮಾಡಿದಂತಾಗಿ ಹೆಚ್ಚು ಟಿಸಳು ಒಡೆಯುವದು.

ಈ ಭೇದವೃಕ್ಷಕ್ಕೆ ಐದು ಶಾಖೆಗಳು. ಜೀವ ಪರಮಾತ್ಮನಿಗಿರತಕ್ಕ ಭೇದವು ಒಂದು ಶಾಖೆಯು. ಜಡಕ್ಕೂ ಈಶ್ವರನಿಗೂ ಇರತಕ್ಕ ಭೇದವು ಎರಡನೆಯದು. ಜೀವರಿಗುವ ಭೇದವು ಮೂರನೆಯದು. ಜೀವನಿಗೂ ಜಡನಿಗೂ ಕಾಣುವ ಭೇದವು ನಾಲ್ಕನೇಯದು. ಜಡ ವಸ್ತುಗಳಲ್ಲಿರುವ ಭೇದವು ಐದನೇದು.

ಒಂದು ನರಿಯು ನದಿಯಲ್ಲಿ ಮುಳುಗಿ ಹೋಗುತ್ತಿರಲು ' ಜನಗಳಿರಾ ಲೋಕವು ಮುಳುಗುತ್ತದೆ; ಮುಳುಗುತ್ತದೆ ' ಎಂದು ಕೂಗಹತ್ತಿತು. ಜನಗಳು ಕೇಳಿ ಗಾಬರಿಗೊಂಡರು; ಅವರಲ್ಲಿ ಒಬ್ಬ ಚತುರನು ಏಕೆ ಗಾಬರಿಗೊಳ್ಳುವಿರಿ ತಾನು ಸಾಯುತ್ತದೆಂದು ಈ ಲೋಕವೇ ಮುಳುಗುತ್ತದೆಂದು ಕೂಗುತ್ತದೆ" ಎಂದ ಹೇಳಿದನು. ಆಗ ನೆರೆದ ಜನರೆಲ್ಲರೂ ಖೊಳ್ಳೆಂದು ನಕ್ಕರು. ಒಬ್ಬ ಜೀವನು ಮುಕ್ತನಾಗಿ ಅವನ ಅಜ್ಞಾನವು ನಾಶವಾಗಿ ಈ ಜಗತ್ತೇ ಲೋಪ ವಾಗುವದೆಂಬ ಮತವಾದರೂ ಇಷ್ಟೇ ಹಸ್ಯಾಸ್ಪದ ವಾಗಿರುತ್ತದೆ ಮಾಯಾವಾದಿಗಳಲ್ಲಿ ಒಬ್ಬನಾದರೂ ಮುಕ್ತನಿರುತ್ತಾನಷ್ಟೇ ? ಎಂದಮೇಲೆ ಈ ಜಗತ್ತು ಸ್ವಪ್ನವೆಂದು ಅನುಭವಗೊಂಡ ಈ ವೇದಾಂತಿಯು ಸ್ವಪ್ನದಲ್ಲಿ ಕಾಣಿಸುವ ಶಿಷ್ಯನಿಗೆ ಉಪದೇಶವನ್ನೇಕೆ ಮಾಡುತ್ತಾನೆ.

ಮೇಲಾಗಿ ಈ ಜಗತ್ತು ನಮಗೆ ಭ್ರಮವಾದರೆ ನಿಜವಾದ ಒಂದು ಜಗತ್ತು ಬೇಕಲ್ಲವೇ ! ಈಗ ಕತ್ತಲೆಯಲ್ಲಿ ಸುಳ್ಳಿ ಸುಳ್ಳಿಯಾಗಿ ಹಗ್ಗವು ಬಿದ್ದಿರಲು ಹಾವು ಬಿದ್ದಿರುವದೆಂದು ನಮಗೆ ಭ್ರಮಬರುತ್ತದೆ. ಈ ಭ್ರಮಬರಬೇಕಾದರೆ ನಮಗೆ ಬೇರೊಂದು ಕಡೆ ನಿಜವಾದ ಹಾವು ಕಂಡಿರ ಬೇಕಲ್ಲವೇ ? ಎಚ್ಚತ್ತಾಗ ಅನುಭವಿಸಿದ ಸಂಗತಿಳೇ ವಾಸನಾರೂಪದಿಂದ ಪರಿಣಮಿಸಿ ಸ್ವಾಪ್ನಪದಾರ್ಥಗಳ ಅಂದವಾದ ಚಿತ್ರವು ಕನಸಿನಲ್ಲಿ ಕಂಗೊಳಿಸುವದು. ಮೊದಲು ಅನುಭವವಿಲ್ಲದೇ ಅದರ ಭ್ರಮ ಬರುವದುಂಟೆ ? ಆದುದರಿಂದ ನಿಜವಾದ ಒಂದು ಜಗತ್ತು ಒಪ್ಪದಹೊರತು ಜಗತ್ತು ಭ್ರಮವೆಂದಾಗಲೀ ಕನಸೆಂದಾಗಲೀ ಹೇಳಿದರೆ ಯುಕ್ತಿ ವಿರುದ್ಧವಾಗುವದು.

ಹೀಗೆ ಎಲ್ಲರೀತಿಯಿಂದ ವಿಚಾರ ಮಾಡಲಾಗಿ ಐಕ್ಯವು ಶ್ರುತಿಸಮ್ಮತ ವಲ್ಲವೆಂದು ಸುಜ್ಞರಿಗೆ ಸಹಜವಾಗಿ ತಿಳಿಯುವದು. ಸರ್ವತಂತ್ರ ಸ್ವತಂತ್ರ ನಾದ ವಿಷ್ಣುವೇ ಪರಮ ದೈವತವೆಂದೂ, ಬ್ರಹ್ಮರುದ್ರಾದಿಗಳ ಶರೀರ ನಾಶ ವಾಗುವದರಿಂದ ಅವರೆಲ್ಲರೂ ಕ್ಷರರೆಂತಲೂ, ಲಕ್ಷ್ಮೀದೇವಿಯು ಅಕ್ಷರವೆಂತ ಲೂ, ವಿಷ್ಣುವು ಇರೆಲ್ಲರಿಗೂ ಉತ್ತಮನೆಂದೂ ಶ್ರುತಿ-ಸ್ಮೃತಿಗಳು ಸಾರು ತ್ತಿರಲು, ಎಲ್ಲವೂ ಒಂದೇ ಎಂಬ ಹುಚ್ಚು ವಾದವನ್ನು ಹಚ್ಚಿಕೊಂಡು ಸಾಯುವದು ಯಾರು ಹೇಳಿದ ಮಾತು ? " ಪ್ರಲಯ ಕಾಲದಲ್ಲಿ ನಾರಾ ಯಣನೊಬ್ಬನೇ ಇದ್ದನು, ರುದ್ರನೂ ಇದ್ದಿಲ್ಲ ಬ್ರಹ್ಮನೂ ಇದ್ದಿಲ್ಲ " ಎಂಬ ವಾಕ್ಯವಾದರೂ ಆ ಮಹಾತ್ಮನ ಮಹಿಮೆಯನ್ನೇ ವ್ಯಕ್ತ ಗೊಳಿಸುತ್ತದೆ. ಪರಮಾತ್ಮನಿಗೆ ಜನ್ಮವೆಂದರೆ ಆವಿರ್ಭಾವವೆಂದೂ, ಅವನ ಶರೀರವು ಅನಾದಿ ಯೂ ನಿತ್ಯವಾದದ್ದೆಂದೂ, ಇತರ ದೇವತೆಗಳ ಶರೀರವು ವಿನಾಶಿಯೂ, ಅವರ ಉತ್ಪತ್ತಿಯು ನಿಜವಾದದ್ದು ಆದುದರಿಂದಲೇ ನಿತ್ಯವಾದ ಪರಮಾತ್ಮ ನಿಂದ ಜೀವರು ನಿಯಮ್ಯರೆಂದೂ ಪರಮ ಶ್ರುತಿಯಲ್ಲಿ ನಿವೇದಿತವಾಗಿದೆ.

ಸಾಕ್ಷಾಂಶ ಸಚ್ಚಿದಾನಂದ ಮೂರ್ತಿಯಾದ ನಾರಾಯಣನೇ ಜಗತ್ತಿನ ನಿಯಾಮಕನು. ಎಲ್ಲ ಚರಾಚರ ವಸ್ತುಗಳು ಅವನಿಗೆ ಅಧೀನರು ಅವನ ಪ್ರಸಾದದಿಂದಲೇ ಮುಕ್ತಿಯನ್ನು ಪಡೆಯಬೇಕು ಆದರೆ ಜೀವನಿಗೆ ಈ ಸಂಸಾರದ ದುರ್ದಶೆಯನ್ನು ತಾಳಲಾರದೇ ತಾನೂ ಬ್ರಹ್ಮನಿರಬೇಕೆಂಬ ಭ್ರಮೆಯು ಬಂದು ಈ ಎಲ್ಲ ಸಂಸಾರವೂ ಸುಳ್ಳೆಂದು ಒಟಗುಟ್ಟುತ್ತಾ ಬ್ರಹ್ಮಸಿಂಹಾಸನವನ್ನೇರ ಹೋಗಲು ಕೆಳಗೆ ಪಾತಾಳಕ್ಕೆ ದಬ್ಬಲ್ಪಡುವನು ಒಮ್ಮೆ ಅತಿಕುರೂಪಿಯಾದ ಒಂದು ಮುದುಕಿಯು ತಾನು ಬಹು ಸುಂದರ ಳೆಂದು ತಿಳಿದು ಕನ್ನಡಿಯಲ್ಲಿ ಮುಖವನ್ನು ನೋಡಿಕೊಂಡಳು; ಕೂಡಲೇ ವಸ್ತು ಸ್ವರೂಪವು ಅವಳಿಗೆ ತಿಳಿದು ಕನ್ನಡಿಯಮೇಲೆ ಕೋಪಗೊಂಡು ಅದನ್ನು ಒಡೆದು ಹಾಕಿದಳು; ಅದರಿಂದ ಆ ನೂರಾರು ಕನ್ನಡಿ ಚೂರುಗ ಳಲ್ಲಿ ಅವಳ ನೂರಾರು ಕುರೂಪಿ ಮುಖಗಳು ತೋರಹತ್ತಿದವು. ಹಾಗೆಯೇ ನಮ್ಮ ಅದ್ವೈತ ವೇದಾಂತಿಯು ತಾನು ಬ್ರಹ್ಮನೆಂಬ ಅಹಂಭಾವನೆಯಲ್ಲಿ

ವಸ್ತುಸ್ಥಿತಿಯನ್ನು ತೋರಿಸುವ ಸಂಸಾರವೆಂಬ ಕನ್ನಡಿಯನ್ನು ನೆಲಕ್ಕೆ ಅಪ್ಪಳಿಸಲು ಸಾವಿರಾರು ನಿಜವಾದ ವಸ್ತುಗಳನ್ನು ಒಪ್ಪುವಗತಿಯು ಪ್ರಾಪ್ತವಾಗಿ ಕನ್ನಡಿಯನ್ನು ಒಡೆದ ಮುದುಕಿಯಂತೆ ಯಾಕಾದರೂ ನಾನು ಸಂಸಾರವು ಸುಳ್ಳೆಂದು ಹೇಳಿದ್ದೇನಪ್ಪಾ! ಎಂದು ಪಶ್ಚಾತ್ತಾಪ ಬಡಬೇಕಾಗುವದು. ಆದುದರಿಂದಲೇ ಮಾಯಾವಾದಿಗಳಲ್ಲಿ ಕೆಲವೊಂದು ಪಂಗಡದವರು ಈ ಸಂಸಾರವು ನಿಜವೆಂದೂ ಒಪ್ಪಿಕೊಂಡಿದ್ದಾರೆ. ಈ ಮತವನ್ನು ಹೆಚ್ಚು ಹೆಚ್ಚು ಪರೀಕ್ಷಿಸಿದರೆ ಉಸುಬಿನಲ್ಲಿ ವರತೆಯನ್ನು ಕೆದರಿದಂತೆ ಕಪ್ಪರಿಸುತ್ತಾ ಹೋಗುವದು. ವಿಚಾರಿಗಳು ವಿಚಾರ ಮಾಡಬೇಕು.



# ೯ ನೇ ಪ್ರಕರಣ.

## ತತ್ವ ವೃಕ್ಷ.

[ ತತ್ವವಿವೇಕ ಮತ್ತು ತತ್ವಸಂಖ್ಯಾನದ ಆಧಾರದಿಂದ ಬರೆದದ್ದು. ]

ತಿಳುವಳಿಕೆಯ ಬಳಿಕೆಯೇ ಬಳಿಕೆಯು. ತಿಳುವಳಿಕೆಯು ಈ ಜಗತ್ತನ್ನೆಲ್ಲ ಓತಪ್ರೋತವಾಗಿ ತುಂಬಿಬಿಟ್ಟಿದೆ. ತಿಳುವಳಿಕೆಗೆ ಹೊಳೆದದ್ದೇ ತತ್ವವು ಈ ಮೊಟ್ಟ ಮೂರರ ಕಗ್ಗಂಟು. ತಿಳಿಯು ಬಾಳ್ವೆಯಲ್ಲಿ ಬೆರೆತು ಆನಂದದ ಸಂಮೋಹದಿಂದ ಅಂದವಾಗಿ ತೋರುವದು. ಆದರೂ ಅಚ್ಚ ತಿಳಿಯು ನಮ್ಮಲ್ಲಿ ಹೆಚ್ಚಾಗಿಲ್ಲ. ಈ ತಿಳುವಳಿಕೆಗಾದರೂ ಮುಚ್ಚು ಮರೆಯಾದುದನ್ನು ಗೊತ್ತು ಹಚ್ಚುವದು ಬಹು ಕಠಿಣ. ಬಾಳ್ವೆಯ ಸೊಬಗನ್ನು ಸಾವು ತಾಳ್ಮೆಯಿಲ್ಲದಲೇ ಹಾಳು ಮಾಡುವದನ್ನು ಕಣ್ಣಾರೆ ನೋಡುವೆವು. ಆನಂದದ ಹರಿವಾಣದಲ್ಲಿ ದುಃಖದ ಉಪ್ಪು ಬೆರೆತು ಬಾಯಿ ಚಪ್ಪರಿಸಿದರೂ ತಪ್ಪಿ ಉಪ್ಪಿನ ಹರಳು ಕಚ್ಚದಿರವು. ಇದೆಲ್ಲಕ್ಕೂ ನಮ್ಮ ಅಳುತನವೇ ಮೂಲ ಹಾಗಾದರೆ ಅರಸುತನವಾರದು

ಸುತ್ತಲೂ ಬಿದ್ದ ಬೋರ್ಗಲ್ಲುಗಳು ತುಚ್ಛವಾದುವೆಂದು ತನ್ನ ಉಚ್ಚ ಶಿಖರವನ್ನು ಆಕಾಶದಲ್ಲಿ ನೆಲಿಸಿ ವೃಕ್ಷವೊಂದು ಸ್ವಚ್ಛಂದದಿಂದ ಮೆರೆಯುತ್ತಿರಲು, ಕಟ್ಟಿಗೆ ಕಡಿಯುವವನೊಬ್ಬನು ಹೆಗಲ ಮೇಲೆ ಕೊಡಲಿಯನ್ನಿಟ್ಟುಕೊಂಡು ಅತ್ತ ಕಡೆಗೆ ಬಂದನು. ಗಿಡವು ನಡುಗಹತ್ತಿತು ತನ್ನ ಉಚ್ಚತೆಯು ನೆಚ್ಚಿನದಲ್ಲವೆಂದು ಗಡಬಡಿಸಿ ಮಿಡುಕಹತ್ತಿತು. ಆ ಮನುಷ್ಯನು ಕೊಡಲಿಯನ್ನೆತ್ತಿ ಗಿಡಕ್ಕೆ ಕಚ್ಚು ಹಾಕುವಷ್ಟರಲ್ಲಿಯೇ ಸರ್ಪವೊಂದು ಅವನನ್ನು ಕಚ್ಚಲೋಸುಗ ಹೊಂಚು ಹಾಕಿದ್ದನ್ನು ನೋಡಿದನು. ಕೈಗಳು ಗದಗದ ನಡುಗಿ ಕೊಡಲಿಯು ಒಡನೆಯೇ ಕೆಳಕ್ಕೆ ಬಿದ್ದಿತು !! ಭಯ ಭಯ ಎಲ್ಲ ಕಡೆಯಿಂದಲೂ ಭಯವು ನಮ್ಮನ್ನು ಮುಸುಕಿದೆ

ಭಯದಿಂದ ತಲೆಯು ನಡುಗುತ್ತಿರಲು ಅರಸುತನದ ಕಿರೀಟವು ಯಾರಲ್ಲಿ ಸ್ಥಿರವಾದೀತು ? ಹೆದರಿಕೆಯಿಂದ ಚದರುವವಗೆ ಆಳುತನವು ಹೇಗೆ ಬಿಟ್ಟೀತು ? ಎಲ್ಲಿ ಅಚ್ಚ ತಿಳಿಯೂ ಕಚ್ಚಿಲ್ಲದ ಬಾಳ್ವೆಯೂ ಸ್ವಚ್ಛವಾದ ಆನಂದವೂ ಇರುವದೋ ಅದೇ ನಿತ್ಯವಾದ ಅರಸೊತ್ತಿಗೆಗೆ ಒಪ್ಪುವದು. ಅದೇ ಪೂರ್ಣವಾದ ವಸ್ತು; ಸ್ವಾತಂತ್ರ್ಯದ ಮೂಲವೂ ದೋಷಗಳಿಗೆ ಕಾಲವೂ ಆನಂದದ ಜಾಲವೂ ಅದೇ. ಅದೇ ವಸ್ತುವೇ ಸಂಪೂರ್ಣ ತಿಳಿಯಿಂದ ಎಲ್ಲವನ್ನೂ ತಿಳಿದು ಸ್ವತಂತ್ರೇಚ್ಛೆಯಿಂದ ಎಲ್ಲವನ್ನೂ ನಿರ್ಮಾಣ ಮಾಡಿ ಆಳುವದು. ಆ ವಸ್ತು ಒಂದನ್ನುಳಿದು ಎಲ್ಲವೂ ಅಸ್ವತಂತ್ರವು.

ಹೀಗೆ ತಿಳಿಗೆ ಹೊಳೆದ ತತ್ವದಲ್ಲಿ ಅರಸು ಒಂದು ಆಳು ಒಂದು ಎಂದು ಎರಡು ವಿಭಾಗ ಮಾಡಿದ್ದಾಯಿತು. ಅರಸೇ ಆ ಸರ್ವತಂತ್ರಸ್ವತಂತ್ರನಾದ ಪರಮಾತ್ಮನು; ಆತನೊಬ್ಬನನ್ನುಳಿದು ಸರ್ವವೂ ಅವನ ಆಳು. ಆಳುಮಕ್ಕಳು ಇವರಿಬ್ಬರು ಒಬ್ಬನು ಅಹುದಪ್ಪನು ಇನ್ನೊಬ್ಬನು ಅಲ್ಲಪ್ಪನು. ಮನೆಮಾರುಗಳು ಇರುವವು; ದನಕರಗಳು ಅಹುದು; ಗಿಡಗಂಟಿಗಳು ಉಂಟು; ಈ ರೀತಿಯಾಗಿ 'ಇರುವವು' 'ಅಹುದು' 'ಉಂಟು' ಮುಂತಾದ ಉಪನಾಮಗಳುಳ್ಳ ಪದಾರ್ಥಗಳೇ ಅಹುದಪ್ಪನ ಪರಿವಾರವು. ( ಭಾವ ಪದಾರ್ಥಗಳು ) ಮೂರ್ತಿಯು ತಯಾರಾಗಿಲ್ಲ; ಗ್ಲಾಸು ಒಡೆದು

ಹೋಯಿತು; ಮೊಲದ ಕೊಂಬು ಎಂದೂ ಇಲ್ಲ; ಹೀಗೆ ' ತಯಾರಾಗಿಲ್ಲ ' ಒಡೆದು ಹೋಯಿತು ' ಎಂದೂ ಇಲ್ಲಾ ? ಮುಂತಾದ ಅರ್ಥಹೆಸರುಗಳಿಂದ ಯುಕ್ತವಾದ ವಸ್ತುಗಳೆಲ್ಲವೂ ಅಲ್ಲಪ್ಪನ ಪರಿವಾರವು. ( ಅಭಾವ ಪದಾರ್ಥಗಳು. )

ಆಹುದಪ್ಪನ ಪರಿವಾರವಾದ ಭಾವ ಪದಾರ್ಥಗಳಿಗೆ ಇರುವಿಕೆಯು ( ಸತ್ತಾ ) ನಿಜವಾಗಿರುವದು. ಅಲ್ಲಪ್ಪನ ಅನುಯಾಯಿಗಳಾದ ಅಭಾವ ಪದಾರ್ಥಗಳಿಗೆ ಇರುವಿಕೆಯು ನಿಜವಾಗಿ ಇಲ್ಲವೇ ಇಲ್ಲ. ಪರೀಕರು ಸರಿಗೆಯನ್ನಿಟ್ಟುಕೊಂಡರೆ ನೆರೆಮನೆಯವರು ಉರಲು ಹಾಕಿಕೊಂಡರೆಂಬಂತೆ ಅಲ್ಲಪ್ಪನ ಪರಿವಾರವೂ ಒಂದೊಂದು ಸಾರೆ ತಮ್ಮ ನಿಜವಾದ ಉಪನಾಮವನ್ನು ಬಿಟ್ಟು ' ಉಂಟು ' ' ಇರುವವು " ಮುಂತಾದ ಇರುವಿಕೆಯನ್ನು ತೋರುವ ಉಪನಾಮಗಳೊಡನೆ ಜಗತ್ತಿನಲ್ಲಿ ಪ್ರಕಟವಾಗುವವು. ಹೇಗಂದರೆ " ಇಲ್ಲಿ ಮೊಲದ ಕೊಂಬಿನ ಅಭಾವವು ( ಇಲ್ಲದಿರುವದು ) ಉಂಟು ಅಥವಾ " ನಮ್ಮಲ್ಲಿ ದುಡ್ಡಿನ ಅಭಾವವಿದೆ " ಆದರೆ ಕಪ್ಪು ಮೋರೆಯವನಿಗೆ ಬಂಣ ಬಡಿದು ಸುಂದರನನ್ನು ಮಾಡಹೋದರೆ ಅವನು ಅಂದಗೇಡಿಯಾಗಿ ತೋರುವಂತೆ, ಅಲ್ಲಪ್ಪನ ಪರಿವಾರವು ತಮ್ಮಲ್ಲಿಲ್ಲದ ಇರುವಿಕೆಯ ಬಿರುದುಗಳನ್ನು ಹೊತ್ತು ಮೆರೆದರೆ ಕೋತಿಗಳಂತೆ ಜಗದಲ್ಲಿ ನಗೆಗೇಡಿಗಳಾಗುವವು. ಆದರೂ ಇರುವಿಕೆ ಇರಲಿ, ಇರದಿರಲಿ, ಅಭಾವ ಪದಾರ್ಥಗಳು ಪದಾರ್ಥಗಳಹುದು; ಮತ್ತು ತಿಳುವಳಿಕೆಗೆ ಗೋಚರವಾಗುವವೆಂದು ' ಉಂಟು ' ಮುಂತಾದ ಇರುವಿಕೆಯು ಹೆಸರುಗಳಿಂದ ಮೋರೆಯನ್ನು ತೋರಿದರೂ ಹುಚ್ಚರ ಹಾದಿಯನ್ನು ಹಿಡಿಯ ಬಾರದೆಂದು ನಾವಷ್ಟು ಅದರ ಕಡೆಗೆ ಲಕ್ಷ ಕೊಡುವದಿಲ್ಲ.

ಅಲ್ಲಪ್ಪನ ಪರಿವಾರದ ಅಭಾವ ಪದಾರ್ಥವು ಬಹು ವಿಚಿತ್ರವದೆ ಇದರಲ್ಲಿ ಮೂರು ತರಹದ ಜನರುಂಟು. ಇದರಲ್ಲಿ ಕೆಲವರು ಹುಟ್ಟಿದಲೇ ಸಾಯುವರು; ಕೆಲವರು ಸಾಯದಲೇ ಹುಟ್ಟುವರು. ಕೆಲವರಿಗೆ ಹುಟ್ಟೂ ಇಲ್ಲ. ಸಾವೂ ಇಲ್ಲ. ಈಗ ನಮ್ಮ ಕಣ್ಣೆದುರಿಗೆ ಒಂದು ಕೊಡವಿದೆ

ಎಂದು ಕಲ್ಪಿಸುವಾ ! ಕುಂಬಾರನು ಆ ಮಣ್ಣಿನ ಕೊಡವನ್ನು ತನ್ನ ತಿಗರಿಯ ಮೇಲೆ ತಯಾರ ಮಾಡುವ ಮೊದಲು ಆ ಕೊಡವು ಈ ಜಗತ್ತಿನಲ್ಲಿ ಇತ್ತೇನು ? ಇಲ್ಲವೇ ಇಲ್ಲ !! ಅದುದರಿಂದ ಆ ಮಣ್ಣಿನ ಕೊಡವು ಹುಟ್ಟಿದ ಮೊದಲು ಆ ಕೊಡದ ಅಭಾವವು ಈ ಜಗತ್ತಿನಲ್ಲಿ ಇತ್ತೆಂದು ಹೇಳಿದರೆ ಅದು ತಪ್ಪಾಗದು. ಇನ್ನೊಂದು ಮಾತು. ಈ ಕೊಡವು ಹುಟ್ಟಿದ ಮೊದಲು ಇಲ್ಲಿ ಈ ಕೊಡವು ಎಂದಿನಿಂದ ಇಲ್ಲವೆಂದು ಯಾರಾದರೂ ಹೇಳಬಲ್ಲರೋ ! ಈ ಹೊತ್ತು ಆ ಕೊಡವು ತಯಾರಾಗಿದೆ. ಅನಾದಿ ಕಾಲದಿಂದ ಇಂದಿನವರೆಗೆ ಆ ಕೊಡವು ಇದ್ದಿಲ್ಲವೆಂದು ಮಾತ್ರ ಹೇಳಬಹುದು. ಅದುಗೋಸುಗ ಆ ಕೊಡದ ಅಭಾವವು ಅನಾದಿಕಾಲದಿಂದ ಇಂದಿನವರೆಗೆ ಇತ್ತು. ಈ ಹೊತ್ತು ಅದು ಉತ್ಪನ್ನವಾದಕೂಡಲೇ ಆ ಕೊಡದ ಅಭಾವವು ನಷ್ಟವಾಯಿತೆನ್ನುವರು. ಅದುದರಿಂದಲೇ ಈ ಅಭಾವಕ್ಕೆ ಹುಟ್ಟು ಇಲ್ಲ. ಸಾವು ಮಾತ್ರ ಉಂಟು. ಯಾಕಂದರೆ ಆ ಕೊಡವು ಹುಟ್ಟಿದ ಕೂಡಲೇ ಅದರ ಪೂರ್ವದಲ್ಲಿರುವ ಅಭಾವವು ನಾಶಹೊಂದುವದು. ಈ ಅಭಾವಕ್ಕೆ ಪ್ರಾಕ್ ( ಹುಟ್ಟುವ ಮೊದಲು ಇರುವ ) ಅಭಾವವೆನ್ನುವರು.

ನೋಡನೋಡುತ್ತಲೇ ನಮ್ಮ ಕಣ್ಣೆದುರಿಗಿರುವ ಆ ಮಣ್ಣಿನಕೊಡದ ಮೇಲೆ ದೊಣ್ಣೆಯೊಂದು ಬಿದ್ದು ಅದು ಒಡೆದು ಹೋಯಿತು. ಕೊಡವು ಇಲ್ಲದಾಯಿತು. ಅಂದರೆ ಈ ಕೊಡದ ನಾಶವು ಚಿರಜೀವಿಯೆಂದೆನ್ನುವರು. ಸಾಯದಲೇ ಹುಟ್ಟಿದ ಈ ನಾಶವೇ ಪ್ರಧ್ವಂಸಾ ( ನಾಶ ) ಭಾವವು.

ಬ್ರಹ್ಮನು ಚಿತ್ರವಿಚಿತ್ರ ಪದಾರ್ಥಗಳನ್ನು ಹುಟ್ಟಿಸಿದ್ದರೂ ಮೊಲದ ಕೊಂಬು, ಬಂಜೆಯ ಮಗ, ಆಕಾಶಪುಷ್ಪ ಇವುಗಳನ್ನು ನಿರ್ಮಿಸಲರಿಯನು. ಕಾಲನು ಕರುಣೆ ಇಲ್ಲದೇ ಎಲ್ಲವನ್ನು ನೆಲಸಮ ಮಾಡುತ್ತಿದ್ದರೂ ಇವುಗಳ ಗೋಜಿಗೆ ಬರುವದಿಲ್ಲ. ಹಿಂದೆ ಯಾವ ರಾಯನ ಕಾಲಕ್ಕೂ ಇವು ಇಲ್ಲ. ಈಗಂತೂ ನಾವು ನೋಡಿಲ್ಲ. ಮುಂದಾದರೂ ಇವುಗಳನ್ನು ಯಾರೂ ನೋಡಲಿಕ್ಕಿಲ್ಲ. ಅದುದರಿಂದಲೇ ಇವುಗಳಿಗೆ ' ಅಸತ್ " ಪದಾರ್ಥಗಳೆ

ನ್ನುವರು. ಈ ಅಸತ್ ಪದಾರ್ಥಗಳು ಇಲ್ಲವೆನ್ನುವದೇ ಅಥವಾ ಅವುಗಳ ಅಭಾವವೇ ಹುಟ್ಟೂ ಇಲ್ಲ ಸಾವೂ ಇಲ್ಲದ ಅಭಾವವು. ಅದಕ್ಕೇನೆ ಅತ್ಯಂತಾಭಾವ ಅಥವಾ ಸದಾಭಾವವೆನ್ನುವರು. ಇದು ಸುಧಾಕಾರರಾದ ಶ್ರೀಮಜ್ಜಯತೀರ್ಥರ ಮತವು. ಪ್ರಾಚೀನ ಟೀಕಾಕಾರರು ಮಾತ್ರ ಸನ್ಯಾಯರತ್ನಾವಲಿ ನಯಚಂದ್ರಿಕೆ ಮುಂತಾದ ಗ್ರಂಥಗಳಲ್ಲಿ 'ಆಕಾಶಪುಷ್ಪವೇ ಸದಾಭಾವವು ಮತ್ತು ಪ್ರಮೇಯತ್ವಾದಿ ಭಾವ ಧರ್ಮಗಳಿಂದ ಯುಕ್ತವಾದದ್ದೆಂದು ಪ್ರತಿಪಾದಿಸುತ್ತಾರೆ. ತಾತ್ಪರ್ಯದಲ್ಲಿ ಎರಡೂ ಒಂದಾಗಿರುವದರಿಂದ ಒಂದಕ್ಕೊಂದು ವಿರುದ್ಧವಾಗಲಾರವು. ಈ ಎರಡು ಪಕ್ಷಗಳು ಯಾವು? "ಅಸತ್ ಪದಾರ್ಥವು ಇಲ್ಲೆನ್ನುವದು ಅಭಾವವೋ? ಅಥವಾ ಅಸತ್ತೇ ಅಭಾವವೋ? ಇವೆರಡು ಮೇಲೆ ತೋರಲಿಕ್ಕೆ ವಿರುದ್ಧ ಕಂಡರೂ ಕೊನೆಯ ಅರ್ಥವು ಮಾತ್ರ ಒಂದಾಗಿದೆ. ಯಾಕಂದರೆ ಮೊದಲನೇ ಪಕ್ಷದಲ್ಲಿ 'ಅಸತ್ ಇಲ್ಲವು' ಅಂದರೇನು? ಅಸತ್ ಪದಾರ್ಥಕ್ಕೆ ಇರುವಿಕೆ ಇಲ್ಲವೆಂದಷ್ಟೇ ಅರ್ಥವಲ್ಲವೇ? ಇನ್ನು ಎರಡನೇ ಪಕ್ಷದಲ್ಲಿ 'ಅಸತ್" ಎಂದರೆ ಸತ್ತಾ ಇಲ್ಲದ್ದು; ಆದುದರಿಂದಲೇ ತಾತ್ಪರ್ಯದಲ್ಲಿ ಎರಡೂ ಪಕ್ಷಗಳು ಒಂದಾಗಿರುವವು.

ಇನ್ನು ಸ್ವಲ್ಪ ಸೂಕ್ಷ್ಮರೀತಿಯಿಂದ ವಿಚಾರ ಮಾಡಿರಿ; ಆದರೆ ಈ ಕೊನೆಯ ಮಾದರಿಯ ಅಭಾವವು ಅಳೀಕ. ಅರಸೇಕಾಗಬಾರದು ಎಂಬ ಸಂಶಯವು ತಟ್ಟುವದು ಯಾಕಂದರೆ ಈ ಅಭಾವಕ್ಕೆ ಹುಟ್ಟೂ ಇಲ್ಲ ಸಾವೂ ಇಲ್ಲ; ಅನಾದಿ ಅನಂತವಾಗಿರುವದು; ತಿಳಿಗೆ ಹೊಳೆಯುವದು; ಪದಾರ್ಥವೂ ಅಹುದು; ಎಂದ ಮೇಲೆ ಪರಮಾತ್ಮನೇ ಈ ಜಗತ್ತಿಗೆ ಅರಸೇಕೆ? ನಮ್ಮ ಅಭಾವವೇಕೆ ಅರಸೊತ್ತಿಗೆಗೆ ಪಾತ್ರವಲ್ಲ? ಜಗವನ್ನು ಹುಟ್ಟಿಸಿದವನು ಜಗದೊಡೆಯನು. ಬಯಕೆ ತಿಳುವಳಿಕೆಗಳು ಕೂಡಿ ಕೃತಿಎಂಬ ಕಂದವನ್ನು ಹೆತ್ತರೆ ಕಾರ್ಯವಾಗುವದು. ಪರಮಾತ್ಮನು ಸಚ್ಚಿದಾನಂದ ಸ್ವರೂಪನು. ಅವನಿಗೆ ಸರ್ವವೂ ತಿಳಿದದೆ; ಇಚ್ಛೆಯು ಉಂಟು; ಎಂದೇ ಜಗತ್ತನ್ನು ಸೃಷ್ಟಿಮಾಡಬಲ್ಲನು. ಅಭಾವಮಾತ್ರ ಜಡವಸ್ತುವು ಅದಕ್ಕೆ ಅರುವು ಮೊದಲೇ ಇಲ್ಲ. ಬಯಕೆಯಂತೂ ಬಹುದೂರವಾಯಿತು. ಬಯಕೆ ಇಲ್ಲದೆ

ಬಸರು ಇಲ್ಲ. ಬಸರಿಲ್ಲದೆ ಹೆರುವದಂಟೋ ? ಆದುದರಿಂದಲೇ ಜಡವಾದ ಈ ಅಭಾವವು ಆಳಾಗಿ ಉಳಿಯಬೇಕಾಯಿತು.

ಭಾವಪದಾರ್ಥಗಳೇ ಅಹುದಪ್ಪನ ಪರಿವಾರವು. ಅದು ಒಂದು ಚೇತನವೆಂತಲೂ ಇನ್ನೊಂದು ಅಚೇತನವೆಂತಲೂ ಎರಡು ವಿದವಾಗಿರುವದು. ಈ ಅಚೇತನ ಪದಾರ್ಥಗಳು ಮೂರುವಿಧ- ನಿತ್ಯ, ಅನಿತ್ಯ ನಿತ್ಯಾನಿತ್ಯ. ವೇದವೂ ಐವತ್ತು ಅಕ್ಷರಗಳೂ ಅವ್ಯಾಕೃತ ಆಕಾಶವೂ **ನಿತ್ಯಪದಾರ್ಥಗಳು.** ವೇದವೆಂದರೇನು ? ಇಲ್ಲಿ ಎರಡು ಮತಗಳಿರುವವು. ಮೂಲವರ್ಣಗಳಾದ ಐವತ್ತು ಅಕ್ಷರಗಳನ್ನು ಬುದ್ಧಿ ಪೂರ್ವಕ ಒಂದು ವಿಶಿಷ್ಟ ಕ್ರಮದಿಂದ ಉಪಯೋಗಿಸಲು, ಇಂತಹ ವಿಶಿಷ್ಟಕ್ರಮಯುಕ್ತ ಮೂಲಾಕ್ಷರವೇ ವೇದವೆಂದು ಒಬ್ಬರ ಮತವು. ವೇದವು ಈ ಐವತ್ತು ವರ್ಣಗಳಿಂದಲೇ ಯುಕ್ತವಾಗಿದ್ದರೂ ಅವುಗಳ ಕ್ರಮವು ಭಿನ್ನವಾಗಿರುವದರಿಂದ, ಅದು ಮೂಲಾಕ್ಷರಾತ್ಮಕವಲ್ಲ; ಆದರೆ ಭಿನ್ನವಾದ ಕ್ರಮವಿಶಿಷ್ಟ ಅನಂತ ವರ್ಣಾತ್ಮಕವೆಂದು ಮತ್ತೊಬ್ಬರ ಮತವು. ಈ ಎರಡು ಮತಗಳಲ್ಲಿ ಯಾವದು ಯುಕ್ತವಾದದ್ದೆಂದು ಮುಂದೆ ವಿಚಾರಿಸುವಾ. ವೇದವು ನಿತ್ಯವೆಂದರೆ ಈಗ ಅದು ಯಾವ ಕ್ರಮದಲ್ಲಿ ಉಪಲಬ್ಧವಿರುವದೋ ಅದೇ ಕ್ರಮದಲ್ಲಿ ಪೂರ್ವದಲ್ಲಿ ಇತ್ತು, ಮುಂದಾದರೂ ಇರುವದೆಂಬರ್ಥವು. ವೇದಗಳ ವರ್ಣಗಳು ಐವತ್ತೇ ಎಂದು ಮಿತವಾದರೂ ವೇದಗಳು ಮಾತ್ರ ಅನಂತವಾದವುಗಳೆಂಬುದು ಆಶ್ಚರ್ಯವಲ್ಲವೇ ? ಈಶ್ವರನ ಅಚಿಂತ್ಯ ಶಕ್ತಿಯೇ ಅದಕ್ಕೆ ಯುಕ್ತಿಯು !!

ಪುರಾಣಾದಿ ಪೌರುಷೇಯ ಗ್ರಂಥಗಳೂ ಕಾಲವೂ ಮತ್ತು ಪ್ರಕೃತಿಯೂ ನಿತ್ಯಾನಿತ್ಯ ವಸ್ತುಗಳು. ಇವು ವೇದದಂತೆ, ನಿತ್ಯವೂ ಅಲ್ಲ, ಮತ್ತು ಮುಂದೆ ವಿವರಿಸಲ್ಪಡುವ ವಸ್ತುಗಳಂತೆ, ಕೇವಲ ಅನಿತ್ಯವು ಅಲ್ಲ ಆದುದರಿಂದಲೇ ಇವು ನಿತ್ಯಾನಿತ್ಯ ವಸ್ತುಗಳೆನಿಸುವವು. ನಿತ್ಯ ವಸ್ತುವಿಗೆ ಜನನ ಮರಣದ ಭಯವಿಲ್ಲ. ಅನಿತ್ಯವಸ್ತುವಿಗೆ ಹುಟ್ಟು ಸಾವೂ, ಕಟ್ಟುಟ್ಟ ಮಾತ್ತು

ನಿತ್ಯಾನಿತ್ಯ ವಸ್ತುವಿಗೆ ಮಾತ್ರ ಉತ್ಪತ್ತಿ ಇದ್ದರೆ ನಾಶವಿಲ್ಲ ಅಥವಾ ವಸ್ತುವಿನ ಒಂದು ಭಾಗವು ಉತ್ಪನ್ನವಾಗಿ, ನಾಶಹೊಂದುತ್ತಿದ್ದರೂ ಮತ್ತೊಂದು ಭಾಗವು ಹಾಗೆಯೇ ಉಳಿಯುವದು, ಇಲ್ಲವೇ ಸ್ವರೂಪತಃ ಉತ್ಪತ್ತಿ ನಾಶಗಳಿಗೆ ತುತ್ತಾಗದಿದ್ದರೂ ಆ ವಸ್ತುವಿನಲ್ಲಿ ಬೇರೆ ಬೇರೆ ಅವಸ್ಥೆಗಳು ಮೂಡುವದುಂಟು ಮುಳುಗುವದುಂಟು. ನಿತ್ಯಾನಿತ್ಯ ವಸ್ತುಗಳ ಈ ಮೂರು ಪ್ರಕಾರಗಳಲ್ಲಿ ಪುರಾಣಾದಿ ಪೌರುಷೇಯ ಗ್ರಂಥಗಳು ಮೊದಲನೇ ಪ್ರಕಾರದವು. ಯಾಕಂದರೆ ಪುರಾಣಗಳಲ್ಲಿಯ ಶಬ್ದಗಳ ಕ್ರಮವು ಪುರುಷಬುದ್ಧಿಯಿಂದ ರಚಿತವಾದುದು; ಆದುದರಿಂದ ಅವುಗಳಿಗೆ ಉತ್ಪತ್ತಿಯುಂಟು. ಆದರೂ ಈಶ್ವರನು ಈ ಕ್ರಮವನ್ನು ಒಮ್ಮೆಲೇ ಗ್ರಹಿಸುವದರಿಂದ ಅದಕ್ಕೆ ನಾಶವಿಲ್ಲ.

ಇನ್ನು ಕಾಲವು ಎರಡನೇ ತರಹದ್ದು; ಯಾಕಂದರೆ 'ಒಂದು ಘಂಟೆಯಾಯಿತು. ಹತ್ತು ನಿಮಿಷಗಳು ಕಳೆದವು' ಎಂದು ಘಂಟೆ ನಿಮಿಷಗಳು ಹುಟ್ಟುವವು; ಸಾಯುವವು. ಆದರೆ ಈ ಘಂಟೆ ನಿಮಿಷಗಳಿಂದ ಕೂಡಿದ ಮಹಾಕಾಲವು ನಿತ್ಯವಾಗಿ ಹರಿಯುತ್ತಿರುವದು. ಹೇಗಂದರೆ ಹೊಳೆಯ ದಂಡೆಯಮೇಲೆ ಗಿಡದಕೆಳಗೆ ಕುಳಿತು ಸ್ವಲ್ಪಹೊತ್ತು ಆ ಹರಿಯುವ ಪ್ರವಾಹವನ್ನು ನಿರೀಕ್ಷಿಸೋಣ. ಎಂದರೆ ಹೊಸ ಹೊಸ ನೀರು ಬಹುದೂರದಿಂದ ಬಂದು ನಮ್ಮೆದುರಿಗೆ ನೊಗವೆತ್ತಿ ಮೆರೆಯುತ್ತ ಹರಿಯುತ್ತ ಮುಂದೆ ಹೋಗುವದನ್ನು ಮನವಣೆ ನೋಡುವೆವು. ನೀರು ಹೊಸ ಹೊಸದಾಗಿ ಬಂದು ಹೋದರೂ ಪ್ರವಾಹವು ಮಾತ್ರ ಒಂದೇಸವನೇ ಹರಿಯುವದು. ಅದಕ್ಕೆ ಆದಿಯೂ ಇಲ್ಲ. ಅಂತ್ಯವೂ ಇಲ್ಲ, ಆದರಂತೆಯೇ ಕಾಲದ ಅಂಶಗಳಾದ ಘಂಟೆ ನಿಮಿಷಗಳು ಬರುವವು. ಹರಿದುಹೋಗುವವು. ಆದರೆ ಈ ಕಾಲದ ಪ್ರವಾಹವು ಮಾತ್ರ ಏಕಪ್ರಕಾರವಾಗಿ ನಡೆಯುವದು. ಆದುದರಿಂದ ಈ ಕಾಲದ ಪ್ರವಾಹಕ್ಕೆ ಉತ್ಪತ್ತಿಯೂ ಇಲ್ಲಾ. ಸಾವೂ ಇಲ್ಲಾ. ಇನ್ನು ಜಡಪ್ರಕೃತಿಯು ಮೂರನೇ ವಿಧವು. ಜಡಪದಾರ್ಥಗಳು ಈ ಪ್ರಕೃತಿಯ ಕಾರ್ಯಗಳು. ಆದರೂ ಸ್ವರೂಪತ: ಈ ಪ್ರಕೃತಿಗೆ ಉತ್ಪತ್ತಿ ವಿನಾಶಗಳ

ವಿಕಾರವು ತಟ್ಟದಿದ್ದರೂ ಮಹತ್ತತ್ವಾದಿ ಅವಸ್ಥಾ ವಿಶೇಷದಿಂದ ಅದಕ್ಕೆ ಹುಟ್ಟು ಸಾವುಗಳು ಮುಟ್ಟುವವು.

ಇವರಲ್ಲಿ ಇನ್ನೊಂದು ವಿಚಾರವದೆ. ಪುರಾಣಾದಿ ನಿತ್ಯಾನಿತ್ಯ ವಸ್ತುಗಳ ಅಂಗಗಳಿಗೆ ಉತ್ಪತ್ತಿ ವಿನಾಶಗಳು ಇದ್ದರೆ ಅವು ಅನಿತ್ಯವಾಗಲಿ ಮತ್ತು ಅವು ಇರದೇ ಹೋದರೆ ಅವು ನಿತ್ಯವಾಗಲಿ. ನಿತ್ಯಾನಿತ್ಯವೆಂಬ ವಿಶ್ವಾವಿಶ್ರನ ಕಲಬೆರಿಕೆಯ ಸೃಷ್ಟಿ ಏಕೆ? ಇದಕ್ಕೆ ಉತ್ತರವೆಂದರೆ ಉತ್ಪತ್ತಿ ವಿನಾಶಗಳುಳ್ಳ ಅಂಗಗಳೂ ಅವುಗಳಿಂದ ರಹಿತವಾದ ಅಂಶಗಳೂ ತೀರ ಭಿನ್ನವಾಗಿದ್ದರೆ ಒಂದು ಅನಿತ್ಯವೂ ಇನ್ನೊಂದು ನಿತ್ಯವೂ ಎಂದು ಹೇಳಬಹುದಾಗಿತ್ತು. ಆದರೆ, ಅವೆರಡೂ ತೀರ ಭಿನ್ನವಾದವಲ್ಲ. ಆದುದರಿಂದ, ಒಂದೇ ವಸ್ತುವೇ ನಿತ್ಯವೂ ಅನಿತ್ಯವೂ ಆಹುದೆಂದು ನಿತ್ಯಾನಿತ್ಯ ವಸ್ತುವನ್ನು ಒಪ್ಪಬೇಕಾಯಿತು.

ಇನ್ನು ಅಚೇತನ ಪದಾರ್ಥಗಳಲ್ಲಿ ಅನಿತ್ಯವಸ್ತುಗಳನ್ನು ವಿಚಾರ ಮಾಡೋಣ. ಇವು ಎರಡು ವಿಧವಾಗಿರುವವು. ಒಂದಕ್ಕೆ ಅಸಂಸೃಷ್ಟ ವಸ್ತುಗಳೆಂತಲೂ ಇನ್ನೊಂದಕ್ಕೆ ಸಂಸೃಷ್ಟ ವಸ್ತುಗಳೆಂತಲೂ ಹೆಸರು. ಅಸಂಸೃಷ್ಟವಸ್ತುಗಳಿಗೆ ನಿಜವಾದ ಉತ್ಪತ್ತಿ ನಾಶಗಳೇ ಇಲ್ಲಾ. ಅವು ಸೃಷ್ಟಿಕಾಲದಲ್ಲಿ ಸೂಕ್ಷ್ಮರೂಪದಿಂದಿರಲು ಪ್ರಕೃತಿಯ ಕೆಲವು ಅಂಶಗಳು ಅವುಗಳಿಗೆ ಅಂಟಿಕೊಳ್ಳುವವು. ಇದೇ ಅವುಗಳ ಉತ್ಪತ್ತಿಯು; ಮತ್ತೆ ಆ ಪ್ರಾಕೃತ ಅಂಶಗಳು ಉದುರಿಹೋಗಲು ಅವು ತಮ್ಮ ಪೂರ್ವದ ಸೂಕ್ಷ್ಮರೂಪದಿಂದ ಉಳಿಯುವವು. ಇದೇ ಅವುಗಳಿಗೆ ವಿನಾಶವು ಈ ಅಸಂಸೃಷ್ಟ ಪದಾರ್ಥಗಳು ಇಪ್ಪತ್ತುನಾಲ್ಕು ಉಂಟು. ಅವು ಯಾವವೆಂದರೆ; ಮಹತ್ತತ್ವ, ಅಹಂಕಾರ, ಬುದ್ಧಿ, ಮನಸ್ಸು, ಹತ್ತು ಇಂದ್ರಿಯಗಳು, ಪಂಚತನ್ಮಾತ್ರಗಳು ಪಂಚಭೂತಗಳು. ಸಂಸೃಷ್ಟಪದಾರ್ಥಗಳಿಗೆ ನಿಜವಾದ ಹುಟ್ಟು ಸಾವು ಉಂಟು. ಈ ಭಸ್ಮವಾದ ಬ್ರಹ್ಮಾಂಡ ಕಟಾಹವೂ ಅದರೊಳಗಿರುವ ಎಲ್ಲ ವಸ್ತುಗಳೂ ಸಂಸೃಷ್ಟ ಪದಾರ್ಥಗಳು.

ಭಾವಪದಾರ್ಥಗಳಲ್ಲಿ ಅಚೇತನ ವಸ್ತುಗಳನ್ನು ನಿರೂಪಿಸಿದ್ದಾಯಿತು. ಇನ್ನು ಚೇತನ ಪದಾರ್ಥಗಳೆಂದರೇನು ? ಜ್ಞಾನವುಳ್ಳ ವಸ್ತುಗಳೆ ಚೇತನ ಪದಾರ್ಥಗಳೆನಿಸುವವು. ಈ ಆಳುತನದಲ್ಲಿಯೇ ಹೊರಳಾಡುವ ಚೇತನರಾಶಿಗಳಿಗೆಲ್ಲ ರಮಾದೇವಿಯೇ ಶ್ರೇಷ್ಠಳು. ಅವಳು ದುಃಖದ ಕಹಿಹಂಣನ್ನು ಎಂದೂ ಕಚ್ಚಿಲ್ಲ. ಮಿಕ್ಕುಳಿದ ಎಲ್ಲ ಚೇತನಗಳೂ ಒಂದಿಲ್ಲೊಂದು ದಿನ ಆಶೆಯ ಪಾಶಕ್ಕೆ ಈಡಾಗಿ ವಿಷಯ ವೃಕ್ಷದ ಕಡೆಗೆ ಎಳೆಯಲ್ಪಟ್ಟು ಅತಿ ಆತುರದಿಂದ ಕೈಚಾಚಿ ಫಲವನ್ನು ಸೆಳೆದು ಕೊಂಡು ಕಚ್ಚಿರುವವು. ಅದು ಕಹಿ ಹತ್ತಿದೊಡನೆಯೇ ನಾಲಿಗೆಯನ್ನು ಮುಂದೆ ಹಿರಿದು ತುಟಿಗಳನ್ನು ಹಿಂದೆ ಬಿಗಿದು ಗಲ್ಲಗಳನ್ನು ಮೇಲೇರಿಸಿ ಗದ್ದವನ್ನು ಮೂರು ಮಳ ಕೆಳಕ್ಕೆಳಿಸುವವು. ಬೆಲ್ಲವನ್ನು ಕಚ್ಚಬೇಕೆಂದು ಹಾತೊರೆಯುವವು ಅದರಿಂದ ಕಹಿಯು ಅಳಿಸು ಹೋಗಿ ಮಬ್ಬು ಹಾರಿ ಹೋಗಿ ಮಧುರ ರಸವು ಇಳಿಯ ಹತ್ತುವದು.

ಈ ದುಃಖದ ಅಚ್ಚಿನಲ್ಲಿ ಬಿದ್ದ ಚೇತನಗಳಲ್ಲಿ ಎರಡು ವಿಧ. ಕೆಲವು ಬೇವು ಕಚ್ಚಿ ಬೆಲ್ಲ ಕಚ್ಚಬೇಕೆಂದು ಆತುರ ಪಡುವರು. ಇವರೇ **ಮುಕ್ತಿಯೋಗ್ಯರು** ಇನ್ನು ಕೆಲವರು ಬೇವೇ ಬೆಲ್ಲವೆಂದು ಬೆಲ್ಲದ ಗೋಜಿಗೆ ಹೋಗದೇ ಪುನಃ ಬೇವನ್ನೇ ಕಚ್ಚುವರು. ಮುಕ್ತಿಯನ್ನು ಎಂದೂ ಹೊಂದುವದಿಲ್ಲ; ನಿತ್ಯವಾಗಿ ಜನನ ಮರಣಗಳ ಚಕ್ರದಲ್ಲಿಯೇ ಗಿರಿಗಿರಿ ತಿರುಗುವದರಲ್ಲಿಯೇ ಎಲ್ಲವನ್ನೂ ಮರೆಯುವರು. ಅವರು ನಿತ್ಯ **ಸಂಸಾರಿಗಳು** ಇನ್ನು ಕೆಲವರು ದುಃಖದ ಕಷ್ಟ ಫಲಗಳನ್ನು ಭಕ್ಷಿಸಿ ಸಹಿಸಲಾರದಲೇ ಬೆಲ್ಲವನ್ನು ಹುಡುಕುವ ಬದಲು ಮದ್ಯವನ್ನು ಪ್ರಾಶನ ಮಾಡಿ ಅಮಲಿನಲ್ಲಿ ಎಲ್ಲವನ್ನು ತುಚ್ಛವಮಾಡುವರು. ಇವರೇ **ತಮೋ ಯೋಗ್ಯರು.**

ವಿಶ್ವದ ಈ ಅಗಾಧ ವೃಕ್ಷವನ್ನು ಕಣ್ಣುಮುಂದೆ ತಂದರೆ ಗದಗದ ನಡುಗುಹುಟ್ಟಿ ಅಹಂಭಾವದ ಅಂಗಿಯು ಸಡಿಲಾಗಿ ನೆಲಕ್ಕೆ ಕಳಚಿಬೀಳುವದು. ಮರೆತುಹೋದ ಆಳುತನದ ಅರುವು ಮರುಳಿ ಬರುವದು. ಮನಸ್ಸಿನ ಹೊಲಸನ್ನು ಒಡೆದು ಕಾಣುವದು. ಆದರೆ ಹೊಲಸೆಂದು ಹಳಿದು

ಕಾಗ್ಗಬೇಡಾ. ಆ ಹೊಲಸೇ ಮುಂದೆ ಆ ಅಗಾಧ ಮಹಿಮನ ನೆನಪಿನಿಂದ ಕಳಿತು ಗೊಬ್ಬರವಾಗಿ ಭಕ್ತಿಯನ್ನು ಕೊಬ್ಬಿಸುವದು ಬಳ್ಳಿಯು ಹಬ್ಬಹತ್ತಿದಂತೆ ಕುಡಿಯಲ್ಲಿ ಮಿಡಿಗಳಾಗುವವು. ಮಿಡಿಗಳು ವಿಷಯದ ಗಾಳಿಯಿಂದ ಬಾಡದಂತೆ ಮಾತ್ರ ಎಚ್ಚರಿಕೆ !

ಎಚ್ಚರಿಕೆ ಏನು? ಎಷ್ಟು ಎಚ್ಚತ್ತರೂ ಕಂಣುಗಳು ಮುಚ್ಚಿ ಒಡೆಯುವವು. ಕತ್ತಲೆಯು ಕವಿಯುವದು ಏನೂ ಕಾಣದಾಗುವದು ಆಗ ಹೊರಗಿನ ಕತ್ತಲೆಯನ್ನು ಹೋಗಲಾಡಿಸುವ ಸೂರ್ಯನಾರಾಯಣನನ್ನೇ ಮೊರೆ ಹೋಗಬೇಕು. ಅವನೇ ಎಲ್ಲವನ್ನೂ ಹುಟ್ಟಿಸಿ ಮುಟ್ಟುವಮಾಡಿ ಕಡೆಗೆ ಕಟ್ಟಿಕೊಂಡು ಹೋಗುವನು ಮೋಹದ ಮಡುವಿನಲ್ಲಿ ಮುಳುಗಿಸಿ ಆನಂದದ ಬಿಸಲಿಗೆ ಎಳೆದೊಯ್ಯುವನು. ಅವನ ಕೋರಿಕೆಯೇ ಕೋರಿಕೆಯು ! ನಮ್ಮದು ಬರೀ ತೋರಿಕೆಯು. ಅವನ ಅರಿವೇ ಅರಿವು ನಮ್ಮದು ಆಭಾಸವು ಅವನಿಗೆ ಎಣೆ ಗಾಣೆ; ಅಣೆಯರಾಗುವವರಂತೂ ಬಹುದೂರ ಅವನನ್ನೇ ನಂಬಿ ಅವನಿಗೆ ಎಲ್ಲವನ್ನು ಅರುಹಿದರೆ ಬಳ್ಳಿಯನ್ನು ಹಗಲಿರುಳು ಕಾಯ್ದು ಮಿಡಿಗಳು ದೊಡ್ಡವಾಗಲು ಅತಿ ಪ್ರೇಮದಿಂದ ಸಿಮ್ಮ ಹರಿವಾಣದಲ್ಲಿ ನೀಡುವನು. ಅವನೇಗತಿ !!

# ೧೦ ನೇ ಪ್ರಕರಣ.

## ಉಪಸಂಹಾರ.

**श्रीमन्मध्वमते हरिः परतरः सत्यंजगत्तत्वतो**
**भेदो जीवगणा हरेरनुचरा नीचोच्चभावंगताः ।**
**मुक्तिर्नैजसुखानुभूतिरमला भक्तिश्चतत्साधनं**
**ह्यक्षादि त्रितयंप्रमाणमखिलाम्नायैकवेद्योहरिः ॥**

ಆಚಾರ್ಯರ ಹತ್ತು ಪ್ರಕರಣ ಗ್ರಂಥಗಳನ್ನು ವಾಚಕರು ಸಾರಾಂಶ ರೂಪದಿಂದ ಓದಿರುವರು. ಇನ್ನು ಅವುಗಳ ಮಥಿತಾರ್ಥವೇನು ? ಸ್ವಲ್ಪ ವಿಚಾರ ಮಾಡುವಾ. ಸುಖದುಃಖಗಳಿಂದ ತುಂಬಿದ ಈ ಜಗವು ನಗೆಯೂ ಅಲ್ಲ. ಹೊಗೆಯೂ ಅಲ್ಲ. ಸರ್ವತಂತ್ರ ಸ್ವತಂತ್ರನಾದ ಪರಮಾತ್ಮನು ತನ್ನ ಇಚ್ಛೆಯಿಂದ ಈ ಜಗತ್ತನ್ನು ಹುಟ್ಟಿಸಿ ತನ್ನ ಮಹಿಮೆಯನ್ನು ವ್ಯಕ್ತಗೊಳಿಸಿದನು ಇಲ್ಲಿ ಕಾಣುವ ಪ್ರತಿಯೊಂದು ವಸ್ತುವಿನಲ್ಲಿ ಈಶನು ಒಡಮೂಡಿರುವನು. ಆದುದರಿಂದಲೇ ' ಈ ನಾಡು ದೇವರ ಬೀಡು ' **ईशावास्यमिदं सर्वम्** ಎಂದು ಉಪನಿಷತ್ತಿನಲ್ಲಿ ಹೇಳಿದ್ದಾರೆ. ಇದರಿಂದ ಈ ಅಗಾಧ ಸಂಸಾರದ **ಸೃಷ್ಟಿಕರ್ತನೇ ಶ್ರೇಷ್ಠನೆಂತಲೂ, ಸಂಸಾರವು ಸತ್ಯವೆಂತಲೂ** ಸಿದ್ಧವಾಗುವದು.

ನನಗೆ ಮೃಷ್ಟಾನ್ನವಾದರೆ ಇನ್ನೊಬ್ಬನಿಗೆ ಭಿಕ್ಷಾನ್ನ; ನನಗೆ ಸುಖ ಇನ್ನೊಬ್ಬನಿಗೆ ದುಃಖ-ಹೀಗೆ ಜಗತ್ತಿನಲ್ಲಿ ಅನುಭವಗಳು ಬೇರೆಬೇರೆ ಕಂಡು **ಬರುವದರಿಂದ ಅನುಭೋಗಿಸುವ ಜೀವರು ಬೇರೆ ಬೇರೆ ಇರಬೇ**

ಕೆಂಬ ಅನುಮಾನ ಹೊರಡುತ್ತದೆ ನಾವು ಸಂಪೂರ್ಣ ಸುಖಿಗಳಾಗಬೇಕೆಂದು ಎಷ್ಟು ಹೆಣಗಾಡಿದರೂ ದುಃಖವು ನಮ್ಮ ಬೆನ್ನು ಬಿಡದು. ಆದುದರಿಂದ ನಾವು ಯಾವಾಗಲೂ ಆ ಪರಮೇಶ್ವರನ ಇಚ್ಛೆಗೆ ಅನುವೃತ್ತಿಗಳಾಗಿರಬೇಕು. ಸಂಸಾರದಲ್ಲಿ ಹಾಕಿ ಅದರ ಕಹಿಹಣ್ಣನ್ನು ಕಚ್ಚಿಸುವಾತನೂ ಅವನೇ ! ಈ ಸಂಸಾರದಿಂದ ಬಿಡಿಸುವಾತನೂ ಅವನೇ !!

ಮುಕ್ತಿಯೇ ನಮ್ಮ ಪ್ರಯತ್ನಗಳಿಗೂ ಪರಮಾತ್ಮನ ಪ್ರಸಾದಕ್ಕೂ ಪರಮಾವಧಿಯು. ಮುಕ್ತಿಯಲ್ಲಿ ಹುಟ್ಟು ಸಾವುಗಳು ನಮ್ಮನ್ನು ತಟ್ಟಲಾರವು; ಸುಖದುಃಖಗಳಿಂದ ಕೂಡಿದ ಮೋಹವೆಂಬ ಮೃತ್ಯುವು ಅಲ್ಲಿ ದೊರೆಯದು. ಎಲ್ಲವನ್ನೂ ಇದ್ದಹಾಗೆ ತಿಳಿದು, ನಮ್ಮ ನಿಜಸ್ವರೂಪವಾದ ಆನಂದವನ್ನು ಅನುಭವಿಸುತ್ತಾ ಬಾಳುವದೇ ಮುಕ್ತಿಯೆನಿಸುವದು.

ನಮ್ಮನ್ನು ಕಟ್ಟಿಹಾಕಿದವನನ್ನು ಕಂಡು, ಅವನಿಗೆ ನೀನೇಗತಿಯೆಂದು ಬೇಡಿಕೊಂಡರೆ ನಾವು ಬಿಡುಗಡೆ ಹೊಂದಬಹುದು. ಅವನನ್ನು ತಿಳಿಯುವದೇ ಮುಂದಿನ ಮಾರ್ಗವೇ ಹೊಳೆಯದು. ತಿಳಿಯುವ ಮಾರ್ಗಗಳು ಮೂರು: ಕಣ್ಣು ಮೂಗು ಮುಂತಾದ ಇಂದ್ರಿಯಗಳಿಂದ ನಾವು ಪ್ರತ್ಯಕ್ಷವಾಗಿ ನೋಡಬಹುದು, ಯಾವಾಗಲೂ ತನ್ನ ಜೊತೆಯಲ್ಲಿರುವ ವಸ್ತುವನ್ನು ತೋರಿಸುವ ಗುರುತಿನಿಂದ ಊಹಿಸಬಹುದು; ಅಥವಾ ಹಿರಿಯರ ವಾಕ್ಯದಲ್ಲಿ ವಿಶ್ವಾಸವಿಟ್ಟು ಮನಗಾಣಬಹುದು. ನಮ್ಮನ್ನು ಕಟ್ಟಿಹಾಕಿದವನು ಪ್ರತ್ಯಕ್ಷವಾಗಿ ಕಾಣನು; ಅವನನ್ನು ಊಹಿಸಲಿಕ್ಕೆ ತಕ್ಕ ಗುರುತಗಳನ್ನೂ ನಾವು ಅರಿಯೆವು. ಇನ್ನು ಎಲ್ಲರಿಗೂ ವಂದ್ಯಳಾದ ಶ್ರುತಿಯೇ ನಮಗೆ ಅವನನ್ನು ಮನಗಾಣಿಸುವಳು.

ಈ ಶ್ರುತಿದೇವಿಗೆ ಶರಣು ಹೋಗಿ ನಮ್ಮ ಯೋಗ್ಯತಾನುಸಾರ ಅವನನ್ನು ತಿಳಿದು; ಅವನ ಪ್ರೇಮಕ್ಕೆ ಪಾತ್ರರಾಗುವಂತೆ ಎಲ್ಲ ಕೆಲಸಗಳನ್ನೂ ಆತನಿಗೆ ಒಪ್ಪಿಸಿ ಅವನ ಗುಣಾನುವಾದ ಮಾಡುತ್ತಾ ಈ ಸಂಸಾರದಲ್ಲಿ

ಜೀವಿಸಹತ್ತಿದೊಡೆ ಈ ಸಂಸಾರವು ಒಮ್ಮಿಂದೊಮ್ಮೆ ಬದಲಾಗಿ ಹೋಗುವದು. ಮೇಲುಪ್ಪರಿಗೆಯು ತುಚ್ಛವಾಗುವದು; ಗುಡಿಸಲವು ಹೆಚ್ಚಿನದಾಗುವದು; ಹೊನ್ನು ಹೆಣ್ಣು ಮಣ್ಣುಗಳು ಮೋಹದ ಮಡುವಿಗೆ ನಮ್ಮನ್ನು ಎಳೆಯುದೇ ಆನಂದಕ್ಕೆ ಅನುಕೂಲವಾಗುವವು. ಸುಖದುಃಖಗಳು ಹೊಯ್ದಾಡಿಸುವದಿಲ್ಲ. ಸಾರಾಂಶ ಪಾಲಿಗೆಬಂದದ್ದೇ ಪಂಚಾಮೃತವೆಂದು ತಿಳಿದು ಸಂತೋಷದಿಂದಿದ್ದರೆ (**इहैव तैर्जितः सर्गः एषां साम्ये स्थितंमनः** । गीता) ಭಾವೀ ಸುಖವು ಇಲ್ಲಿಯೇ ಪ್ರಾಪ್ತವಾಗಿ ಸಂಸಾರವು ಸವಿಯಾಗುವದರಲ್ಲಿ ಆಶ್ಚರ್ಯವೇನು ?

ಸಮಾಪ್ತ.

# ಪರಿಶಿಷ್ಟ.

ಶ್ರೀಮದಾನಂದ ತೀರ್ಥರ ವೇದಾಂತದ ಮೇಲುಪ್ಪರಿಗೆಗೆ ಈ ದಶಪ್ರಕರಣಗಳು ಹತ್ತು ಪಾವಟಿಗೆಗಳೆನ್ನಬಹುದು. ದಶಪ್ರಕರಣಗಳು ಯಾವವೆಂದರೆ:- (೧) ಮಾಯಾವಾದ ಖಂಡನ, (೨) ಮಿಥ್ಯಾತ್ವಾನುಮಾನ ಖಂಡನ, (೩) ಉಪಾಧಿ ಖಂಡನ, (೪) ತತ್ವವಿವೇಕ, (೫) ತತ್ವಸಂಖ್ಯಾನ, (೬) ತತ್ತ್ವೋದ್ಯೋತ, (೭) ತತ್ವನಿರ್ಣಯ, (೮) ಪ್ರಮಾಣಲಕ್ಷಣ (೯) ಕಥಾಲಕ್ಷಣ, (೧೦) ಕರ್ಮನಿರ್ಣಯ. ಇವುಗಳಲ್ಲಿ ಮೊದಲಿನ ಮೂರು ಪ್ರಕರಣಗಳು ಕೇವಲ ಖಂಡನಾತ್ಮಕವಿರುವವು; ಅಂದರೆ ಅವುಗಳಲ್ಲಿ ಎರಡನೇ ಮತಗಳ ಖಂಡನವಿರುವದೇ ಹೊರತು ಸ್ವಮತದ ಪ್ರಸ್ತಾವನೆಯು ಸಿಕ್ಕಲಾರದು. ಆಮೇಲೆ ೪ನೇ ೫ನೇ ಪ್ರಕರಣಗಳಲ್ಲಿ ತತ್ವವಿವೇಚನೆಯೇ ಹೆಚ್ಚಾಗಿರುವದು ತತ್ತ್ವೋದ್ಯೋತ, ತತ್ವನಿರ್ಣಯಗಳಲ್ಲಿ ಪುನ: ಬೇರೆ ದೃಷ್ಟಿಯಿಂದ ಮಾಯಾವಾದವನ್ನು, ಮಿಥ್ಯಾತ್ವಾನುಮಾನವನ್ನು ವಿಶದವಾಗಿ ಖಂಡಿಸಿ, ಸ್ವತತ್ವವು ಸ್ಥಾಪಿಸಲ್ಪಟ್ಟಿದೆ. ಕಡೆಯ ಮೂರು ಪ್ರಕರಣಗಳಲ್ಲಿ, ಪ್ರಮಾಣಗಳು ಯಾವು ಮತ್ತು ಎಷ್ಟು, ಕಥಾ ಎಷ್ಟು ತರಹದ್ದು ಮತ್ತು ಹ್ಯಾಗೆ ಪ್ರಾರಂಭಮಾಡಬೇಕು, ಮತ್ತು ಕರ್ಮವೆಂದರೇನು ಅದನ್ನು ಪರಮಾತ್ಮನಿಗೆ ಹೇಗೆ ನಿವೇದನೆ ಮಾಡಬೇಕು.-ಮುಂತಾದ ಅನೇಕ ವಿಷಯಗಳನ್ನು ಪ್ರತಿಪಾದಿಸಿದ್ದಾರೆ. ತತ್ವನಿರ್ಣಯವೊಂದನ್ನುಳಿದು ಬಹುಶ: ಪ್ರತಿಯೊಂದು ಪ್ರಕರಣವು ಬಹು ಸಂಕ್ಷಿಪ್ತವಾದ ಹತ್ತೆಂಟು ವಾಕ್ಯಗಳಲ್ಲಿ ಮಾತ್ರ ಸಂಪೂರ್ಣವಾಗಿರುವದು. ಶ್ರೀಮದಾಚಾರ್ಯರ ಈ ವಾಕ್ಯಗಳನ್ನಷ್ಟೇ ನೋಡಿದರೆ ಅವುಬಹು ವಿಸಂಗತವಾಗಿಯೂ, ಅರ್ಥವಿಹೀನವಾಗಿಯೂ ಕಂಡು ಬರುವವು ಆದರೆ ಶ್ರೀಮಜ್ಜಯತೀರ್ಥರ ಟೀಕೆಯಿಂದ ಎಲ್ಲವೂ ಸ್ಪಷ್ಟವಾಗಿಯೂ ಸುಸಂಗತವಾಗಿಯೂ ತಿಳಿಯುವದು. ಶ್ರೀಮದಾಚಾರ್ಯರ ಎಲ್ಲ ಗ್ರಂಥಗಳನ್ನು ಸುಗಮವಾಗಿ ಮಾಡಿದ ಈ ಜಯತೀರ್ಥರ ಅಥವಾ ಟೀಕಾಚಾರ್ಯರ ಉಪಕಾರವನ್ನು ಎಷ್ಟು ಸ್ಮರಿಸಿದರೂ ಕಡಿಮೆಯೇ ಅದೆ.